# ಕರ್ನಾಟಕ ವಿಕಾಸ
## Karnataka Vikas

ನವೆಂಬರ್ November 2019



## ರಾಜ್ಯಕ್ಕೆ 2019ರ ಇ-ಪುರಸ್ಕಾರ ಪ್ರಶಸ್ತಿ

**ಕೇಂದ್ರದಿಂದ ಸತತ 4ನೇ ಬಾರಿಗೆ ಮೊದಲನೇ ಪ್ರಶಸ್ತಿಯ ಗರಿ**




**ಚಿಂತನ ಮಂಥನ ಕಾರ್ಯಾಗಾರ**

**64 ನೇ ಕನ್ನಡ ರಾಜ್ಯೋತ್ಸವದ ಶುಭಾಶಯಗಳು**



**2018–19ನೇ**
**ಸಾಲಿನ ಸತತ**
**4ನೇ ಬಾರಿ**
**ಇ–ಪುರಸ್ಕಾರ**







**ಚಿಂತನ ಮಂಥನ**
**ಕಾರ್ಯಾಗಾರ**

# ಕರ್ನಾಟಕ ವಿಕಾಸ


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ನವೆಂಬರ್ 2019 | ಸಂಪುಟ : 60 | Volume : 60
November 2019 | ಸಂಚಿಕೆ : 12 | Issue : 12





## ಈ ಸಂಚಿಕೆಯೊಳಗೆ


ಸಚಿವಾಲಯ ಸಂದೇಶ 5

ವರದಿ

ಹೆಚ್.ವೇಣುಗೋಪಾಲ್ 7

ಎಂ.ಕೆ.ಕೆಂಪೇಗೌಡ 12

ಆಗ್ನೇಸ್ ಮೇರಿ 17

ಶ್ರೀಮತಿ ತೀರ್ಥ. ಎ, ಸಿದ್ದರಾಮಯ್ಯ, ಶಿವಕುಮಾರ್ ಎಂ ಎನ್, ಫರ್ಜಾನ ಎಂ. ಶ್ರೀಮತಿ ಗೀತಾ ಬಾಳಿಗ, ಸಿ. ಮಂಜುನಾಥ 24

ಹೆಚ್ ಆರ್ ರಾಜೇಶ್ 33

ಕೆ ಎಸ್ ಮನೋಜ್‌ಕುಮಾರ್ ಕೆ ಆರ್ ಶಂಕರ 35

ಸುನೀಲ್ ಹೆಚ್.ಕೆ (ಸಾಬಣ್ಣ) 38

ಡಾ. ಹೇಮಾಂಬರ ಎಚ್.ಎಸ್ 40

ಮುರಳಿ.ಕೆ 42

ಸುತ್ತೋಲೆ 44



ಪ್ರಕಾಶಕರು
**ಎಸ್.ಎ. ಅಶ್ರಫುಲ್ ಹಸನ್**
ನಿರ್ದೇಶಕರು (ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಪ್ರಧಾನ ಸಂಪಾದಕರು
**ಡಾ॥ ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಗ್ರಾಮೀಣ ಮೂಲಭೂತ
ಸೌಕರ್ಯ ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ
**ಗಗನ್ ಎ.ಎಸ್**

ಸಹಾಯಕ ಸಂಪಾದಕರು
**ಆಗ್ನೇಸ್ ಮೇರಿ**

ವ್ಯವಸ್ಥಾಪಕರು
**ಹೆಚ್.ಬಿ.ಗುರುಸ್ವಾಮಿ**



### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ. 100/-
ಸಂಸ್ಥೆಗಳಿಗೆ ರೂ. 120/-
ಬಿಡಿ ಪ್ರತಿ ರೂ. 10/-
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಚೇರಿ ವಿಳಾಸ

ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ.309, 3ನೇ ಮಹಡಿ, ಗೇಟ್ ನಂ.1,
ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀದಿ,
ಬೆಂಗಳೂರು - 560 001.
ದೂರವಾಣಿ: 080-22353857

### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

www.rdpr.kar.nic.in ನಲ್ಲಿ ಪತ್ರಿಕೆಯು ಲಭ್ಯವಿರುತ್ತದೆ.
Email: kvrdpr@gmail.com

# ಪತ್ರಿಕೆ ಕುರಿತು ನಿಮ್ಮ ನುಡಿ




**ಮಾನ್ಯರೆ,**

ಅಕ್ಟೋಬರ್-2019ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಮುಖಪುಟವು ಬಹಳ ಚೆನ್ನಾಗಿ ಮೂಡಿಬಂದಿದೆ. ಗ್ರಾಮ ಪಂಚಾಯತಿಗಳ ಸಾಧನೆಗಳನ್ನು ಗುರುತಿಸಿ ಪ್ರತಿ ವರ್ಷ ಗಾಂಧಿ ಗ್ರಾಮ ಪುರಸ್ಕಾರ ನೀಡಿ ಪಂಚಾಯತಿಗಳ ಕಾರ್ಯವೈಖರಿಯನ್ನು ಪ್ರೋತ್ಸಾಯಿಸುತ್ತಿರುವ ತಮ್ಮ ಕಾರ್ಯವು ಇತರರಿಗೆ ಮಾರ್ಗದರ್ಶನವಾಗಿರುವುದಲ್ಲದೆ, ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಉತ್ಸಾಹದಿಂದ ಕೆಲಸ ನಿರ್ವಹಿಸಲು ಸಹಕಾರಿಯಾಗುತ್ತದೆ. ಈ ವರ್ಷದಲ್ಲಿ ಪುರಸ್ಕಾರ ಪಡೆದಿರುವ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ.

**ಶಿವರಾಜ್ ಎಸ್. ಅವ್ವೇರಹಳ್ಳಿ, ರಾಮನಗರ**

ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಬಹಳ ಆಕರ್ಷಕವಾಗಿ ಮೂಡಿಬರುತ್ತಿದ್ದು, ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ವರದಿಗಳು ಓದುಗರಿಗೆ ಉಪಯುಕ್ತವಾಗಿವೆ. ಇಲಾಖೆ ವತಿಯಿಂದ ಗಾಂಧಿ ಗ್ರಾಮ ಪುರಸ್ಕಾರವನ್ನು ನೀಡಿ ಪಂಚಾಯತಿಗಳನ್ನು ಪ್ರೋತ್ಸಾಹಿಸುತ್ತಿರುವ ಕಾರ್ಯವು ಯಶಸ್ವಿಯಾಗಲೆಂದು ಆಶಿಸುತ್ತೇನೆ. ಗ್ರಾಮ ಪಂಚಾಯತಿಗಳ ಅಭಿವೃದ್ಧಿಗಾಗಿ ಗ್ರಾಮಸಭೆ, ವಾರ್ಡ್ ಸಭೆಗಳನ್ನು ನಡೆಸಿ ಮಾಹಿತಿ ಸಂವಹನ ನಡೆಸುತ್ತಿರುವುದು ಬಹಳ ಉಪಯುಕ್ತವಾಗಿದೆ. ಬಾಪೂಜಿ ಸೇವಾ ಕೇಂದ್ರಗಳ ಆನ್‌ಲೈನ್ ಸೇವೆಗಳ ಕುರಿತು ಸಂಪೂರ್ಣ ಮಾಹಿತಿಯ ವರದಿ ಉಪಯುಕ್ತವಾಗಿದೆ.

**ತಾಮು, ಎಫ್‌ಟಿಎಸ್ ವೃತ್ತ, ಮೈಸೂರು.**

ಮಹಾತ್ಮರ 150ನೇ ಜನ್ಮ ದಿನದ ಸಂಭ್ರಮಾಚರಣೆಯ ವಿಶಿಷ್ಟ ಸಂದರ್ಭದಲ್ಲಿ 2018-19ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯತಿಗಳಿಗೆ ಪುರಸ್ಕಾರ ನೀಡಿ ಗೌರವಿಸಿರುವುದು ಬಹಳ ಸಂತೋಷದ ವಿಷಯವೇ ಸರಿ. ರಾಜ್ಯವು ಗಾಂಧಿ ಕಂಡ ಕನಸು ನನಸು ಮಾಡುವಲ್ಲಿ ಇಲಾಖೆಯ ಶ್ರಮವು ಬಹಳಷ್ಟಿದೆ. ಹೀಗೆ ಇಲಾಖೆಯ ಹೊಸ ಹೊಸ ಯೋಜನೆಗಳನ್ನು ಕೈಗೊಂಡು ಯಶಸ್ವಿಯಾಗಲೆಂದು ಆಶಿಸುತ್ತೇನೆ.

**ಕೀರ್ತನ.ಎನ್**
**ಬಾಲವಿಕಾಸ ಇಂಟರ್‌ನ್ಯಾಷನಲ್ ಶಾಲೆ,**
**ಬೆಂಗಳೂರು.**

## ಸಚಿವಾಲಯದಿಂದ
# ಸಂದೇಶ



ಡಾ|| ಎನ್.ನಾಗಾಂಬಿಕಾ ದೇವಿ
ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಪ್ರಿಯ ಬಂಧುಗಳೇ...

## ರಾಷ್ಟ್ರೀಯ ಪಂಚಾಯತ್ ಪುರಸ್ಕಾರ - 2019

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ 2017–18ನೇ ಸಾಲಿನ ಕಾರ್ಯಕ್ಷಮತೆಯ ಮೌಲ್ಯಮಾಪನದನ್ವಯ Information & Communication Technology (ICT) tools ಗಳನ್ನು ಉಪಯೋಗಿಸಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಪಾರದರ್ಶಕತೆ (Transparency), ದಕ್ಷತೆ (Efficiency), ಉತ್ತರದಾಯಿತ್ವವನ್ನು (Accountability) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವುದಕ್ಕಾಗಿ ಕರ್ನಾಟಕ ರಾಜ್ಯಕ್ಕೆ ಇ–ಪುರಸ್ಕಾರ Category-II(B) ರಡಿ ಪ್ರಥಮ ಪ್ರಶಸ್ತಿಯನ್ನು ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರವು ನೀಡಿ ಗೌರವಿಸಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಕರ್ನಾಟಕ ಸರ್ಕಾರವು 'ಪಂಚತಂತ್ರ' ಮತ್ತು 'ಗಾಂಧಿ ಸಾಕ್ಷಿ ಕಾಯಕ' ತಂತ್ರಾಂಶದ ಮೂಲಕ ಗ್ರಾಮ ಪಂಚಾಯಿತಿಗಳ ಸಂಪೂರ್ಣ ಚಟುವಟಿಕೆಗಳನ್ನು ಸಾರ್ವಜನಿಕ ವೀಕ್ಷಣೆಗೆ ಪ್ರದರ್ಶಿಸುವ ಮೂಲಕ 'ಪಾರದರ್ಶಕತೆ' ತರಲಾಗಿದೆ. ಗ್ರಾಮ ಪಂಚಾಯತಿಗಳಲ್ಲಿ ಲೆಕ್ಕ ಪರಿಶೋಧಕ ವ್ಯವಸ್ಥೆಗಳನ್ನು ಕಾರ್ಯಗತಗೊಳಿಸಲು Double entry Accounting Systemನ್ನು ಅನುಷ್ಠಾನಗೊಳಿಸಲಾಗಿದೆ. ಇಲಾಖೆಯ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಹಂತವಾಗಿ online ಮೇಲ್ವಿಚಾರಣೆ ಮಾಡಲಾಗಿದೆ. ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಗ್ರಾಅಪ ಇಲಾಖೆಯ 24 ಸೇವೆಗಳನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ ಹಾಗೂ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿಯನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳುವ ಕೆಲಸಕ್ಕಾಗಿ Gram Panchayat Development Plan ನಲ್ಲಿ ಕ್ರಿಯಾ ಯೋಜನೆಯನ್ನು ಸೆರೆ ಹಿಡಿಯಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಪ್ರಥಮ ಸ್ಥಾನವು ಸತತವಾಗಿ ನಾಲ್ಕನೇ ಬಾರಿ ದೊರಕಿರುವುದು ಹೆಮ್ಮೆಯ ವಿಷಯವಾಗಿದೆ. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ರಾಜ್ಯ ಸರ್ಕಾರದ ಪ್ರಯತ್ನಗಳನ್ನು ಶ್ಲಾಘಿಸುತ್ತಾ, ಈ ಪುರಸ್ಕಾರವು ಮುಂದಿನ ದಿನಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಇನ್ನಷ್ಟು ಸಶಕ್ತೀಕರಣಗೊಳಿಸಲು ಉತ್ತೇಜಿಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿರುತ್ತದೆ. ಇ–ಪುರಸ್ಕಾರ ಪ್ರಥಮ ಪ್ರಶಸ್ತಿಯು ತಮ್ಮ ಮಾರ್ಗದರ್ಶನ, ಸಹಕಾರ

ಹಾಗೂ ಇಲಾಖೆಯ ಎಲ್ಲಾ ಅಧಿಕಾರಿಗಳ ಪರಿಶ್ರಮದಿಂದ ಪಡೆಯಲು ಸಾಧ್ಯವಾಗಿದ್ದು, ಮುಂದಿನ ದಿನಗಳಲ್ಲಿಯೂ ಸಹ ತಮ್ಮ ಸಹಕಾರ ಹಾಗೂ ಮಾರ್ಗದರ್ಶನ ಕೋರುತ್ತೇನೆ.

## ರಾಜ್ಯಕ್ಕೆ ಲಭಿಸಿದ ಇತರೆ ಪ್ರಶಸ್ತಿಗಳು...

ಸೇವೆಗಳು ಮತ್ತು ಸಾರ್ವಜನಿಕ ಸರಕುಗಳ ವಿತರಣೆಯನ್ನು ಸುಧಾರಿಸಲು ಮಾಡಿದ ಉತ್ತಮ ಕಾರ್ಯವನ್ನು ಗುರುತಿಸಿ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರವನ್ನು ದಾವಣಗೆರೆ ಜಿಲ್ಲಾ ಪಂಚಾಯತಿ, ಮೂಡಿಗೆರೆ ತಾಲ್ಲೂಕು ಪಂಚಾಯತಿ, ಶ್ರೀರಂಗಪಟ್ಟಣ ತಾಲ್ಲೂಕು ಪಂಚಾಯತಿ, ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ರಾಜಾನುಕುಂಟೆ ಗ್ರಾಮ ಪಂಚಾಯತಿ, ಪೆನ್ನಬೆಟ್ಟು ಗ್ರಾಮ ಪಂಚಾಯತಿಗೆ ನೀಡಲಾಗಿದ್ದು, ಗ್ರಾಮ ಸಭೆಯ ಮೂಲಕ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡಿದ ಕರಿಮುದ್ದನಹಳ್ಳಿ ಗ್ರಾಮ ಪಂಚಾಯತಿಗೆ ನಾನಾಜಿ ದೇಶ್‌ಮುಖ್ ರಾಷ್ಟ್ರ ಗೌರವ ಗ್ರಾಮ ಸಭಾ ಪುರಸ್ಕಾರ ನೀಡಲಾಗಿದ್ದು, ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆ ಪ್ರಶಸ್ತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಗುರುಪುರ ಪಂಚಾಯತಿಗೆ 2ನೇ ಸ್ಥಾನ ನೀಡಿದ್ದು ಹಾಗೂ ಮಕ್ಕಳ ಸ್ನೇಹಿ ಅಭ್ಯಾಸಗಳನ್ನು ಅಳವಡಿಸಿಕೊಂಡು ಉತ್ತಮವಾಗಿ ಕಾರ್ಯನಿರ್ವಹಿಸಿದ ಬೆಂಗಳೂರು ನಗರ ಜಿಲ್ಲೆಯ ರಾಜಾನುಕುಂಟೆ ಗ್ರಾಮ ಪಂಚಾಯತಿಗೆ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಪ್ರಶಸ್ತಿ ನೀಡಲಾಗಿದ್ದು ರಾಜ್ಯದ ಹಿರಿಮೆಯಾಗಿರುತ್ತದೆ, ಪ್ರಶಸ್ತಿ ಪಡೆದ ತಮಗೆಲ್ಲರಿಗೂ ಅಭಿನಂದಿಸುತ್ತೇನೆ.

## ಚಿಂತನ ಮಂಥನ ಸಮಾವೇಶ...

ಗಾಂಧಿ ಗ್ರಾಮ ಪುರಸ್ಕಾರವನ್ನು 2019ರ ಆಯ್ಕೆ ಪ್ರಕ್ರಿಯೆಯಲ್ಲಿ ಎಲ್ಲಾ 176 ತಾಲ್ಲೂಕುಗಳಲ್ಲಿ 1ನೇ, 2ನೇ & 3ನೇ ಸ್ಥಾನ ಗಳಿಸಿದ ಒಟ್ಟು ರಾಜ್ಯದ 528 ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿಗಳು ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ.ಕೆ.ಎಸ್.ಈಶ್ವರಪ್ಪರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ದಿನಾಂಕ:02.11.2019 ರಂದು ನಡೆದ ಚಿಂತನ ಮಂಥನ ಸಮಾವೇಶದಲ್ಲಿ ಭಾಗವಹಿಸಿದ್ದರು.

ಸರ್ಕಾರದ ಆಶಯದಂತೆ ಗ್ರಾಮಗಳ ಅಭಿವೃದ್ಧಿಗೆ ರಾಜ್ಯದ ಕೆಲವು ಗ್ರಾಮ ಪಂಚಾಯತಿಗಳಲ್ಲಿ ಅನುಸರಿಸಿರುವ ವಿನೂತನ ಪ್ರಯತ್ನಗಳು ರಾಜ್ಯದ ಇತರೆ ಗ್ರಾಮ ಪಂಚಾಯತಿಗಳಿಗೆ ವಿಸ್ತರಣೆ ಮಾಡಲು ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯತಿಗಳ ಪಾತ್ರವು ಬಹಳ ಮುಖ್ಯವಾಗಿದ್ದು, ಆಯ್ದ ಗ್ರಾಮ ಪಂಚಾಯತಿಗಳ ಸಾಧನೆಯನ್ನು ಪರಿಚಯಿಸುವ ಮೂಲಕ ರಾಜ್ಯದ ಇತರ ಗ್ರಾಮ ಪಂಚಾಯತಿಗಳು ಪ್ರೇರಣೆಗೊಳ್ಳುವಂತೆ ಮಾಡುವುದು ಈ ನೂತನ ಚಿಂತನ ಮಂಥನ ಸಮಾವೇಶದ ಆಶಯವಾಗಿರುತ್ತದೆ.

ಗ್ರಾಮ ಪಂಚಾಯತಿಗಳಲ್ಲಿ ಸಾಮಾನ್ಯ ಸಭೆ, ಗ್ರಾಮ ಸಭೆ. ಕೆಡಿಪಿ ಸಭೆಗಳನ್ನು ಕಡ್ಡಾಯವಾಗಿ ನಡೆಸುವುದು, ಕಾಲಕಾಲಕ್ಕೆ ತೆರಿಗೆ ಪರಿಷ್ಕರಣೆ ಮಾಡಿ ಶೇ.100 ರಷ್ಟು ವಸೂಲಿ ಮಾಡುವುದು, ಸೋಲಾರ್ ತಾಂತ್ರಿಕತೆ ಬಳಸಿ ವಿದ್ಯುತ್ ಬಿಲ್ಲನ್ನು ಕಡಿಮೆಗೊಳಿಸುವುದು, ಬಯಲು ವ್ಯಾಯಾಮ ಶಾಲೆ ಅಭಿವೃದ್ಧಿಗೊಳಿಸುವುದು, ಉದ್ಯೋಗ ಖಾತರಿ ಯೋಜನೆಯಡಿ ಅಂಗನವಾಡಿ, ಶಾಲೆಗಳ ಕಾಂಪೌಂಡ್ ನಿರ್ಮಾಣ, ಕೈತೋಟ ಅಭಿವೃದ್ಧಿ, ಸ್ತ್ರೀಶಕ್ತಿ ಗುಂಪುಗಳಿಗೆ ವರ್ಕ್ ಶೆಡ್‌ಗಳ ನಿರ್ಮಾಣವನ್ನು ಕೈಗೊಳ್ಳುವುದು, ಗ್ರಾಮ ಪಂಚಾಯತಿಗಳ ಲೈಬ್ರರಿಗಳನ್ನು ಡಿಜಿಟಲ್ ಲೈಬ್ರರಿಗಳನ್ನಾಗಿ ಉನ್ನತೀಕರಿಸುವುದು, ಪ್ಲಾಸ್ಟಿಕ್ ನಿಷೇದವನ್ನು ಕಡ್ಡಾಯಗೊಳಿಸುವುದು, ಅಂಗನವಾಡಿ ಹಾಗೂ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯವನ್ನು ಒದಗಿಸುವುದು ಮುಂತಾದ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲೂ ಈ ನಿರ್ಣಯಗಳನ್ನು ಅನುಷ್ಠಾನ ಮಾಡಿ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಕೈಜೋಡಿಸುತ್ತೀರೆಂದು ಆಶಿಸುತ್ತೇನೆ.

(ಡಾ॥ ಎನ್. ನಾಗಾಂಬಿಕಾ ದೇವಿ)

ವರದಿ




ಹೆಚ್.ವೇಣುಗೋಪಾಲ್

ಸಂಶೋಧನಾಧಿಕಾರಿ
ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ
ಮತ್ತು ಅಭಿವೃದ್ಧಿ ಸಮಿತಿ


**ಸಾರ್ವಜನಿಕ ಸೇವೆಗಳು ಮತ್ತು ಸರಕುಗಳ ವಿತರಣೆಯನ್ನು ಸುಧಾರಿಸಲು ಪ್ರತಿ ಹಂತದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮಾಡುವ ಉತ್ತಮ ಕಾರ್ಯಗಳನ್ನು ಗುರುತಿಸಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರವನ್ನು ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ನೀಡಲಾಗುತ್ತದೆ.**

# ರಾಷ್ಟ್ರೀಯ ಪಂಚಾಯತ್ ಪುರಸ್ಕಾರ 2019

ಭಾರತ ಸಂವಿಧಾನಕ್ಕೆ ಮಾಡಲಾದ 73ನೇ ತಿದ್ದುಪಡಿಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಂಗೀಕರಿಸಿದ ದಿನವಾದ ಏಪ್ರಿಲ್ 24 ರಂದು ಪ್ರತೀ ವರ್ಷ "ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್" ಎಂದು ಆಚರಿಸಲಾಗುತ್ತಿದೆ. 73ನೇ ಸಂವಿಧಾನಿಕ ತಿದ್ದುಪಡಿಯು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಪಂಚಾಯಿತಿಗಳಿಗೆ ಸಾಂವಿಧಾನಿಕ ಸ್ಥಾನಮಾನ ನೀಡಿ ಮತ್ತು ಮೂರು ಹಂತದ ಆಡಳಿತದಿಂದ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದ ಬಲವರ್ಧನೆಗೆ ಕಾರಣವಾಗಿದೆ. ಇದರಿಂದ ಸಂಪನ್ಮೂಲಗಳು, ಜವಾಬ್ದಾರಿಗಳು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಸರ್ಕಾರದಿಂದ ಸ್ಥಳೀಯ ಮಟ್ಟಕ್ಕೆ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಹಂಚಲಾಗುತ್ತಿದೆ.

ಪಂಚಾಯತ್ ರಾಜ್ ಮಂತ್ರಾಲಯವು ಪಂಚಾಯಿತಿಗಳು ಸಾಧಿಸಿದ ಸಾಧನೆಗಾಗಿ ರಾಷ್ಟ್ರೀಯ ಪಂಚಾಯತ್ ಪುರಸ್ಕಾರ್ ಪ್ರಶಸ್ತಿಗಳನ್ನು ಪ್ರತಿ ವರ್ಷ ಏಪ್ರಿಲ್ 24 ರಂದು ನೀಡಲಾಗುತ್ತಿದೆ. 2017-18ನೇ ಸಾಲಿನಲ್ಲಿ ಪಂಚಾಯಿತಿಗಳು ಸಾಧಿಸಿದ ಸಾಧನೆಗಾಗಿ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಪ್ರಸ್ತುತ ವರ್ಷ 2019 ರಲ್ಲಿ ನವದೆಹಲಿಯ 'ಪುಸಾ' ಪ್ರದೇಶದಲ್ಲಿರುವ ರಾಷ್ಟ್ರೀಯ ಕೃಷಿ ವಿಜ್ಞಾನ ಸಂಕೀರ್ಣದ ಸಿ. ಸುಬ್ರಹ್ಮಣ್ಯಂ ಸಭಾಂಗಣದಲ್ಲಿ ದಿನಾಂಕ 23-10-2019 ರಂದು ನೆರವೇರಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಪಂಚಾಯತ್ ರಾಜ್ ಮಂತ್ರಾಲಯದಿಂದ ಪ್ರತಿ ವರ್ಷ ನೀಡಲಾಗುವ ಇ-ಪಂಚಾಯತ್ ಪುರಸ್ಕಾರ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ, ನಾನಾಜಿ ದೇಶ್‌ಮುಖ್ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ ಹಾಗೂ ಪ್ರಸ್ತುತ ಸಾಲಿನಲ್ಲಿ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಪುರಸ್ಕಾರ"




**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ.ಕೆ.ಎಸ್.ಈಶ್ವರಪ್ಪರವರು ತಮ್ಮ ಇಲಾಖೆಯ ಮುಖ್ಯಸ್ಥರುಗಳಾದ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ನಾಗಾಂಬಿಕಾದೇವಿ, ಭಾ.ಆ.ಸೇ. ಮತ್ತು ಶ್ರೀಮತಿ ಉಮಾಮಹದೇವನ್, ಭಾ.ಆ.ಸೇ. ರವರೊಂದಿಗೆ ಪ್ರಥಮ ಸ್ಥಾನ ಪಡೆದ ಇ-ಪಂಚಾಯತ್ ಪುರಸ್ಕಾರ ಪ್ರಶಸ್ತಿಯನ್ನು ಮಾನ್ಯ ಪಂಚಾಯತ್ ರಾಜ್ ಮಂತ್ರಾಲಯ ಸಚಿವರಾದ ಶ್ರೀ.ತೋಮರ್ ಸಿಂಗ್ ರವರಿಂದ ವೇದಿಕೆಯಲ್ಲಿ ಸ್ವೀಕರಿಸಿದರು.**

ಗಳಿಗೆ ಆಯ್ಕೆಯಾಗಿರುವ ಪಂಚಾಯತ್ ರಾಜ್ ಸಂಸ್ಥೆಗಳನ್ನು ಮಾನ್ಯ ಕೇಂದ್ರ ಪಂಚಾಯತ್ ರಾಜ್ ಮಂತ್ರಾಲಯ ಸಚಿವರಾದ ಶ್ರೀ ನರೇಂದ್ರ ಸಿಂಗ್ ತೋಮಾರ್ ರವರ ಅಧ್ಯಕ್ಷತೆಯಲ್ಲಿ ಪುರಸ್ಕರಿಸಲಾಯಿತು. ಸದರಿ ಸಮಾರಂಭದಲ್ಲಿ ಕರ್ನಾಟಕ, ತಮಿಳುನಾಡು, ಛತ್ತಿಸ್‌ಗಡ್ ಮತ್ತು ಅಸ್ಸಾಂ ರಾಜ್ಯಗಳ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರುಗಳು ಸಮಾರಂಭದಲ್ಲಿ ಪಾಲ್ಗೊಂಡು ಆಯಾ ರಾಜ್ಯಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಸಾಧಿಸಿದ ಸಾಧನೆಯ ಕುರಿತು ಮಾತನಾಡಿ ಹಾಗೂ ಕೇಂದ್ರ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳ ಬಲವರ್ಧನೆಗೆ ನೀಡುತ್ತಿರುವ ಪ್ರೋತ್ಸಾಹವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

### ಇ–ಪಂಚಾಯತ್ ಪುರಸ್ಕಾರ:

2017–18ನೇ ಸಾಲಿನಲ್ಲಿ ಪಂಚಾಯತಿಗಳನ್ನು ಸಬಲೀಕರಣ ಗೊಳಿಸಲು ಮಾಹಿತಿ ಮತ್ತು ಸಂವಹನ ಸಾಧನ ಪರಿಕರಗಳ ಬಳಕೆಯನ್ನು ಸಮರ್ಥವಾಗಿ ನಿರ್ವಹಿಸುವುದರಲ್ಲಿ ಉತ್ತಮ ಸಾಧನೆ ಮಾಡಿರುವ ರಾಜ್ಯವೆಂದು ಪ್ರವರ್ಗ–2–ಬಿ ರಡಿಯಲ್ಲಿ ಪ್ರಥಮ ಸ್ಥಾನ ಪುರಸ್ಕಾರವನ್ನು 2019ರಲ್ಲಿ ಪಡೆದಿದೆ. ರಾಜ್ಯಗಳಲ್ಲಿ ಕಾರ್ಯವೈಖರಿ, ಬದ್ಧತೆ, ಪಾರದರ್ಶಕತೆ ಹಾಗೂ ಹೊಣೆಗಾರಿಕೆಯನ್ನು ತರುವ ಉದ್ದೇಶದಿಂದ ಇ–ಪಂಚಾಯತ್ ಪುರಸ್ಕಾರವನ್ನು ರಾಷ್ಟ್ರದ ಎಲ್ಲಾ ರಾಜ್ಯಗಳು / ಕೇಂದ್ರ ಆಡಳಿತ ಪ್ರದೇಶಗಳಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಇ–ಸಕ್ರಿಯಗೊಳಿಸುವಿಕೆಯನ್ನು ಉತ್ತೇಜಿಸಲು ನೀಡಲಾಗುತ್ತದೆ. ಪಂಚಾಯತ್ ಎಂಟರ್‌ಪ್ರೈಸ್ (ಪಿ.ಇ.ಎಸ್) ಸೂಟ್ ಅಪ್ಲಿಕೇಶನ್‌ಗಳು ರಾಜ್ಯ ಅಥವಾ ಕೇಂದ್ರ ಆಡಳಿತ ಪ್ರದೇಶಗಳು ನಿರ್ದಿಷ್ಠ ಸಾಫ್ಟ್‌ವೇರ್‌ನ ಅನ್ವಯಿಕೆಗಳನ್ನು ಅಳವಡಿಸಿಕೊಂಡು ಮತ್ತು ಕಾರ್ಯಗತಗೊಳಿಸಲು ಪಂಚಾಯಿತಿಗಳು ಮತ್ತು ತತ್ಸಮಾನವಾದ ಗ್ರಾಮೀಣ ಸ್ಥಳೀಯ ಆಡಳಿತಗಳ ಆಂತರಿಕ ಕೆಲಸದ ಹರಿವಿನ ಪ್ರಕ್ರಿಯೆಗಳನ್ನು ಸ್ವಯಂಚಾಲಿತಗೊಳಿಸಲು, ಹೆಚ್ಚು ಪಾರದರ್ಶಕವಾಗುವಂತೆ ಸೇವೆಗಳ ಎಲೆಕ್ಟ್ರಾನಿಕ್ ವಿತರಣೆಯನ್ನು ಸಕ್ರಿಯಗೊಳಿಸಲು ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳನ್ನು ಉತ್ತೇಜಿಸಲು ಇ–ಪಂಚಾಯತ್ ಪುರಸ್ಕಾರವನ್ನು ನೀಡಲಾಗುತ್ತದೆ. ಇ–ಪಂಚಾಯತ್ ಅರ್ಜಿಗಳನ್ನು ಅಳವಡಿಸಿಕೊಳ್ಳುವುದು ಮತ್ತು ಅನುಷ್ಠಾನಗೊಳಿಸುವ ಮೂಲಕ ವಿಕೇಂದ್ರೀಕರಣ ಸ್ವಯಂ ಆಡಳಿತ ಸಂಸ್ಥೆಗಳ ಅಂಗಗಳಾಗಿ ಜವಾಬ್ದಾರಿಯುತವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು. ಈ ಪ್ರಶಸ್ತಿಗೆ ಯಾವುದೇ ಆರ್ಥಿಕ ಪ್ರೋತ್ಸಾಹವಿಲ್ಲ. ಈ ವರ್ಷದ ಇ–ಪಂಚಾಯತ್ ಪುರಸ್ಕಾರ ರಾಜ್ಯಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. ಮೊದಲನೇ ವರ್ಗದಲ್ಲಿ ಕೇಂದ್ರ ಸರ್ಕಾರದ ಪಂಚಾಯತ್ ಎಂಟರ್‌ಪ್ರೈಸ್ (ಪಿ.ಇ.ಎಸ್) ಸೂಟ್ ಅಪ್ಲಿಕೇಶನ್‌ಗಳನ್ನು ಬಳಕೆ ಮಾಡಿದ ರಾಜ್ಯಗಳು ಎರಡನೇ ವರ್ಗ ಎ ಅಡಿಯಲ್ಲಿ ಕೇಂದ್ರ ಸರ್ಕಾರದ ಪಂಚಾಯತ್ ಎಂಟರ್‌ಪ್ರೈಸ್ (ಪಿ.ಇ.ಎಸ್) ಸೂಟ್ ಅಪ್ಲಿಕೇಶನ್‌ಗಳು ಮತ್ತು ಇದೇ ರೀತಿ ಕ್ರಿಯಾತ್ಮಕತೆಯನ್ನು ಒದಗಿಸುವ ರಾಜ್ಯ ನಿರ್ದಿಷ್ಟ ಅಪ್ಲಿಕೇಶನ್‌ಗಳ ಬಳಕೆ ಪ್ರಮಾಣ 3 ಕ್ಕಿಂತ ಕಡಿಮೆ ಇರುವುದು. ಮೂರನೇ ವರ್ಗ ಬಿ ಅಡಿಯಲ್ಲಿ ಕೇಂದ್ರ ಸರ್ಕಾರದ ಪಂಚಾಯತ್ ಎಂಟರ್‌ಪ್ರೈಸ್ (ಪಿ.ಇ.ಎಸ್) ಸೂಟ್ ಅಪ್ಲಿಕೇಶನ್‌ಗಳು ಮತ್ತು ಇದೇ ರೀತಿ ಕ್ರಿಯಾತ್ಮಕತೆಯನ್ನು ಒದಗಿಸುವ ರಾಜ್ಯ ನಿರ್ದಿಷ್ಟ ಅಪ್ಲಿಕೇಶನ್‌ಗಳ ಬಳಕೆ ಪ್ರಮಾಣ 3 ಕ್ಕಿಂತ ಹೆಚ್ಚು ಇರುವುದು. ಕೇಂದ್ರ ಸರ್ಕಾರವು ರಾಜ್ಯಗಳ ಸ್ಪರ್ಧೆಯನ್ನು ಹೆಚ್ಚು ತೀವ್ರಗೊಳಿಸಲು ಈ ರೀತಿಯಾಗಿ ವಿಂಗಡಿಸಲಾಗಿದೆ ಹಾಗೂ ಈ ಕೆಳಗಿನ ಆಧಾರದ ಮೇಲೆ ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ.

1. ಲೆಕ್ಕಪರಿಶೋಧನೆ, ಯೋಜನೆ, ಕಾರ್ಯಗಳ ಮೇಲ್ವಿಚಾರಣೆ, ಸೇವೆಗಳ ಎಲೆಕ್ಟ್ರಾನಿಕ್ ವಿತರಣೆ, ಸಾಮಾಜಿಕ ಲೆಕ್ಕಪರಿಶೋಧನೆ, ಇತ್ಯಾದಿಗಳ ಪಿ.ಇ.ಎಸ್ ಅಪ್ಲಿಕೇಶನ್‌ಗಳ ನೈಜ ಬಳಕೆಗೆ ಸಂಬಂಧಿಸಿದಂತೆ ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳ ಕಾರ್ಯಕ್ಷಮತೆ ಹಾಗೂ ಅವುಗಳಿಗೆ ಅನುಗುಣವಾದ ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳ ನಿರ್ದಿಷ್ಟ ಅಪ್ಲಿಕೇಶನ್‌ಗಳಿಗೆ ತೂಕವನ್ನು ಸಹ ನೀಡಲಾಗುತ್ತದೆ.
2. ಇ–ಪಂಚಾಯತ್ ಎಂ.ಎಂ.ಪಿ ಯಿಂದ ಹೊರಬರಲು ಮತ್ತು ಪಂಚಾಯಿತಿಗಳಿಗಾಗಿ ಯಾವುದೇ ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳ ನಿರ್ದಿಷ್ಟ ಸಾಫ್ಟ್‌ವೇರ್ ಅಪ್ಲಿಕೇಶನ್‌ನ ಕಾರ್ಯಾಚರಣೆಗಾಗಿ ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳು ತೆಗೆದುಕೊಂಡ ನವೀನ ಕ್ರಮಗಳು.

ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನದಡಿ ಪಂಚಾಯತಿಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಮತ್ತು ದೇಶದ ಅತ್ಯುತ್ತಮ ಸಾಧನೆ ಮಾಡುವ ಪಂಚಾಯತಿಗಳು ಮತ್ತು ರಾಜ್ಯ / ಕೇಂದ್ರ ಆಡಳಿತ ಪ್ರದೇಶಗಳು ಸರಿಯಾಗಿ ಗುರುತಿಸಿ ಪ್ರಶಸ್ತಿ ನೀಡುವ ಮೂಲಕ ಅವುಗಳನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ಪಂಚಾಯತ್ ರಾಜ್ ಮಂತ್ರಾಲಯವು ಪ್ರಜ್ಞಾಪೂರ್ವಕವಾಗಿ ಪ್ರಯತ್ನಗಳನ್ನು ನಡೆಸುತ್ತಿದೆ. ಇಡೀ ರಾಷ್ಟ್ರದಲ್ಲಿ ಸರಿಸುಮಾರು 2.60 ಲಕ್ಷ ಪಂಚಾಯತಿಗಳು ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪಂಚಾಯತಿಗಳಾಗಿ ರಾಷ್ಟ್ರಾದ್ಯಂತ ಮಾನ್ಯತೆ ಪಡೆದಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಸ್ಥಳೀಯ ಆಡಳಿತವನ್ನು ಉತ್ತೇಜಿಸಲು ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಸಾಮಾನ್ಯ ಹಾಗೂ ವಿವಿಧ ವಿಷಯಾಧಾರಿತ ವಿಷಯಗಳಲ್ಲಿ ಅತ್ಯುತ್ತಮ ಪ್ರಯತ್ನಗಳನ್ನು




**ನಿರ್ದೇಶಕರು ಹಾಗೂ ಪಂಚಾಯತಿಯ ಅಧ್ಯಕ್ಷರುಗಳು ಪ್ರಶಸ್ತಿ ಫಲಕಗಳೊಂದಿಗೆ ಸಭಾಂಗಣದ ಮುಂದೆ ಖುಷಿಯಿಂದ ಸಂಭ್ರಮಿಸಿದ ಸಂದರ್ಭ.**

ಮಾಡಲು ಪ್ರೋತ್ಸಾಹಿಸುತ್ತದೆ. ಇದರಿಂದ ಸ್ಥಳೀಯ ಮಟ್ಟದ ಆಡಳಿತದಲ್ಲಿ ಪರಿವರ್ತನಾ ಕ್ರಮಗಳನ್ನು ತೆಗೆದುಕೊಳ್ಳಲು ಪ್ರೇರಣೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

## ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ

ಸಾರ್ವಜನಿಕ ಸೇವೆಗಳು ಮತ್ತು ಸರಕುಗಳ ವಿತರಣೆಯನ್ನು ಸುಧಾರಿಸಲು ಪ್ರತಿ ಹಂತದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮಾಡುವ ಉತ್ತಮ ಕಾರ್ಯಗಳನ್ನು ಗುರುತಿಸಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರವನ್ನು ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ನೀಡಲಾಗುತ್ತದೆ. ಪ್ರಸ್ತುತ ಸಾಲಿನಲ್ಲಿ ಸಾಮಾನ್ಯ ಮತ್ತು ವಿಷಯಾಧಾರಿತ ವಿಭಾಗಗಳಿಗೆ ಡಿ.ಡಿ.ಯು.ಪಿ.ಎಸ್.ಪಿಗೆ ನಾಮನಿರ್ದೇಶನ ಸ್ವೀಕರಿಸಲಾಗಿದೆ. ಒಟ್ಟು ಡಿ.ಡಿ.ಯು.ಪಿ.ಎಸ್.ಪಿ ಪ್ರಶಸ್ತಿಗಳಲ್ಲಿ ಮೂರನೇ ಒಂದು ಭಾಗವನ್ನು ವಿಷಯಾಧಾರಿತ ಪ್ರಶಸ್ತಿಗಳ ವಿಭಾಗಗಳಲ್ಲಿ ನೀಡಲಾಗಿದೆ. ನೈರ್ಮಲ್ಯ, ಸಿವಿಕ್ ಸೇವೆಗಳು (ಕುಡಿಯುವ ನೀರು, ಬೀದಿ ದೀಪ, ಮೂಲ ಸೌಕರ್ಯ), ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಅಂಚಿನಲ್ಲಿರುವ ವಿಭಾಗ (ಮಹಿಳೆಯರು, ಎಸ್.ಸಿ/ಎಸ್.ಟಿ, ಅಂಗವಿಕಲರು, ಹಿರಿಯ ನಾಗರಿಕರು, ಸಾಮಾಜಿಕ ವಲಯದ ಕಾರ್ಯಕ್ಷಮತೆ, ವಿಪತ್ತು ನಿರ್ವಹಣೆ, ಸಿಬಿಒಗಳು/ಸ್ವಯಂಪ್ರೇರಿತ ಕ್ರಮಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ಗ್ರಾಮ ಪಂಚಾಯಿತಿಗಳು, ಆದಾಯ ಉತ್ಪಾದನೆಯಲ್ಲಿ ನಾವಿನ್ಯತೆ ಮತ್ತು ಇ–ಆಡಳಿತವನ್ನು ಬೆಂಬಲಿಸಲು ಡಿ.ಡಿ.ಯು.ಪಿ.ಎಸ್.ಪಿ ಯನ್ನು ಗರಿಷ್ಠ 120 ಅಂಕಗಳ ಪ್ರಶ್ನಾವಳಿಗಳಿಂದ ನಿರ್ಣಯಿಸಲಾಗುತ್ತದೆ. ಅದರಲ್ಲಿ ಸಾಮಾನ್ಯ ಪ್ರಶ್ನಾವಳಿಗೆ 100 ಅಂಕಗಳು ಮತ್ತು ವಿಷಯಾಧಾರಿತ ಪ್ರಶ್ನಾವಳಿಗೆ 20 ಅಂಕಗಳು.

ಈ ವಿಭಾಗದಲ್ಲಿ ಪಂಚಾಯಿತಿಗಳು ಪ್ರಶಸ್ತಿ ಪಡೆಯಲು ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರವು ರೂಪಿಸಿರುವ ಪಂಚಾಯತ್ ಪ್ರಶಸ್ತಿಯ ವೆಬ್‌ಸೈಟ್ ನಲ್ಲಿ ಆನ್‌ಲೈನ್ ಮೂಲಕ 120 ಅಂಕಗಳ ಪ್ರಶ್ನಾವಳಿಗಳಿಗೆ ಸೂಕ್ತ ದಾಖಲೆಯೊಂದಿಗೆ ಮಾಹಿತಿಯನ್ನು ತುಂಬಬೇಕು. ಕರ್ನಾಟಕ ರಾಜ್ಯದಲ್ಲಿ 2018–19 ನೇ ಸಾಲಿನಲ್ಲಿ ಪಂಚಾಯಿತಿಗಳು ಸಾಧಿಸಿದ ಸಾಧನೆಗಾಗಿ ಸ್ವಯಂ ಮೌಲ್ಯಮಾಪನದೊಂದಿಗೆ ಮೊದಲ ಹಂತದಲ್ಲಿ ಒಟ್ಟು 16 ಜಿಲ್ಲಾ ಪಂಚಾಯಿತಿಗಳು, 45 ತಾಲ್ಲೂಕು ಪಂಚಾಯಿತಿಗಳು ಮತ್ತು 686 ಗ್ರಾಮ ಪಂಚಾಯಿತಿಗಳು ಸ್ಪರ್ಧೆ ಮಾಡಿದ್ದವು. ಎರಡನೇ ಹಂತದಲ್ಲಿ ತಾಲ್ಲೂಕು ಮಟ್ಟದ ಮೌಲ್ಯಮಾಪನ ಸಮಿತಿಯು ಸ್ಪರ್ಧೆ ಮಾಡಿದ ಸದರಿ ಪಂಚಾಯಿತಿಗಳನ್ನು ಮೌಲ್ಯಮಾಪನ ಮಾಡಿ ಮುಂದಿನ ಹಂತವಾದ ಜಿಲ್ಲಾ ಮಟ್ಟದ ಸಮಿತಿಗೆ 11 ತಾಲ್ಲೂಕು ಪಂಚಾಯಿತಿಗಳು ಹಾಗೂ 38 ಗ್ರಾಮ ಪಂಚಾಯಿತಿಗಳನ್ನು ಶಿಪಾರಸ್ಸು ಮಾಡಲಾಯಿತು. ಜಿಲ್ಲಾ ಮಟ್ಟದ ಮೌಲ್ಯಮಾಪನ ಸಮಿತಿಯು ಕ್ಷೇತ್ರ ಭೇಟಿ ಮೂಲಕ ಮೌಲ್ಯಮಾಪನ ಮಾಡಲು ರಾಜ್ಯ ತಂಡಕ್ಕೆ 3 ಜಿಲ್ಲಾ ಪಂಚಾಯಿತಿಗಳು, 6 ತಾಲ್ಲೂಕು ಪಂಚಾಯಿತಿಗಳು ಮತ್ತು 9 ಗ್ರಾಮ ಪಂಚಾಯಿತಿಗಳನ್ನು ಶಿಫಾರಸ್ಸು

| ಡಿ.ಡಿ.ಯು.ಪಿ.ಎಸ್.ಪಿ ಪುರಸ್ಕಾರ | ಗ್ರಾಮ ಪಂಚಾಯಿತಿ | ತಾಲ್ಲೂಕು | ಜಿಲ್ಲೆ |
|---|---|---|---|
| ದಾವಣಗೆರೆ ಜಿಲ್ಲಾ ಪಂಚಾಯಿತಿ | – | – | ದಾವಣಗೆರೆ |
| ಶ್ರೀರಂಗಪಟ್ಟಣ ತಾಲ್ಲೂಕು ಪಂಚಾಯಿತಿ | – | ಶ್ರೀರಂಗಪಟ್ಟಣ | ಮಂಡ್ಯ |
| ಮೂಡಿಗೆರೆ ತಾಲ್ಲೂಕು ಪಂಚಾಯಿತಿ | – | ಮೂಡಿಗೆರೆ | ಚಿಕ್ಕಮಗಳೂರು |
| ರಾಜಾನುಕುಂಟೆ ಗ್ರಾಮ ಪಂಚಾಯಿತಿ | ರಾಜಾನುಕುಂಟೆ | ಬೆಂಗಳೂರು ಉತ್ತರ ತಾಲ್ಲೂಕು | ಬೆಂಗಳೂರು ನಗರ |
| ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ | ಬಾಶೆಟ್ಟಿಹಳ್ಳಿ | ದೊಡ್ಡಬಳ್ಳಾಪುರ ತಾಲ್ಲೂಕು | ಬೆಂಗಳೂರು ಗ್ರಾಮಾಂತರ |

ಮಾಡಲಾಯಿತು. ಕ್ಷೇತ್ರ ಭೇಟಿ ನೀಡಿದ ರಾಜ್ಯ ತಂಡವು ಸದರಿ ಪಂಚಾಯಿತಿಗಳಿಗೆ ಭೇಟಿ ನೀಡಿ ಪಂಚಾಯಿತಿಗಳು ಪ್ರತಿ ಪ್ರಶ್ನಾವಳಿಗೆ ಉತ್ತರಿಸಿದ ಮಾಹಿತಿ ಮತ್ತು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಿ ಮುಂದಿನ ಹಂತವಾದ ರಾಜ್ಯ ಪಂಚಾಯತ್ ಕಾರ್ಯಕ್ಷಮತೆ ಮೌಲ್ಯಮಾಪನ ಸಮಿತಿ ಮುಂದೆ ಮಂಡಿಸಲಾಯಿತು. ರಾಜ್ಯ ಪಂಚಾಯತ್ ಕಾರ್ಯಕ್ಷಮತೆ ಮೌಲ್ಯಮಾಪನ ಸಮಿತಿಯು ಪುರಸ್ಕಾರ ಪಡೆಯಲು ಅಂತಿಮವಾಗಿ ರಾಷ್ಟ್ರ ಮಟ್ಟದ ಕ್ಷೇತ್ರ ಪರಿಶೀಲನೆ ಮೌಲ್ಯಮಾಪನ ಹಂತಕ್ಕೆ ನಾಮ ನಿರ್ದೇಶನ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಯಿತು. ರಾಜ್ಯ ನಾಮನಿರ್ದೇಶನಗೊಂಡ ಪಂಚಾಯಿತಿಗಳಿಗೆ ರಾಷ್ಟ್ರ ಮಟ್ಟದ ಕ್ಷೇತ್ರ ಪರಿಶೀಲನೆ ಮೌಲ್ಯಮಾಪನ ತಂಡವು ಭೇಟಿ ನೀಡಿ ಮೇಲೆ ವಿವರಿಸಿದಂತೆ ಎಲ್ಲಾ ಹಂತಗಳಲ್ಲಿ ಪಂಚಾಯಿತಿಗಳು ಪುರಸ್ಕಾರಕ್ಕೆ ಅರ್ಹತೆ ಹೊಂದಿರುವುದನ್ನು ಖಚಿತಪಡಿಸಿಕೊಂಡು ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರವು 2017–18 ನೇ ಸಾಲಿನ ಸಾಧನೆಗಾಗಿ ಈ ಕೆಳಗಿನ ಕೋಷ್ಟಕದಲ್ಲಿರುವ ಪಂಚಾಯಿತಿಗಳಿಗೆ ಪ್ರಶಸ್ತಿ ನೀಡಲಾಗಿದೆ.

## ನಾನಾಜಿ ದೇಶ್‌ಮುಖ್ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ:

ಗ್ರಾಮ ಸಭೆಗಳನ್ನು ಒಳಗೊಳ್ಳುವ ಮೂಲಕ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಗ್ರಾಮ ಪಂಚಾಯಿತಿಗಳು ನೀಡಿದ ಅತ್ಯುತ್ತಮ ಕೊಡುಗೆಗಾಗಿ ನಾನಾಜಿ ದೇಶ್‌ಮುಖ್ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರವನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗುತ್ತದೆ.

ನಾನಾಜಿ ದೇಶ್‌ಮುಖ್ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರವು ಕರೀಮುದ್ದನಹಳ್ಳಿ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆಗೆ 2017–18 ನೇ ಸಾಲಿಗೆ ಈ ಕೆಳಕಂಡ ಸಾಧನೆಗಾಗಿ ಪುರಸ್ಕಾರ ಲಭಿಸಿದೆ.

- **ಆದ್ಯತೆಯ ನಕಾಶೆಗಳ ಹೊಂದಾಣಿಕೆ ಮಾಡಿರುವುದು.**
- **ಯುವ ಜನರು, ಮಹಿಳೆಯರು ಹಾಗೂ ಆಸಕಿಯುಳ್ಳ ವ್ಯಕ್ತಿಗಳನ್ನು ಒಗ್ಗೂಡಿಸಿ ಗ್ರಾಮ ಅಭಿವೃದ್ಧಿ ಸಮಿತಿಗಳ ರಚನೆ.**
- **ಸಾಮಾಜಿಕ ಸಜ್ಜುಗೊಳಿಸುವಿಕೆ ಹಾಗೂ ಸಾಮರ್ಥ್ಯಾಭಿವೃದ್ಧಿಗಾಗಿ ಯೋಜನೆ ರೂಪಿಸಿರುವುದು.**
- **ಗ್ರಾಮ ಹಾಗೂ ವಾರ್ಡ್ ಸಭೆಗಳನ್ನು ಸಶಕ್ತೀಕರಣಗೊಳಿಸಿ ಸಂಭಾಷಣೆಗಳನ್ನು ಪ್ರಾರಂಭಿಸಿರುವುದು.**
- **ಸೇವೆಗಳ ಸಮರ್ಪಕ ವಿಲೇವಾರಿಗೆ ಟಾಸ್ಕ್ ಫೋರ್ಸ್ ರಚನೆ.**
- **ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ 38 ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಸಕಾಲದಲ್ಲಿ ಸಮಗ್ರ**



**ಅಧ್ಯಕ್ಷರು, ಜಿಲ್ಲಾ ಪಂಚಾಯತ್, ದಾವಣಗೆರೆ ಜಿಲ್ಲೆ ರವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪ ರವರೊಂದಿಗೆ ಪ್ರಶಸ್ತಿ ಫಲಕದೊಂದಿಗೆ ಸಂಭ್ರಮಿಸುತ್ತಿರುವುದು.**

ಅಭಿವೃದ್ಧಿಗೆ ಒತ್ತು.

- ಪ್ರತಿಯೊಂದು ಕಾರ್ಯಚಟುವಟಿಕೆಗೆ ನಿಗದಿತ ಸಮಯ ಗುರುತಿಸುವಿಕೆ.
- ಪ್ರತಿಯೊಂದು ಇಲಾಖೆಯ ಕಾರ್ಯಕ್ರಮಗಳ ಕಾರ್ಯಾಚರಣೆಗೆ ಒತ್ತು.
- ಪ್ರಕ್ರಿಯೆಗಳ ಆರೈಕೆಯ ಉಸ್ತುವಾರಿ ಮತ್ತು ತರ್ಕಬದ್ಧಗೊಳಿಸುವಿಕೆಗೆ ಒತ್ತು.
- ಗ್ರಾಮ ಪಂಚಾಯತಿಗಳು ಯೋಜನೆ ರೂಪಿಸುವಿಕೆ, ಸಜ್ಜುಗೊಳಿಸುವಿಕೆ, ಕಾರ್ಯಾಚರಣೆ ಹಾಗೂ ತರ್ಕಬದ್ಧಗೊಳಿಸುವಿಕೆಯಲ್ಲಿ ವ್ಯವಸ್ಥಿತವಾಗಿ ಸಾಮರ್ಥ್ಯಾಭಿವೃದ್ಧಿ ಗೊಳಿಸುವುದು.
- ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಭಾಯಿಸಲು ಮಾನದಂಡ ಗುರುತಿಸಿ ಹಾಗೂ ಅವುಗಳನ್ನು ವೃದ್ಧಿಗೊಳಿಸಿ ಆಸಕ್ತಿಯುಳ್ಳ ಕ್ಷೇತ್ರದಲ್ಲಿ ಸ್ಥಿತಿಗತಿಗನುಗುಣವಾಗಿ ಅನುಷ್ಠಾನ.
- ಜಿಲ್ಲಾ ಮಟ್ಟದ ಸಂಸತ್ ಆದರ್ಶ ಗ್ರಾಮ ಯೋಜನೆ ಸಮಿತಿಯನ್ನು ಬಲಗೊಳಿಸುವಿಕೆ.
- ನಿಪುಣತೆ ಹೊಂದಿದ ಸಂಸ್ಥೆಗಳು ಮತ್ತು ವ್ಯಕ್ತಿಗಳ ಸೇವೆಯನ್ನು ಬಳಸುವಿಕೆ.
- ಆದ್ಯತೆಗಳ ಅನುಷ್ಠಾನದ ಒಗ್ಗೂಡಿಸುವಿಕೆ.

## ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ ಪುರಸ್ಕಾರ:

ಸದರಿ ಪ್ರಶಸ್ತಿಯು 2017–18ನೇ ಸಾಲಿನಿಂದ ಪರಿಚಯಿಸಲಾಗಿದೆ ಹಾಗೂ ದೇಶಾದ್ಯಂತ ಅತ್ಯುತ್ತಮ ಪ್ರದರ್ಶನ ನೀಡುವ ಮೂರು ಗ್ರಾಮ ಪಂಚಾಯಿತಿಗಳಿಗೆ ಇದನ್ನು ನೀಡಲಾಗುವುದು. ಜಿ.ಪಿ.ಡಿ. ಗಾಗಿ ಹೊರಡಿಸಿದ ಮಾದರಿಗಳ ಮಾರ್ಗಸೂಚಿಗಳಿಗೆ ಅನುಗುಣವಾಗಿ ಸಿದ್ದಪಡಿಸಿದ ರಾಜ್ಯ/ಕೇಂದ್ರ ಆಡಳಿತ ಪ್ರದೇಶಗಳು ನಿರ್ದಿಷ್ಟ ಮಾರ್ಗಸೂಚಿಗಳ ಪ್ರಕಾರ ತಮ್ಮ ಜಿ.ಪಿ.ಡಿ.ಪಿ.ಗಳನ್ನು ಅಭಿವೃದ್ಧಿ ಪಡಿಸಿದ ಗ್ರಾಮ ಪಂಚಾಯಿತಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ ಪುರಸ್ಕಾರವು ಗುರುಪುರ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಗೆ 2017–18 ನೇ ಸಾಲಿನ ಸಾಧನೆಗಾಗಿ ಲಭಿಸಿದೆ.

## ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಪುರಸ್ಕಾರ:

ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಪುರಸ್ಕಾರವು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ, ಪ್ರಾಥಮಿಕ ಶಾಲೆ, ಸೆಕೆಂಡರಿ ಹಾಗೂ ಪ್ರೌಢ ಶಾಲೆ ಮಕ್ಕಳುಗಳಿಗೆ ಆಯಾ ಕಾಲಕ್ಕನುಗುಣವಾಗಿ ಲಸಿಕೆ ಹಾಕಿಸುವುದು, ಗ್ರಾಮ ಪಂಚಾಯತಿಯ ಪ್ರಥಮ ಆದ್ಯತಾ ಕಾರ್ಯಕ್ರಮವಾಗಿರುತ್ತದೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ ಪುರಸ್ಕಾರವು ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕಿನ ರಾಜಾನುಕುಂಟೆ ಗ್ರಾಮ ಪಂಚಾಯಿತಿಗೆ 2017–18 ನೇ ಸಾಲಿನ ಈ ಕೆಳಕಂಡ ಮಕ್ಕಳ ಸ್ನೇಹಿ ಕಾರ್ಯಕ್ಷಮತೆಗಾಗಿ ಪುರಸ್ಕಾರ ಲಭಿಸಿದೆ.

- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಕ್ಕಳಿಗೆ ಲಸಿಕೆ / ರೋಗನಿರೋಧಕ ಶಕ್ತಿಯ ಚುಚ್ಚುಮದ್ದನ್ನು ದೊಡ್ಡ ಅಭಿಯಾನದ ಮೂಲಕ ಮಾಡಲಾಗಿದೆ.
- ಗ್ರಾಮ ಪಂಚಾಯತಿಯಲ್ಲಿ ಹೆಚ್ಚಿನ ಅರಿವು ಮೂಡಿಸುವ ಮೂಲಕ ಶಾಲಾ ಬಿಟ್ಟ ಮಕ್ಕಳನ್ನು ಹಾಗೂ ಹಾಜರಾಗದ ಶಾಲಾ ಮಕ್ಕಳುಗಳನ್ನು ಶಾಲೆಗೆ ತರುವಲ್ಲಿ ಶ್ರಮಿಸಲಾಗಿದೆ.
- ಗ್ರಾಮ ಪಂಚಾಯತಿಯು ಬಯಲು ಮಲವಿಸರ್ಜನೆ ಮುಕ್ತ ಗ್ರಾಮ ಪಂಚಾಯತಿ ಎಂದು ಘೋಷಿಸಲಾಗಿದೆ.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳಿಗೆ ಗುಣಮಟ್ಟದ ಬಿಸಿಯೂಟ ಹಾಗೂ ಅಂಗನವಾಡಿ ಮಕ್ಕಳಿಗೆ ಪೋಷಣಾತ್ಮಕ ಆಹಾರವನ್ನು ಒದಗಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.
- ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಶಾಲೆಯ ಪಕ್ಕದಲ್ಲಿ ಸ್ಥಾಪಿಸಲಾಗಿದೆ.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಶಾಲಾ ಮಕ್ಕಳಿಗೆ ಗುಣಮಟ್ಟದ ಆಟದ ಮೈದಾನಗಳನ್ನು ಒದಗಿಸಲಾಗಿದೆ.

ಕೇಂದ್ರ ಸರ್ಕಾರವು ಪ್ರತಿ ವರ್ಷ ರಾಷ್ಟ್ರೀಯ ಪಂಚಾಯತ್ ರಾಜ್ ದಿನವಾದ ಏಪ್ರಿಲ್ 24 ರಂದು ಪಂಚಾಯತಿಗಳ ಕಾರ್ಯಕ್ಷಮತೆಗಾಗಿ ಬಹುಮಾನವನ್ನು ಪದಕದೊಂದಿಗೆ ನಗದು ರೂಪದಲ್ಲಿ ನೀಡಲಾಗುತ್ತಿದ್ದು, 2018–19ರ ಆರ್ಥಿಕ ಸಾಲಿನ ಕಾರ್ಯಕ್ಷಮತೆಗೆ ನೀಡುವ ಪುರಸ್ಕಾರದ ಪ್ರಶಸ್ತಿಯನ್ನು ಮುಂದಿನ ವರ್ಷದಲ್ಲಿ ನೀಡಲಿದ್ದು, ಅದರನ್ವಯ ರಾಜ್ಯದ ಎಲ್ಲಾ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿಗಳು ಕೇಂದ್ರ ಸರ್ಕಾರವು ಆನ್‌ಲೈನ್‌ನಲ್ಲಿ ಬಿಡುಗಡೆಗೊಳಿಸುವ ಪ್ರಶ್ನಾವಳಿಗಳಿಗೆ ಅಗತ್ಯ ದಾಖಲೆಗಳೊಂದಿಗೆ ಮಾಹಿತಿಯನ್ನು ಭರ್ತಿ ಮಾಡಿ ವಿಷಯಾಧಾರಿತ ಹಾಗೂ ವಸ್ತುನಿಷ್ಠ ಮೌಲ್ಯಮಾಪನ ಮಾಡಲು ಅತ್ಯುತ್ಸಾಹದಿಂದ ಭಾಗವಹಿಸಿ ಪ್ರಶಸ್ತಿಗೆ ಅರ್ಹರಾಗಬೇಕೆಂದು ಈ ಮೂಲಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪರವಾಗಿ ಕೋರಲಾಗಿದೆ.

# ಪಂಚಾಯತ್ ರಾಜ್ ವ್ಯವಸ್ಥೆ ಸುಧಾರಣೆ

ವರದಿ




ಎಂ.ಕೆ.ಕೆಂಪೇಗೌಡ

ಜಂಟಿ ನಿರ್ದೇಶಕರು
ಸಾಮಾಜಿಕ ಲೆಕ್ಕ ಪರಿಶೋಧನಾ
ನಿರ್ದೇಶನಾಲಯ
ಹಾಗೂ ಸಲಹೆಗಾರರು (ಪಂ.ರಾಜ್)
ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ


**ಗ್ರಾಮ ಪಂಚಾಯತಿಗಳಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಟ್ಟಡ ಮತ್ತು ನಿವೇಶನಗಳ ಮೇಲೆ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಆಸ್ತಿಗಳನ್ನು ನಿವಾಸಿ ವಾಣಿಜ್ಯ ಹಾಗೂ ಕೈಗಾರಿಕಾ ಆಸ್ತಿಗಳೆಂದು ವಿಂಗಡಿಸಲಾಗಿದೆ. ತೆರಿಗೆಯನ್ನು ಎರಡು ವರ್ಷಗಳಿಗೊಮ್ಮೆ ಪರಿಷ್ಕರಿಸಬಹುದಾಗಿದೆ. ತೆರಿಗೆ ನಿರ್ಧರಣೆ ಹಾಗೂ ವಸೂಲಾತಿಯ ಬಗ್ಗೆ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.**

ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ ಸುಧಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪರವರು ತಿಳಿಸಿದರು. ದಿನಾಂಕ:19-10-2019 ರಂದು ಪಂಚಾಯತ್ ರಾಜ್ ವಿಷಯಗಳಿಗೆ ಸಂಬಂಧಿಸಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳೊಡನೆ ಸಭೆ ನಡೆಸಿ, ಸುದೀರ್ಘವಾಗಿ ಚರ್ಚಿಸಿದ ನಂತರ ಈ ಅಭಿಪ್ರಾಯ ವ್ಯಕ್ತಪಡಿಸಿದರು. ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ॥ಎನ್.ನಾಗಾಂಬಿಕಾದೇವಿ, ಶ್ರೀಮತಿ.ಉಮಾ ಮಹದೇವನ್, ಪಂಚಾಯತ್ ರಾಜ್ ನಿರ್ದೇಶಕರುಗಳಾದ ಶ್ರೀ. ಅಶ್ರಫುಲ್ ಹಸ್ಸನ್, ಶ್ರೀ.ಶಿವಶಂಕರ್, ಪಂಚಾಯತ್ ರಾಜ್ ಸಲಹೆಗಾರರಾದ ಶ್ರೀ. ಎಂ.ಕೆ.ಕೆಂಪೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳಾದ ಶ್ರೀ.ಜಿ.ಜಯರಾಮ್ ಹಾಗೂ ಇತರೆ ಅಧಿಕಾರಿಗಳು ಮಾನ್ಯ ಸಚಿವರ ಜೊತೆ ಚರ್ಚೆಯಲ್ಲಿ ಪಾಲ್ಗೊಂಡು ಮಾಹಿತಿ ನೀಡಿದರು. ಕರ್ನಾಟಕ ಪಂಚಾಯತ್ ರಾಜ್‌ಗೆ ಸಂಬಂಧಿಸಿದಂತೆ ಕೆಳಕಂಡ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

## ಪಂಚಾಯತ್ ರಾಜ್ ಕಾಯ್ದೆ ಪ್ರಮುಖಾಂಶಗಳು:

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ ಪ್ರಮುಖ ಅಂಶಗಳ ಬಗ್ಗೆ ಸಚಿವರಿಗೆ ಮನವರಿಕೆ ಮಾಡಲಾಯಿತು. ಮಹಿಳೆಯರಿಗೆ ಸದಸ್ಯ ಸ್ಥಾನ ಹಾಗೂ ಪದಾಧಿಕಾರಿಗಳ ಹುದ್ದೆಗಳಿಗೆ ಶೇಕಡ 50% ಮೀಸಲಾತಿ ಅಧ್ಯಕ್ಷರು ಉಪಾಧ್ಯಕ್ಷರುಗಳ ಅವಧಿಯನ್ನು 60 ತಿಂಗಳಿಗೆ ವಿಸ್ತರಿಸಿರುವುದು, 30 ತಿಂಗಳವರೆಗೆ ಅವಿಶ್ವಾಸ ಮಂಡಿಸಲು ಅವಕಾಶವಿಲ್ಲದಿರುವ ಅಂಶಗಳು ಪಂಚಾಯತ್ ರಾಜ್ ವ್ಯವಸ್ಥೆಯ ವಿಶಿಷ್ಟ ಅಂಶಗಳು ಎಂಬುದನ್ನು ಮಾನ್ಯ ಸಚಿವರು ಪ್ರಶಂಸಿಸಿದರು.

## ಪಂಚಾಯತ್ ರಾಜ್ ಪ್ರಕಾರ್ಯಗಳು:

ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನದ 73ನೇ ತಿದ್ದುಪಡಿಯ ಆಶಯದಂತೆ 29 ವಿಷಯಗಳನ್ನೊಳಗೊಂಡ ಪ್ರಕಾರ್ಯಗಳನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಅನುಸೂಚಿ-I, II & III ರಲ್ಲಿ ವಿವರಿಸಲಾಗಿದೆ. ಆದಾಗ್ಯೂ ಬಹಳಷ್ಟು ಕಾರ್ಯಕ್ರಮಗಳು ನಿಜವಾದ ಅರ್ಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾವಣೆಯಾಗದಿರುವ ಅಂಶಗಳನ್ನು ವಿವರಿಸಲಾಯಿತು. ಈ ದಿಸೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಜವಾಬ್ದಾರಿ ನಕ್ಷೆಯನ್ನು ಸಿದ್ಧಪಡಿಸುವ ಪ್ರಕ್ರಿಯೆ ನಡೆಯುತ್ತಿದ್ದು, ಆದಷ್ಟು ಬೇಗ ಅಂತಿಮಗೊಳಿಸಲು ಸೂಚಿಸಿದರು.

## ಪಂಚಾಯತ್ ರಾಜ್ ಸಂಸ್ಥೆಗಳ ಸಿಬ್ಬಂದಿ ವಿಷಯಗಳು:

ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳಿಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕಾರಿ/ಸಿಬ್ಬಂದಿ ಅವಕಾಶ ಕಲ್ಪಿಸಿದ್ದು, ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ಸಿಬ್ಬಂದಿ ಕೊರತೆಯಿದ್ದು, ಹೊರಗುತ್ತಿಗೆ ಸಿಬ್ಬಂದಿಯಿಂದ ಕಾರ್ಯನಿರ್ವಹಿಸುತ್ತಿರುವ




ಬಗ್ಗೆ ಆಕ್ಷೇಪಿಸಿದ ಮಾನ್ಯ ಸಚಿವರು ತ್ವರಿತವಾಗಿ ಮಂಜೂರಾದ ಹುದ್ದೆಗಳಿಗೆ ಖಾಲಿ ಇರುವ ಸಿಬ್ಬಂದಿಯನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದರು. ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ಸಿಬ್ಬಂದಿಗಳ ವಿಶೇಷ ನೇಮಕಾತಿ ನಿಯಮಗಳನ್ನು ಸಿದ್ಧಪಡಿಸಿದ್ದು, ಶೀಘ್ರವಾಗಿ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದೆಂದು ಅಧಿಕಾರಿಗಳು ಮಾಹಿತಿ ನೀಡಿದರು.

## ಗ್ರಾ.ಪಂ.ಗಳಲ್ಲಿ ಈ ಕೆಳಕಂಡ ಸಿಬ್ಬಂದಿ ಇರುತ್ತಾರೆ.

### ಸರ್ಕಾರಿ ನೌಕರರು

1. ಪಂಚಾಯತಿ ಅಭಿವೃದ್ಧಿ ಅಧಿಕಾರಿ
2. ಕಾರ್ಯದರ್ಶಿ (ಗ್ರೇಡ್-1, ಗ್ರೇಡ್-2)
3. ದ್ವಿತೀಯ ದರ್ಜೆ ಲೆಕ್ಕ ಸಹಾಯಕ

### ಗ್ರಾಮ ಪಂಚಾಯತ್ ನೌಕರರು

4. ಬಿಲ್ ಕಲೆಕ್ಟರ್
5. ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್
6. ವಾಟರ್ ಮ್ಯಾನ್/ಪಂಪ್ ಆಪರೇಟರ್
7. ಜವಾನ
8. ಸ್ವಚ್ಛತಾಗಾರರು.

- **ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ : 61129**
- **ಇವರುಗಳಿಗೆ ಸರ್ಕಾರದ ವತಿಯಿಂದ ಮೂಲಕ ಕನಿಷ್ಟ ವೇತನ ಪಾವತಿಸಲಾಗುತ್ತಿದೆ.**
- **ಗ್ರಾ.ಪಂ.ನೌಕರರ ಸೇವಾ ನಿಯಮಗಳನ್ನು ರಚಿಸುತ್ತಿದ್ದು, ಅಂತಿಮಗೊಳಿಸಬೇಕಾಗಿದೆ.**

## ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನದ ಹಂಚಿಕೆ ವಿಷಯಗಳು:

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಜಿಲ್ಲಾ ವಲಯದಿಂದ ವಾರ್ಷಿಕ ಅಂದಾಜು ಜಿಲ್ಲಾ ಪಂಚಾಯತಿಗಳಿಗೆ 500 ರಿಂದ 700 ಕೋಟಿ – ತಾಲ್ಲೂಕು ಪಂಚಾಯತಿಗಳಿಗೆ 100 ರಿಂದ 150 ಕೋಟಿ – ಗ್ರಾಮ ಪಂಚಾಯತಿಗಳಿಗೆ 01 ರಿಂದ 07 ಕೋಟಿ ಅನುದಾನ ಲಭ್ಯವಾಗಬಹುದೆಂದು ತಿಳಿಸಲಾಯಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಜಿಲ್ಲಾ ಪಂಚಾಯತಿಗೆ ಕನಿಷ್ಟ 4.00 ಕೋಟಿ, ಗರಿಷ್ಟ 8.00 ಕೋಟಿ (ಜನಸಂಖ್ಯೆ ಹಾಗೂ ಭೌಗೋಳಿಕ ಪ್ರದೇಶ ಆಧರಿಸಿ) ಒಟ್ಟು – 172 ಕೋಟಿ, ತಾಲ್ಲೂಕು ಪಂಚಾಯತಿಗಳಿಗೆ ಪ್ರತಿ ತಾ.ಪಂ.ಗೆ 2.00 ಕೋಟಿ ಒಟ್ಟು 352 ಕೋಟಿ, ಗ್ರಾಮ ಪಂಚಾಯತಿಗಳಿಗೆ ಪ್ರತಿ ಗ್ರಾಮ ಪಂಚಾಯತಿಗೆ.

- **14ನೇ ಹಣಕಾಸು ಆಯೋಗ – ಪ್ರತಿ ಪಂಚಾಯತಿಗೆ ರೂ.30–50 ಲಕ್ಷ ಒಟ್ಟು 2705 ಕೋಟಿ.**
- **ಶಾಸನಬದ್ಧ ಅನುದಾನ ಪ್ರತಿ ಪಂಚಾಯತಿಗೆ ರೂ.10–15 ಲಕ್ಷ ಒಟ್ಟು 902.99 ಕೋಟಿ,**
- **ಚುನಾಯಿತ ಪ್ರತಿನಿಧಿಗಳ ಗೌರವಧನ ರೂ.137.49 ಕೋಟಿ.**

- **ಕುಡಿಯುವ ನೀರು ನಿರ್ವಹಣಾ ಅನುದಾನ ರೂ.16.14 ಕೋಟಿ. (ಬೋರ್‌ವೆಲ್‌ಗಳ ಸಂಖ್ಯೆಗನುಗುಣವಾಗಿ)**
- **ಗ್ರಾಮ ವಿಕಾಸ ಯೋಜನೆ; ರೂ.232.05 ಕೋಟಿ. (ಆಯ್ಕೆಯಾದ ಗ್ರಾಮಗಳಿಗೆ – ರೂ.75 ಲಕ್ಷ)**
- **ನರೇಗಾ ಯೋಜನೆ; ರೂ.5278.80 ಕೋಟಿ (ಬೇಡಿಕೆಗನುಗುಣವಾಗಿ)**

**ಒಟ್ಟು ರೂ. 9074.69 ಕೋಟಿ.** ವಾರ್ಷಿಕವಾಗಿ ನೀಡಲಾಗುವುದೆಂದು ತಿಳಿಸಲಾಯಿತು. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಹೇರಳವಾಗಿ ಅನುದಾನ ಲಭ್ಯವಿದ್ದು, ಗ್ರಾಮ ಪಂಚಾಯತಿಗಳು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡು ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಸಲಹೆ ಮಾಡಿದರು.

## ಗ್ರಾಮ ಪಂಚಾಯತಿ ಸ್ವಂತ ಸಂಪನ್ಮೂಲ:

ಗ್ರಾಮ ಪಂಚಾಯತಿಗಳಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಟ್ಟಡ ಮತ್ತು ನಿವೇಶನಗಳ ಮೇಲೆ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಆಸ್ತಿಗಳನ್ನು ನಿವಾಸಿ ವಾಣಿಜ್ಯ ಹಾಗೂ ಕೈಗಾರಿಕಾ ಆಸ್ತಿಗಳೆಂದು ವಿಂಗಡಿಸಲಾಗಿದೆ. ತೆರಿಗೆಯನ್ನು ಎರಡು ವರ್ಷಗಳಿಗೊಮ್ಮೆ ಪರಿಷ್ಕರಿಸಬಹುದಾಗಿದೆ. ತೆರಿಗೆ ನಿರ್ಧರಣೆ ಹಾಗೂ ವಸೂಲಾತಿಯ ಬಗ್ಗೆ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. 2018–19ನೇ ಸಾಲಿನ ಒಟ್ಟು ಬೇಡಿಕೆ ರೂ.610.59 ಕೋಟಿ ವಸೂಲಾತಿ ರೂ.483.70 ಕೋಟಿ (ಶೇ.78%) 2019–20ನೇ ಸಾಲಿಗೆ ಒಟ್ಟು ಬೇಡಿಕೆ ರೂ.610.59 ಕೋಟಿ ವಸೂಲಾತಿ ರೂ.185.00 ಕೋಟಿ (ಶೇ.30%) ಹಿಂದಿನ ವರ್ಷಗಳ ಬಾಕಿ ರೂ.1272.30 ಕೋಟಿ ಪರಿಷ್ಕರಣೆ ಮಾಡಿರುವ ಗ್ರಾಮ ಪಂಚಾಯತಿಗಳು –3291 ಪರಿಷ್ಕರಣೆ ಮಾಡದಿರುವ ಗ್ರಾಮ ಪಂಚಾಯತಿಗಳು – 2730 – ಇರುವುದಾಗಿ ಮಾನ್ಯ ಸಚಿವರಿಗೆ ವಿವರಿಸಲಾಯಿತು. ಗ್ರಾಮ ಪಂಚಾಯತಿಗಳು ತೆರಿಗೆ ಶೇಕಡ 100% ರಷ್ಟು ವಸೂಲಿ ಮಾಡಿ ಸ್ವಂತ ಸಂಪನ್ಮೂಲ ಹೆಚ್ಚಿಸಿಕೊಂಡು ಉತ್ತಮವಾಗಿ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.

## ಗ್ರಾಮ ಮಟ್ಟದ ಸಮಿತಿಗಳು:

ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸಮಿತಿಗಳನ್ನು ರಚಿಸಲು ಪಂಚಾಯತ್ ರಾಜ್ ಕಾಯ್ದೆ 62(ಎ)ರಡಿ ಅವಕಾಶವಿದ್ದು, ಅದರಂತೆ ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳಲ್ಲಿ ಚುನಾಯಿತ ಪ್ರತಿನಿಧಿಗಳಲ್ಲದೆ ಗ್ರಾಮ ಮಟ್ಟದಲ್ಲಿ ವಿಷಯಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ತಜ್ಞರು ಸ್ವಯಂ ಸೇವಾ ಸಂಸ್ಥೆಗಳು, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಪ್ರತಿನಿಧಿಗಳನ್ನು ಸದಸ್ಯರುಗಳನ್ನಾಗಿ ನೇಮಿಸಿಕೊಳ್ಳಲು ಅವಕಾಶವಿದೆ. ಈ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದಲ್ಲಿ ಗ್ರಾಮ ಮಟ್ಟದಲ್ಲಿ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಸೇವೆಗಳು ದೊರೆಯುವಂತಾಗುತ್ತವೆ ಎಂದು ಮಾನ್ಯ ಸಚಿವರಿಗೆ ಮನವರಿಕೆ ಮಾಡಲಾಯಿತು. ಈ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅವಶ್ಯ ಕ್ರಮಕೈಗೊಳ್ಳಲು ಮಾನ್ಯ ಸಚಿವರು ಸೂಚಿಸಿದರು.

1. ಜೀವ ವೈವಿಧ್ಯ ನಿರ್ವಹಣಾ ಸಮಿತಿ.
2. ಕೆರೆ ಅಭಿವೃದ್ಧಿ ನಿರ್ವಹಣೆ ಸಮಿತಿ.
3. ಜಲಾನಯನ ಅಭಿವೃದ್ಧಿ ಸಮಿತಿ.
4. ಗ್ರಾಮ ಆರೋಗ್ಯ, ನೈರ್ಮಲ್ಯ, ಪೌಷ್ಟಿಕಾಂಶ ಸಮಿತಿ.
5. ಬಾಲ ವಿಕಾಸ ಸಮಿತಿ.
6. ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಬಾಲ್ಯ ವಿವಾಹ ಸಮಿತಿ.
7. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ.
8. ಗ್ರಾಮೀಣ ನೀರು ಸರಬರಾಜು ಮತ್ತು ಸ್ವಚ್ಛತಾ ಸಮಿತಿ.

## ಇ–ಸ್ವತ್ತು ತಂತ್ರಾಂಶ ಜಾರಿ:

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಅನಧಿಕೃತ ಆಸ್ತಿಗಳ ವಹಿವಾಟಿನ ಪಾರದರ್ಶಕತೆ ತರಲು ದಿನಾಂಕ:15.06.2013 ರಿಂದ ಇ–ಸ್ವತ್ತು ತಂತ್ರಾಂಶ ಜಾರಿಗೊಳಿಸಲಾಗಿದೆ. ಕ್ರಮಬದ್ಧವಾದ ಆಸ್ತಿಗಳಿಗೆ ನಮೂನೆ 89 ಹಾಗೂ 11(ಎ) ನ್ನು ನೀಡಲಾಗುತ್ತದೆ. ಕ್ರಮಬದ್ದವಲ್ಲದ, ಆದರೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ಆಸ್ತಿಗಳಿಗೆ ನಮೂನೆ 11(ಬಿ) ಅನ್ನು ನೀಡಲಾಗುತ್ತದೆ.

1) ದಿನಾಂಕ:14.06.2013ಕ್ಕಿಂತ ಪೂರ್ವದಲ್ಲಿ ಒಂದು ಬಾರಿ ನಿವೇಶನವೆಂದು ಕ್ರಯವಾಗಿರುವ ಆಸ್ತಿಗಳು
2) ದಿನಾಂಕ:14.06.2013ಕ್ಕಿಂದ ಪೂರ್ವದಲ್ಲಿ ಮನೆ ನಿರ್ಮಿಸಿದ್ದಲ್ಲಿ ವಿದ್ಯುತ್ ಬಿಲ್,
3) ಫಾರಂ ಹೌಸ್ ಆದಲ್ಲಿ, ತಹಸೀಲ್ದಾರ್ ರವರಿಂದ ದೃಢೀಕರಣ.

ಉಡುಪಿ ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಜಿಲ್ಲೆಗಳಿಗೆ 11(ಬಿ)ನ್ನು ಕೈ ಬರಹದ ಮೂಲಕ ನೀಡಲು ವಿನಾಯಿತಿ ನೀಡಿದೆ. ಇ–ಸ್ವತ್ತು ಜಾರಿಗೆ ಸಂಬಂಧಿಸಿದಂತೆ ರಾಜ್ಯದ ಹಲವಾರು ಭಾಗಗಳಿಂದ ಸಾರ್ವಜನಿಕರಿಂದ ಬರುವ ದೂರುಗಳನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ರಾಜ್ಯಮಟ್ಟದಲ್ಲಿ ಅಧಿಕಾರಿಗಳ ಸಮಿತಿ ರಚಿಸಿರುವುದಾಗಿ ತಿಳಿಸಲಾಯಿತು.

## ಪಂಚತಂತ್ರಾಂಶ ಜಾರಿ:

ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತ ವಿಷಯಗಳು, ಆಸ್ತಿ ವಿಷಯಗಳು, ಸಿಬ್ಬಂದಿ ವಿಷಯಗಳು ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಅಂಕಿಅಂಶ ಹಾಗೂ ಇನ್ನಿತರೆ ಮಾಹಿತಿಗಳನ್ನು ನಿರ್ವಹಿಸಲು ಪಂಚತಂತ್ರ ಎಂಬ ವಿನೂತನ ತಂತ್ರಾಂಶ ಜಾರಿಗೊಳಿಸಿದ್ದು, ಇದೊಂದು ಬೃಹತ್ ಮಾಹಿತಿ ಜಾಲವಾಗಿದೆ ಎಂದು ತಿಳಿಸಲಾಯಿತು. ಈ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ 2.0 ಗೆ ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

## ಗಾಂಧಿ ಸಾಕ್ಷಿ ಕಾಯಕ:

ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಗೊಳಿಸುವ ಕಾಮಗಾರಿಗಳಲ್ಲಿ ಪಾರದರ್ಶಕತೆ ತರಲು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಜಾರಿಗೊಳಿಸಲಾಯಿತು. ಇದೊಂದು ಅತ್ಯುತ್ತಮ ವ್ಯವಸ್ಥೆಯಾಗಿದೆ ಎಂದು ತಿಳಿಸಲಾಯಿತು.

## ಗ್ರಾಮ ಪಂಚಾಯತಿ ಆಸ್ತಿಗಳ ಡಿಜಿಟಲೀಕರಣ:

ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಿ ಆಸ್ತಿ ವಹಿವಾಟುಗಳಲ್ಲಿ ಪಾರದರ್ಶಕತೆ ತರಲು ಹಾಗೂ ತೆರಿಗೆ ಸಂಗ್ರಹ ಹೆಚ್ಚಿಸಲು ಉದ್ದೇಶಿಸಿದ್ದು, ಪ್ರಸ್ತುತ ಬೆಂಗಳೂರು ನಗರ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಯೋಜನೆ ಕೈಗೊಂಡಿರುವುದಾಗಿ ತಿಳಿಸಲಾಯಿತು.

## ಬಾಪೂಜಿ ಸೇವಾ ಕೇಂದ್ರಗಳು:

ಪಂಚಾಯತ್ ಮಟ್ಟದಲ್ಲಿ ಜನರಿಗೆ ದಿನನಿತ್ಯ ಅವಶ್ಯವಿರುವ ಆಸ್ತಿ ದಾಖಲೆಗಳು, ಹೊರಮಾನ ದೃಢೀಕರಣ, ಜಾತಿ ದೃಢೀಕರಣ ಹೀಗೆ ಸುಮಾರು 64 ಸೇವೆಗಳನ್ನು ಒಂದೇ ಸೂರಿನಡಿ ವಿತರಿಸಲು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಬಾಪೂಜಿ ಸೇವಾ ಕೇಂದ್ರಗಳಲ್ಲಿ ತೆರೆಯಲಾಗಿರುವುದಾಗಿ ತಿಳಿಸಲಾಯಿತು. ಈ ಯೋಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಮಾನ್ಯ ಸಚಿವರು ಬಾಪೂಜಿ ಸೇವಾ ಕೇಂದ್ರಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು.

## ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ:

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಹಾಗೂ ರಾಜ್ಯ ಮಟ್ಟದಲ್ಲಿ ಯೋಜನೆಗಳನ್ನು ಕ್ರೋಢೀಕರಿಸಿ ಯೋಜಿತ ರೀತಿಯಲ್ಲಿ ಅನುಷ್ಠಾನ ಹಾಗೂ ಮೇಲ್ವಿಚಾರಣೆ ಮಾಡಲು ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ರಚಿಸಲಾಗಿದೆ. ಈ ಉದೇಶಕ್ಕೆ ತಾಲ್ಲೂಕು (ಶಾಸಕರ) ಜಿಲ್ಲೆ (ಜಿಲ್ಲಾ ಪಂಚಾಯತ್ ಅಧ್ಯಕ್ಷ/ ಜಿಲ್ಲಾ ಉಸ್ತುವಾರಿ ಸಚಿವರು) ಹಾಗೂ ರಾಜ್ಯ ಮಟ್ಟದಲ್ಲಿ (ಮುಖ್ಯ ಮಂತ್ರಿಗಳು) ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ರಾಜ್ಯ ಮಟ್ಟದ ಸಮಿತಿಯಲ್ಲಿ ಖಾಯಂ ಆಗಿ ಒಬ್ಬರು ನಾಮನಿರ್ದೇಶಿತ ಉಪಾಧ್ಯಕ್ಷರು ಇರುತ್ತಾರೆ. ಈ



ಸಮಿತಿಗಳ ಕಾರ್ಯನಿರ್ವಹಣೆಗೆ ಪ್ರತ್ಯೇಕ ನಿಯಮಗಳನ್ನು ರಚಿಸುತ್ತಿರುವುದಾಗಿ ತಿಳಿಸಲಾಯಿತು.

## ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ತರಬೇತಿ ಸಂಸ್ಥೆ :

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ರಾಜ್ಯ ಮಟ್ಟದ ತರಬೇತಿ ಸಂಸ್ಥೆಯಾಗಿದೆ. ಸಂಸ್ಥೆಯಲ್ಲಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿ/ನೌಕರರುಗಳಿಗೆ ಸರ್ಕಾರದ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಸಾಮರ್ಥ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತಿದೆ. ಈ ಸಂಸ್ಥೆಗೆ ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ತರಬೇತಿ ಸಂಸ್ಥೆ ಎಂಬ ಮನ್ನಣೆ ದೊರೆತಿದೆ. ಈ ಸಂಸ್ಥೆಯು ಹಿಂದೆ ಆಡಳಿತ ತರಬೇತಿ ಸಂಸ್ಥೆಯ ಅಂಗ ಸಂಸ್ಥೆಯಾಗಿದ್ದು, 2016ರಲ್ಲಿ ಸ್ವಾಯತ್ತ ಸಂಸ್ಥೆಯ ಸ್ಥಾನಮಾನ ನೀಡಲಾಗಿದೆಯೆಂದು ತಿಳಿಸಲಾಯಿತು. ಸಂಸ್ಥೆಯ ತರಬೇತಿ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಗೊಳಿಸಲು ಮಾನ್ಯ ಸಚಿವರು ಸೂಚಿಸಿದರು.

## ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾನಿಲಯ :

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಾಯನ, ಸಂಶೋಧನೆ ಹಾಗೂ ಶಿಕ್ಷಣ ನೀಡುವ ಸಲುವಾಗಿ ಗದಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. 2017-18ನೇ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿವೆ. ಪ್ರಸ್ತುತ ಈ ಕೆಳಕಂಡ ಕೋರ್ಸ್‌ಗಳು ನಡೆಯುತ್ತಿದ್ದು, 328 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 1) M.B.A. : Rural Management /Agri-business Management / Enterprise Management, 2) M.A : Rural Development and Panchayat Raj / Public Administration/Economics (Development Economics) 3) M.Sc : Geoinformatics (Remote Sensing & GIS), Food Science and Technology Computer Science (Data Analytics) 4) M.S.W : Community Development (Rural Reconstruction) /Community Health, 5) M.Com : Entrepreneurship / Co-operative Management, 6) MPH : Master of Public Health

## ಕರ್ನಾಟಕ ವಿಕಾಸ ಪ್ರಕಟಣೆ :

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯಿಂದ ಕರ್ನಾಟಕ ವಿಕಾಸ ಮಾಸ ಪತ್ರಿಕೆ ಪ್ರಕಟಿಸಲಾಗುತ್ತಿದೆ. ಇಲಾಖೆ ಹಾಗೂ ಮೂರು ಹಂತದ ಪಂಚಾಯತ್ ರಾಜ್ಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಾರಿಗಳಿಸುವ ಪ್ರಮುಖ ಯೋಜನೆಗಳು ಹಾಗೂ ಕೈಗೊಳ್ಳುವ ಪ್ರಮುಖ ನಿರ್ಧಾರಗಳನ್ನು ತಿಳಿಸುವ ಲೇಖನಗಳನ್ನು ಚಿತ್ರ ಸಮೇತ ಪ್ರಕಟಿಸಲಾಗುತ್ತಿದೆ. ಕರ್ನಾಟಕ ವಿಕಾಸವನ್ನು ರಾಜ್ಯದ ಎಲ್ಲಾ ಜಿಲ್ಲಾ, ತಾಲ್ಲೂಕು ಮತ್ತು ಗ್ರಮ ಪಂಚಾಯತಿಗಳಿಗೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಕಳುಹಿಸಲಾಗುತ್ತಿದೆಯೆಂದು ತಿಳಿಸಲಾಯಿತು. ಅಕ್ಟೋಬರ್-2019ರ ಮಾಹೆಯ ಸಂಚಿಕೆಯನ್ನು ವೀಕ್ಷಿಸಿದ ಮಾನ್ಯ ಸಚಿವರು ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಪತ್ರಿಕೆಯಲ್ಲಿ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಅನುಷ್ಠಾನವಾಗುವ ವಿನೂತನ ಯೋಜನೆಗಳನ್ನು ಪರಿಚಯಿಸಲು ಆದ್ಯತೆ ನೀಡಲು ಸಲಹೆ ಮಾಡಿದರು.

ಪಂಚಾಯತ್ ರಾಜ್ ವ್ಯವಸ್ಥೆ ಬಲಪಡಿಸಿ, ಸಕ್ರಿಯವಾಗಿ ಕಾರ್ಯನಿರ್ವಹಿಸುವಂತೆ ಮಾಡಿದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳು ಉದ್ದೇಶಿತ ಗುರಿ ಸಾಧಿಸಲು ಅನುಕೂಲವಾಗುತ್ತದೆ ಎಂಬುದು ಸರ್ವವಿಧಿತವಾದ ಅಭಿಪ್ರಾಯ. ಕರ್ನಾಟಕ ಪಂಚಾಯತ್ ರಾಜ್ಯ ವ್ಯವಸ್ಥೆ ಅತ್ಯುತ್ತಮವಾಗಿದ್ದು, ಈ ವ್ಯವಸ್ಥೆಯನ್ನು ಇನ್ನು ಹೆಚ್ಚು ಬಲಪಡಿಸಿ, ದೇಶದಲ್ಲಿಯೇ ಮಾದರಿಯಾಗುವಂತೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಎಲ್ಲಾ ಪಂಚಾಯತ್ ರಾಜ್ಯ ಸಂಸ್ಥೆಗಳ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಒಟ್ಟುಗೂಡಿ ಕಾರ್ಯನಿರ್ವಹಿಸೋಣವೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

❖

ವರದಿ




ಆಗ್ನೇಸ್ ಮೇರಿ

ಸಹಾಯಕ ಸಂಪಾದಕರು,
ಕರ್ನಾಟಕ ವಿಕಾಸ,
ಗ್ರಾಮೀಣಾಭಿವೃದ್ಧಿ ಮತ್ತು
ಪಂ.ರಾಜ್ ಇಲಾಖೆ.



ಪ್ರತಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ಮೂರು ಗ್ರಾಮ ಪಂಚಾಯತಿಗಳು ಪುರಸ್ಕಾರಕ್ಕೆ ಅರ್ಹತೆ ಪಡೆದಿದ್ದು, ಗ್ರಾಮ ಪಂಚಾಯತಿಗಳ ವಿವರಗಳನ್ನು ಆಯಾ ಜಿಲ್ಲಾ ಪಂಚಾಯತಿಗಳಿಗೆ ಕಳುಹಿಸಿಕೊಡಲಾಗುವುದು. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನೇಮಿಸಿ, ಪುರಸ್ಕಾರಕ್ಕೆ ಅರ್ಹತೆ ಪಡೆದಿರುವ ಗ್ರಾಮ ಪಂಚಾಯತಿಗಳು ಉತ್ತರಿಸಿರುವ ಅಂಶಗಳನ್ನಾಧರಿಸಿ ದಾಖಲಾತಿಗಳ ಪರಿಶೀಲನೆ ನಡೆಸಲಾಗುವುದು.


# 2018-19ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯಿಂದ ಪ್ರತಿ ವರ್ಷ ಅಕ್ಟೋಬರ್ 02ರ ಗಾಂಧಿ ಜಯಂತಿಯಂದು ರಾಜ್ಯದಲ್ಲಿ ಉತ್ತಮ ಸಾಧನೆ ಮಾಡಿರುವ ಗ್ರಾಮ ಪಂಚಾಯತಿಗಳನ್ನು ಗುರುತಿಸಿ ಗಾಂಧಿ ಗ್ರಾಮ ಪುರಸ್ಕಾರ ನೀಡಲಾಗುತ್ತಿದೆ. ಈ ಯೋಜನೆಯನ್ನು 2013-14ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಯನ್ನು ಆಯ್ಕೆ ಮಾಡಿ ರೂ.5.00 ಲಕ್ಷಗಳ ಪ್ರಶಸ್ತಿ ಹಣ ನೀಡಿ ಗೌರವಿಸಲಾಗುತ್ತಿದೆ.

ಪಂಚತಂತ್ರ ತಂತ್ರಾಂಶದ ಮೂಲಕ ವಿವಿಧ ಮಾನದಂಡಗಳನ್ನು ನಿಗಧಿಪಡಿಸಿ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಪಂಚತಂತ್ರ ತಂತ್ರಾಂಶದ ಮೂಲಕ ನಿಗಧಿಪಡಿಸಲಾದ ಪ್ರಶ್ನಾವಳಿಗಳಿಗೆ ಉತ್ತರಿಸಿ, ಪ್ರತಿ ತಾಲ್ಲೂಕಿಗೆ ಅತಿ ಹೆಚ್ಚು ಅಂಕಗಳಿಸುವ ಮೂಲಕ ಪುರಸ್ಕಾರಕ್ಕೆ ಅರ್ಹತೆ ಪಡೆದ ಮೂರು ಗ್ರಾಮ ಪಂಚಾಯತಿಗಳ ಸಾಧನೆಯನ್ನು ಜಿಲ್ಲಾ ಪಂಚಾಯತಿಗಳಿಂದ ಪರಿಶೀಲನೆ ಮಾಡಿಸಿ ವರದಿ ಪಡೆಯಲಾಗುತ್ತದೆ. ಈ ರೀತಿ ಸರ್ಕಾರಕ್ಕೆ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ರಾಜ್ಯಮಟ್ಟದ ಪರಾಮರ್ಶೆ ಸಮಿತಿಯಲ್ಲಿ ಪರಾಮರ್ಶಿಸುವ ಮೂಲಕ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಯನ್ನು ಪುರಸ್ಕಾರಕ್ಕೆ ಅಂತಿಮಗೊಳಿಸಲಾಗುತ್ತದೆ.

ಅದರಂತೆ 2018-19ನೇ ಸಾಲಿನ ಗಾಂಧಿಗ್ರಾಮ ಪುರಸ್ಕಾರಕ್ಕೆ ಪಂಚತಂತ್ರ ತಂತ್ರಾಂಶದಲ್ಲಿ 'ಗಾಂಧಿ ಗ್ರಾಮ ಪುರಸ್ಕಾರ ಯೋಜನೆಗಾಗಿ ಅರ್ಜಿ' ಶೀರ್ಷಿಕೆಯಡಿ ಲಭ್ಯಗೊಳಿಸಲಾಗುವ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು ಕಡ್ಡಾಯವಾಗಿ 2018-19ನೇ ಸಾಲಿನ ಗಾಂಧಿಗ್ರಾಮ ಪುರಸ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ. ಈ ಅರ್ಜಿಗಳನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದೃಢೀಕರಿಸಿ, ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸಿರುತ್ತಾರೆ.

ಪ್ರತಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ಮೂರು ಗ್ರಾಮ ಪಂಚಾಯತಿಗಳು ಪುರಸ್ಕಾರಕ್ಕೆ ಅರ್ಹತೆ ಪಡೆದಿದ್ದು, ಗ್ರಾಮ ಪಂಚಾಯತಿಗಳ ವಿವರಗಳನ್ನು ಆಯಾ ಜಿಲ್ಲಾ ಪಂಚಾಯತಿಗಳಿಗೆ ಕಳುಹಿಸಿಕೊಡಲಾಗುವುದು. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನೇಮಿಸಿ, ಪುರಸ್ಕಾರಕ್ಕೆ ಅರ್ಹತೆ ಪಡೆದಿರುವ ಗ್ರಾಮ ಪಂಚಾಯತಿಗಳು ಉತ್ತರಿಸಿರುವ ಅಂಶಗಳನ್ನಾಧರಿಸಿ ದಾಖಲಾತಿಗಳ ಪರಿಶೀಲನೆ ನಡೆಸಲಾಗುವುದು. ನಂತರ ಜಿಲ್ಲಾ ಪರಿಶೀಲನಾ/ಆಯ್ಕೆ ಸಮಿತಿಯು ಪುರಸ್ಕಾರಕ್ಕೆ ಅರ್ಹತೆ ಪಡೆದ ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ತಾಲ್ಲೂಕಿಗೆ ಒಂದು ಗ್ರಾಮ ಪಂಚಾಯತಿಯನ್ನು ಗಾಂಧಿ ಗ್ರಾಮ ಪುರಸ್ಕಾರಕ್ಕಾಗಿ ಆಯ್ಕೆ ಮಾಡುವುದು.

ಈ ರೀತಿ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ನೇತೃತ್ವದ ರಾಜ್ಯ ಮಟ್ಟದ ಪರಾಮರ್ಶೆ ಸಮಿತಿಯಲ್ಲಿ 2018-19ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಗ್ರಾಮ ಪಂಚಾಯತಿಗಳನ್ನು ಅಂತಿಮಗೊಳಿಸಿ, ಪುರಸ್ಕಾರ ಪ್ರದಾನ ಮಾಡಲಾಗುವುದು.

ಜಿಲ್ಲಾ ಪಂಚಾಯತಿಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲಾ ಗ್ರಾಮ ಪಂಚಾಯತಿಗಳು ತಪ್ಪದೇ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ಹಾಗೂ ಮಾರ್ಗದರ್ಶನಗಳನ್ನು ನೀಡಿ, ಯೋಜನೆಯ ಯಶಸ್ವೀ ಅನುಷ್ಠಾನಕ್ಕೆ ಸಂಪೂರ್ಣ ಸಹಕಾರ ನೀಡಲು ಆದೇಶಿಸಲಾಗುತ್ತದೆ.

**2018–19ನೇ ಸಾಲಿನಲ್ಲಿ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಗೊಂಡ ಗ್ರಾಮ ಪಂಚಾಯತಿಗಳ ವಿವರ ಈ ಕೆಳಕಂಡಂತಿರುತ್ತದೆ.**

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯತಿ |
|---|---|---|---|
| 1. | ಬಾಗಲಕೋಟೆ | ಬಾದಾಮಿ | ಕೋಟಿಕಲ್ಲ |
| 2. | | ಬಾಗಲಕೋಟೆ | ಮುರನಾಳ |
| 3. | | ಬೀಳಗಿ | ಬಾಡಗಂಡಿ |
| 4. | | ಹುನಗುಂದ | ಸೂಳಿಭಾವಿ |
| 5. | | ಜಮಖಂಡಿ | ಚಿಮ್ಮಡ |
| 6. | | ಮುಧೋಳ | ಸೈದಾಪೂರ |
| 7. | ಬಳ್ಳಾರಿ | ಬಳ್ಳಾರಿ | ಕೊರ್ಲಗುಂದಿ |
| 8. | | ಹಡಗಲಿ | ಹ್ಯಾರಡ |
| 9. | | ಹಗರಿಬೊಮ್ಮನಹಳ್ಳಿ | ಮಾಲವಿ |
| 10. | | ಹರಪನಹಳ್ಳಿ | ಲಕ್ಷ್ಮೀಪುರ |
| 11. | | ಹೊಸಕೋಟೆ | ಬುಕ್ಕಸಾಗರ |
| 12. | | ಕೂಡ್ಲಿಗಿ | ಗುಡೇಕೋಟೆ |
| 13. | | ಸಂಡೂರು | ತೋರಣಗಲ್ಲು |
| 14. | | ಸಿರುಗುಪ್ಪಾ | ಕೊಂಚಿಗೇರಿ |
| 15. | ಬೆಳಗಾವಿ | ಅಥಣಿ | ಅಥಣಿ (ಗ್ರಾಮೀಣ) |
| 16. | | ಬೈಲಹೊಂಗಲ | ದೇಶನೂರ |
| 17. | | ಬೆಳಗಾವಿ | ಬಸ್ತವಾಡ |
| 18. | | ಚಿಕ್ಕೋಡಿ | ಕರೋಶಿ |
| 19. | | ಗೋಕಾಕ | ಖನಗಾಂವ |
| 20. | | ಖಾನಾಪುರ | ನಂದಗಡ |
| 21. | | ರಾಮದುರ್ಗ | ಮುಳ್ಳೂರ |
| 22. | | ರಾಯಬಾಗ | ಕೋಳಿಗುಡ್ಡ |
| 23. | | ಸವದತ್ತಿ | ಕೊಟೂರ ಶಿವಾಪೂರ |
| 24. | | ಹುಕ್ಕೇರಿ | ಬೆಲ್ಲದ ಬಾಗೇವಾಡಿ |

| | | | |
|---|---|---|---|
| 25. | ಬೆಂಗಳೂರು (ನ) | ಆನೇಕಲ್ | ಹೆನ್ನಾಗರ |
| 26. | | ಬೆಂಗಳೂರು ಪೂರ್ವ | ಶೀಗೆಹಳ್ಳಿ |
| 27. | | ಬೆಂಗಳೂರು ಉತ್ತರ | ರಾಜಾನುಕುಂಟೆ |
| 28. | | ಬೆಂಗಳೂರು ದಕ್ಷಿಣ | ಸೋಮನಹಳ್ಳಿ |
| 29. | ಬೆಂಗಳೂರು (ಗ್ರಾ) | ದೇವನಹಳ್ಳಿ | ಕಾರಹಳ್ಳಿ |
| 30. | | ದೊಡ್ಡಬಳ್ಳಾಪುರ | ಸಾಸಲು |
| 31. | | ಹೊಸಕೋಟೆ | ಮುತ್ಸಂದ್ರ |
| 32. | | ನೆಲಮಂಗಲ | ಹೊನ್ನೇನಹಳ್ಳಿ |
| 33. | ಬೀದರ್ | ಔರಾದ | ಗುಡಪಳ್ಳಿ |
| 34. | | ಬಸವಕಲ್ಯಾಣ | ಮಂಠಾಳಾ |
| 35. | | ಬಾಲ್ಕಿ | ಅಬೆಸಾಂಗವಿ |
| 36. | | ಬೀದರ | ಕೊಳಾರ (ಕೆ) |
| 37. | | ಹುಮನಾಬಾದ | ಮುತ್ತಂಗಿ |
| 38. | ಚಾಮರಾಜನಗರ | ಚಾಮರಾಜನಗರ | ಅರಕಲವಾಡಿ |
| 39. | | ಗುಂಡ್ಲುಪೇಟೆ | ಹಂಗಳ |
| 40. | | ಕೊಳ್ಳೇಗಾಲ | ಲೊಕ್ಕನಹಳ್ಳಿ |
| 41. | | ಯಳಂದೂರು | ಯರಗಂಬಳ್ಳಿ |
| 42. | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಘಂಟಂವಾರಿಪಲ್ಲಿ |
| 43. | | ಚಿಕ್ಕಬಳ್ಳಾಪುರ | ಗೊಲ್ಲಹಳ್ಳಿ |
| 44. | | ಚಿಂತಾಮಣಿ | ಊಲವಾಡಿ |
| 45. | | ಗೌರಿಬಿದನೂರು | ವಾಟದಹೊಸಹಳ್ಳಿ |
| 46. | | ಗುಡಬಂಡಾ | ಉಲ್ಲೋಡು |
| 47. | | ಶಿಡ್ಲಘಟ್ಟ | ಹೊಸಪೇಟೆ |
| 48. | ಚಿಕ್ಕಮಗಳೂರು | ಚಿಕ್ಕಮಗಳೂರು | ಮಲ್ಲೇನಹಳ್ಳಿ |
| 49. | | ಕಡೂರ | ಸಿಂಗಟಗೆರೆ |
| 50. | | ಕೊಪ್ಪ | ಹರಿಹರಪುರ |
| 51. | | ಮೂಡಿಗೆರೆ | ಸುಂಕಸಾಲೆ |
| 52. | | ನರಸಿಂಹರಾಜಪುರ | ಹೊನ್ನೇಕುಡಿಗೆ |
| 53. | | ಶೃಂಗೇರಿ | ಕೂತಗೋಡು |
| 54. | | ತರಿಕೆರೆ | ಅಮೃತಾಪುರ |

| | | | |
|---|---|---|---|
| 55. | ಚಿತ್ರದುರ್ಗ | ಚಳ್ಳಕೆರೆ | ಪರಶುರಾಂಪುರ |
| 56. | | ಚಿತ್ರದುರ್ಗ | ಎಂ.ಕೆ.ಹಟ್ಟಿ |
| 57. | | ಹಿರಿಯೂರು | ಬಬ್ಬೂರು |
| 58. | | ಹೊಳಲ್ಕೆರೆ | ರಾಮಗಿರಿ |
| 59. | | ಹೊಸದುರ್ಗ | ಅತ್ತಿಮಗೆ |
| 60. | | ಮೊಳಕಾಲ್ಮೂರು | ಜಿ.ಬಿ.ಹಳ್ಳಿ |
| 61. | ದಕ್ಷಿಣ ಕನ್ನಡ | ಬಂಟ್ವಾಳ | ವಿಟ್ಲಪಡ್ನೂರು |
| 62. | | ಬೆಳ್ತಂಗಡಿ | ಮಡಂತ್ಯಾರು |
| 63. | | ಮಂಗಳೂರು | ಕಲ್ಲಮುಂಡ್ಕೂರು |
| 64. | | ಪುತ್ತೂರು | ಕುಟ್ರುಪ್ಪಾಡಿ |
| 65. | | ಸುಳ್ಯ | ಕಲ್ಮಡ್ಕ |
| 66. | ದಾವಣಗೆರೆ | ಚನ್ನಗಿರಿ | ಹೆಬ್ಬಳಗೆರೆ |
| 67. | | ದಾವಣಗೆರೆ | ಕೈದಾಳೆ |
| 68. | | ಹರಿಹರ | ಹನಗವಾಡಿ |
| 69. | | ಹೊನ್ನಾಳಿ | ರಾಂಪುರ |
| 70. | | ಜಗಳೂರು | ಗುತ್ತಿದುರ್ಗ |
| 71. | ಧಾರವಾಡ | ಧಾರವಾಡ | ಬೆಣಚಿ |
| 72. | | ಹುಬ್ಬಳ್ಳಿ | ಅಂಚಟಗೇರಿ |
| 73. | | ಕಲಘಟಗಿ | ದುಮ್ಮವಾಡ |
| 74. | | ಕುಂದಗೋಳ | ಯಲಿವಾಳ |
| 75. | | ನವಲಗುಂದ | ಮೊರಬ |
| 76. | ಗದಗ | ಗದಗ | ಕುರ್ತಕೋಟಿ |
| 77. | | ಮುಂಡರಗಿ | ಶಿವಾಜಿನಗರ |
| 78. | | ನರಗುಂದ | ಸುರಕೋಡ |
| 79. | | ರೋಣ | ಹಿರೇಹಾಳ |
| 80. | | ಶಿರಹಟ್ಟಿ | ಶಿಗ್ಲಿ |
| 81. | ಹಾಸನ | ಆಲೂರು | ಬೈರಾಪುರ |
| 82. | | ಅರಕಲಗೂಡು | ಕೊಣನೂರು |
| 83. | | ಅರಸೀಕೆರೆ | ಕೋಳಗುಂದ |
| 84. | | ಬೇಲೂರು | ಆಂದಲೆ |
| 85. | | ಚನ್ನರಾಯಪಟ್ಟಣ | ಅಣತಿ |
| 86. | | ಹಾಸನ | ಸತ್ಯಮಂಗಲ |
| 87. | | ಹೊಳೆನರಸೀಪುರ | ದೊಡ್ಡಕಾಡನೂರು |
| 88. | | ಸಕಲೇಶಪುರ | ಹಾನುಬಾಳು |

| | | | |
|---|---|---|---|
| **89.** | | ಬ್ಯಾಡಗಿ | ಚಿಕ್ಕಬಾಸೂರು |
| **90.** | | ಹಾನಗಲ್ | ಬೆಳಗಾಲಪೇಟೆ |
| **91.** | | ಹಾವೇರಿ | ಕೋಣನತಂಬಗಿ |
| **92.** | ಹಾವೇರಿ | ಹಿರೇಕೆರೂರು | ಕಣವೀಸಿದ್ದಗೇರಿ |
| **93.** | | ರಾಣೆಬೆನ್ನೂರು | ಕವಲೆತ್ತು |
| **94.** | | ಸವಣೂರು | ಹುರಳಿಕುಪ್ಪಿ |
| **95.** | | ಶಿಗ್ಗಾಂವ | ನಾರಾಯಣಪುರ |
| **96.** | | ಅಫ್ಜಲಪುರ | ಚೌಡಾಪುರ |
| **97.** | | ಆಳಂದ | ಮಡಯಾಳ |
| **98.** | | ಚಿಂಚೋಳಿ | ಐನಾಪೂರ |
| **99.** | ಕಲಬುರಗಿ | ಚಿತ್ತಾಪುರ | ದಂಡೋತಿ |
| **100.** | | ಜೇವರ್ಗಿ | ಮಳ್ಳಿ |
| **101.** | | ಕಲಬುರಗಿ | ಹರಸೂರ |
| **102.** | | ಸೇಡಂ | ತೆಲಕೂರ |
| **103.** | | ಮಡಿಕೇರಿ | ಗಾಳಿಬೀಡು |
| **104.** | ಕೊಡಗು | ಸೋಮವಾರಪೇಟೆ | ಕೊಡುಮಂಗಳೂರು |
| **105.** | | ವಿರಾಜಪೇಟೆ | ಹೊಸೂರು |
| **106.** | | ಬಂಗಾರಪೇಟೆ | ಸೂಲಿಕುಂಟೆ |
| **107.** | | ಕೋಲಾರ | ಬೆಗ್ಲಿಹೊಸಹಳ್ಳಿ |
| **108.** | ಕೋಲಾರ | ಮಾಲೂರು | ಶಿವಾರಪಟ್ಟಣ |
| **109.** | | ಮುಳಬಾಗಿಲು | ಅಗರ |
| **110.** | | ಶ್ರೀನಿವಾಸಪುರ | ರೋಣೂರು |
| **111.** | | ಗಂಗಾವತಿ | ಶ್ರೀರಾಮನಗರ |
| **112.** | ಕೊಪ್ಪಳ | ಕೊಪ್ಪಳ | ಹುಲಗಿ |
| **113.** | | ಕುಷ್ಟಗಿ | ಸೀರಗುಂಪಿ |
| **114.** | | ಯಲ್ಬುರ್ಗಾ | ಕರಮುಡಿ |
| **115.** | | ಕೃಷ್ಣರಾಜಪೇಟೆ | ಅಗ್ರಹಾರ ಬಾಚಹಳ್ಳಿ |
| **116.** | | ಮದ್ದೂರು | ಅಣ್ಣೂರು |
| **117.** | | ಮಳವಳ್ಳಿ | ಹಲಗೂರು |
| **118.** | ಮಂಡ್ಯ | ಮಂಡ್ಯ | ಸಾತನೂರು |
| **119.** | | ನಾಗಮಂಗಲ | ಕಾಂತಪುರ |
| **120.** | | ಪಾಂಡವಪುರ | ಮೇಲುಕೋಟೆ |
| **121.** | | ಶ್ರೀರಂಗಪಟ್ಟಣ | ಬೆಳಗೊಳ |

| | | | |
|---|---|---|---|
| 122. | ಮೈಸೂರು | ಹೆಗ್ಗಡದೇವನಕೋಟೆ | ಕಂಚಮಳ್ಳಿ |
| 123. | | ಕೃಷ್ಣರಾಜನಗರ | ಚಂದಗಾಲು |
| 124. | | ಮೈಸೂರು | ನಾಗನಹಳ್ಳಿ |
| 125. | | ನಂಜನಗೂಡು | ಹರದಹಳ್ಳಿ |
| 126. | | ಪಿರಿಯಾಪಟ್ಟಣ | ಮುತ್ತೂರು |
| 127. | | ಟಿ.ನರಸೀಪುರ | ಯಾಚೇನಹಳ್ಳಿ |
| 128. | | ಹುಣಸೂರು | ಹನಗೋಡು |
| 129. | ರಾಯಚೂರು | ದೇವದುರ್ಗ | ಬಿ.ಗಣೇಕಲ್ |
| 130. | | ಲಿಂಗುಸೂಗುರು | ಕನ್ನಾಳ |
| 131. | | ಮಾನ್ವಿ | ಬಾಗಲವಾಡ |
| 132. | | ರಾಯಚೂರು | ಯಾಪಲದಿನ್ನಿ |
| 133. | | ಸಿಂದನೂರು | ಬಸ್ಸಾಪೂರ |
| 134. | ರಾಮನಗರ | ಚನ್ನಪಟ್ಟಣ | ಎಲೆತೋಟದಹಳ್ಳಿ |
| 135. | | ಕನಕಪೂರ | ಹೊಸದುರ್ಗ |
| 136. | | ಮಾಗಡಿ | ಮೋಟಗೊಂಡನಹಳ್ಳಿ |
| 137. | | ರಾಮನಗರ | ಬನ್ನಿಕುಪ್ಪೆ (ಬಿ) |
| 138. | ಶಿವಮೊಗ್ಗ | ಭದ್ರಾವತಿ | ಆನವೇರಿ |
| 139. | | ಹೊಸನಗರ | ರಿಪ್ಪನ್‌ಪೇಟೆ |
| 140. | | ಸಾಗರ | ಪಡವಗೋಡು |
| 141. | | ಶಿಕಾರಿಪುರ | ತೊಗರ್ಸಿ |
| 142. | | ಶಿವಮೊಗ್ಗ | ಅಬ್ಬಲಗೆರೆ |
| 143. | | ಸೊರಬ | ಹುರುಳಿ |
| 144. | | ತೀರ್ಥಹಳ್ಳಿ | ಅರೇಹಳ್ಳಿ |
| 145. | ತುಮಕೂರು | ಚಿಕ್ಕನಾಯಕನಹಳ್ಳಿ | ಮುದ್ದೇನಹಳ್ಳಿ |
| 146. | | ಗುಬ್ಬಿ | ಸಿ.ಎಸ್.ಪುರ |
| 147. | | ಕೊರಟಗೆರೆ | ಬಿ.ಡಿ.ಪುರ |
| 148. | | ಕುಣಿಗಲ್ | ಬೇಗೂರು |
| 149. | | ಮದುಗಿರಿ | ಹೊಸಕೆರೆ |
| 150. | | ಪಾವಗಡ | ಸಿ.ಕೆ.ಪುರ |
| 151. | | ಸಿರಾ | ಮಾಗೋಡು |
| 152. | | ತಿಪಟೂರು | ಬಿಳಿಗೆರೆ |
| 153. | | ತುರುವೇಕೆರೆ | ಆನೆಕೆರೆ |
| 154. | | ತುಮಕೂರು | ಗಂಗೋನಹಳ್ಳಿ |

| | | | |
|---|---|---|---|
| 155. | ಉಡುಪಿ | ಕಾರ್ಕಳ | ಕಡ್ತಲ |
| 156. | | ಕುಂದಾಪುರ | ಕುಂಭಾಶಿ |
| 157. | | ಉಡುಪಿ | ಆರೂರು |
| 158. | ಉತ್ತರ ಕನ್ನಡ | ಅಂಕೋಲಾ | ಬೆಳಸೆ |
| 159. | | ಭಟ್ಕಳ | ಮೂಂಡಳ್ಳಿ |
| 160. | | ಹಳಿಯಾಳ | ತೇರಗಾಂವ |
| 161. | | ಹೊನ್ನಾವರ | ಮಂಕಿ–ಎ(ಹಳೇಮಠ) |
| 162. | | ಕಾರವಾರ | ಅಸ್ನೋಟಿ |
| 163. | | ಕುಮಟಾ | ನಾಡುಮಾಸ್ಕೇರಿ |
| 164. | | ಮುಂಡಗೋಡ | ಮಳಗಿ |
| 165. | | ಸಿದ್ದಾಪುರ | ಕ್ಯಾದಗಿ |
| 166. | | ಸಿರ್ಸಿ | ಮೇಲಿನ ಓಣಿಕೇರಿ |
| 167. | | ಜೋಯ್ಡಾ (ಸುಪಾ) | ನಂದಿಗದ್ದೆ |
| 168. | | ಯಲ್ಲಾಪುರ | ಇಡಗುಂದಿ |
| 169. | ವಿಜಯಾಪುರ | ಬಸವನಬಾಗೇವಾಡಿ | ಕೆ.ಸಾಲವಾಡಗಿ |
| 170. | | ಇಂಡಿ | ಚವಡಿಹಾಳ |
| 171. | | ಮುದ್ದೇಬಿಹಾಳ | ಬಸರಕೋಡ |
| 172. | | ಸಿಂದಗಿ | ಚಟ್ಟರಕಿ |
| 173. | | ವಿಜಯಾಪುರ | ನಿಡೋಣಿ |
| 174. | ಯಾದಗಿರಿ | ಶಹಾಪುರ | ಚಟ್ನಳ್ಳಿ |
| 175. | | ಸುರಪುರ | ಹೆಗ್ಗಣದೊಡ್ಡಿ |
| 176. | | ಯಾದಗಿರಿ | ಅಲ್ಲಿಪುರ |

**2018–19ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರವನ್ನು ಪಡೆದಿರುವ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಶುಭ ಹಾರೈಸುತ್ತೇನೆ.**

ವರದಿ

ಶ್ರೀಮತಿ ತೀರ್ಥ. ಎ
ಪಂಚಾಯತಿ ಅಭಿವೃದ್ಧಿ ಅಧಿಕಾರಿ

ಸಿದ್ದರಾಮಯ್ಯ
ಪಂಚಾಯತಿ ಅಭಿವೃದ್ಧಿ ಅಧಿಕಾರಿ

ಶಿವಕುಮಾರ್ ಎಂ ಎನ್
ಪಂಚಾಯತಿ ಅಭಿವೃದ್ಧಿ ಅಧಿಕಾರಿ

ಫರ್ಜಾನ ಎಂ.
ಪಂಚಾಯತಿ ಅಭಿವೃದ್ಧಿ ಅಧಿಕಾರಿ

ಶ್ರೀಮತಿ ಗೀತಾ ಬಾಳಿಗ
ಪಂಚಾಯತಿ ಅಭಿವೃದ್ಧಿ ಅಧಿಕಾರಿ

ಸಿ. ಮಂಜುನಾಥ
ಪಂಚಾಯತಿ ಅಭಿವೃದ್ಧಿ ಅಧಿಕಾರಿ

ಪ್ರತಿ ವರ್ಷ ಅಕ್ಟೋಬರ್ 02ರ ಗಾಂಧಿ ಜಯಂತಿಯಂದು ಉತ್ತಮ ಸಾಧನೆಗೈದ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಯನ್ನು ಆಯ್ಕೆ ಮಾಡಿ 'ಗಾಂಧಿ ಗ್ರಾಮ ಪುರಸ್ಕಾರ'ವನ್ನು ನೀಡಿ ಗೌರವಿಸಲಾಗುತ್ತಿದೆ.

# ಗಾಂಧಿ ಗ್ರಾಮ ಪುರಸ್ಕೃತ ಪಂಚಾಯತಿಗಳ ಸಾಧನೆ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯಿಂದ ಪ್ರತಿ ವರ್ಷ ಅಕ್ಟೋಬರ್ 02ರ ಗಾಂಧಿ ಜಯಂತಿಯಂದು ಉತ್ತಮ ಸಾಧನೆಗೈದ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಯನ್ನು ಆಯ್ಕೆ ಮಾಡಿ 'ಗಾಂಧಿ ಗ್ರಾಮ ಪುರಸ್ಕಾರ'ವನ್ನು ನೀಡಿ ಗೌರವಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ ಆಯ್ಕೆಗೊಂಡ ಕೆಲವು ಗ್ರಾಮ ಪಂಚಾಯತಿಗಳ ಸಾಧನೆಗಳ ವಿವರ ಈ ಕೆಳಕಂಡಂತಿದೆ.

## ಗಂಗೋನಹಳ್ಳಿ :

ಗ್ರಾಮ ಪಂಚಾಯತಿಯು ತುಮಕೂರು ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರದಿಂದ ಸುಮಾರು 18ಕಿ.ಮೀ ದೂರದಲ್ಲಿರುತ್ತದೆ. ಹೆಬ್ಬೂರು ಹೋಬಳಿ ವ್ಯಾಪ್ತಿಯಲ್ಲಿ ಬರುವ 5 ಕಂದಾಯ ಗ್ರಾಮಗಳು ಹಾಗೂ 13 ಉಪಗ್ರಾಮಗಳಿಂದ ಒಟ್ಟು 7200 ಜನಸಂಖ್ಯೆ ಮತ್ತು 1610 ಕುಟುಂಬಗಳಿಂದ ಕೂಡಿದ, ಗ್ರೇಡ್–2 ಗ್ರಾಮ ಪಂಚಾಯತಿಯಾಗಿರುತ್ತದೆ.

ಗಂಗೋನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷರಾದ ಶ್ರೀಮತಿ.ರಂಗಮ್ಮ ಮತ್ತು ಉಪಾಧ್ಯಕ್ಷರಾದ ಶ್ರೀ.ನಿಜಗುಣಾರಾಧ್ಯ ರವರ ಸಹಿತ 15 ಜನ ಸದಸ್ಯ ಕೂಟವನ್ನು ಹೊಂದಿದ್ದು, 1 ಪಂಚಾಯತಿ ಅಭಿವೃದ್ದಿ ಅಧಿಕಾರಿ, 15 ಜನ ಸಿಬ್ಬಂದಿ ವರ್ಗ ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 14 ಅಂಗನವಾಡಿ ಕೇಂದ್ರಗಳು, 12 ಸರ್ಕಾರಿ ಶಾಲೆಗಳು, 1 ಮುರಾರ್ಜಿ ವಸತಿ ಕಾಲೇಜು, ಸುಸಜ್ಜಿತ ಕಟ್ಟಡಗಳೊಂದಿಗೆ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಕಾರಣವಾಗಿರುತ್ತವೆ. ಹಾಗೆಯೇ 1 ಅಂಚೆ ಕಛೇರಿ ಮತ್ತು 3 ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳ ಸಹಕಾರದೊಂದಿಗೆ ಸಾರ್ವಜನಿಕರಿಗೆ ಸೌಲಭ್ಯಗಳನ್ನು ತಲುಪಿಸುತ್ತಾ ಅಭಿವೃದ್ದಿಯತ್ತ ಕೊಂಡೊಯ್ಯಲು ಸಾಧ್ಯವಾಗಿದೆ.

ಕಾಲಕಾಲಕ್ಕೆ ವಾರ್ಡ್ ಸಭೆ, ಗ್ರಾಮ ಸಭೆಗಳು, ಮಕ್ಕಳ ಗ್ರಾಮ ಸಭೆ, ಮಹಿಳಾ ಗ್ರಾಮ ಸಭೆ, ಸಾಮಾಜಿಕ ಲೆಕ್ಕಪರಿಶೋಧನೆ, ಜಮಾಬಂಧಿ, ಕಾವಲು ಸಮಿತಿ ಸಭೆ, ಸ್ಥಾಯಿ ಸಮಿತಿ ಸಭೆಗಳು, ಸಾಮಾನ್ಯ ಸಭೆಗಳನ್ನು ನಡೆಸುತ್ತಾ ಗ್ರಾಮಗಳ ಕುಂದು ಕೊರತೆ ಬಗೆಹರಿಸಿ, ವಸತಿ ರಹಿತರನ್ನು ಗುರುತಿಸಿ ವಿವಿಧ ವಸತಿ ಯೋಜನೆಯಡಿ ವಸತಿ ಸೌಲಭ್ಯ ಕಲ್ಪಿಸುವ ಮೂಲಕ ಗುಡಿಸಲು ಮುಕ್ತ ಗ್ರಾಮ ಪಂಚಾಯತಿಯನ್ನಾಗಿ ಮಾಡಲಾಗಿದೆ. ಸಭೆಗಳನ್ನು ಸಕಾಲದಲ್ಲಿ ಮಾಡಿ ಪಂಚತಂತ್ರ ತಂತ್ರಾಂಶದಲ್ಲೂ



ಸಹ ಅಳವಡಿಸಲಾಗಿದೆ. ಗ್ರಾಮ ಪಂಚಾಯತಿಯಿಂದ ದೊರಕುವ ಸೇವೆಗಳನ್ನು ಗ್ರಾಮ ಪಂಚಾಯತಿಯ ಗೋಡೆ ಮೇಲೆ ನಾಗರಿಕ ಸನ್ನದ್ದನ್ನು ತಯಾರಿಸಿ ಪಂಚತಂತ್ರ ತಂತ್ರಾಂಶದಲ್ಲು ಅಳವಡಿಸಲಾಗಿರುತ್ತದೆ. ಬಾಪೂಜಿ ಸೇವಾ ಕೇಂದ್ರ ಮತ್ತು ಇತರೆ ಈ ಸೇವೆಗಳನ್ನು ಆಧುನಿಕ ತಂತ್ರಜ್ಞಾನದಿಂದ ಜನರಿಗೆ ಒದಗಿಸಲಾಗಿರುತ್ತದೆ. ಗ್ರಾಮ ಪಂಚಾಯತಿ ಗ್ರಾಮ ವಾಣಿ ಗಂಗೋನಹಳ್ಳಿ ವಾಟ್ಸಪ್ ಗ್ರೂಪ್ ರಚಿಸಲಾಗಿದ್ದು, ಇದರ ಮೂಲಕ ಸರ್ಕಾರದ ಆದೇಶಗಳು, ಸಭೆಗಳ ಮಾಹಿತಿ, ಗ್ರಾಮಗಳ ಕುಂದುಕೊರತೆ, ಅಭಿವೃದ್ದಿ ಕಾಮಗಾರಿಗಳು, ಕುಡಿಯುವ ನೀರಿನ ಸಮಸ್ಯೆ, ಬೀದಿದೀಪ ರಿಪೇರಿಗಳ ಪೋಟೋ ಇತ್ಯಾದಿ ಮಾಹಿತಿಗಳನ್ನು ಅಳವಡಿಸಿ ಕೂಡಲೇ ಸಂಬಂಧಿಸಿದ ವಿಷಯಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ.

**ಸ್ವಚ್ಚ ಭಾರತ್ ಮಿಷನ್ :** ಮಹಾತ್ಮ ಗಾಂಧೀಜಿಯವರ ಆಶಯದಂತೆ ಗ್ರಾಮಗಳ ಉದ್ಧಾರದಿಂದಲೇ ರಾಷ್ಟ್ರದ ಸದೃಢತೆ ಎಂಬ ಕಿವಿ ಮಾತನ್ನು ಸಾಕಾರಗೊಳಿಸುವಲ್ಲಿ ನಮ್ಮ ಪಂಚಾಯತಿಯು ಸ್ವಚ್ಚ ಭಾರತ್ ಮಿಷನ್‌ನನ್ನು ಸಾಕರಗೊಳಿಸಲು ಮುಂದಾಗಿ ಜನರ ಮನವೊಲಿಸಿ ಪ್ರತಿಯೊಂದು ಮನೆಗೂ ಶೌಚಾಲಯಗಳನ್ನು ನಿರ್ಮಿಸಿ ಒಟ್ಟು 1610 ಕುಟುಂಬಗಳೂ ವೈಯಕ್ತಿಕ ಶೌಚಾಲಯವನ್ನು ಹೊಂದಿ ಶೇ.100 ರಷ್ಟು ಸಾಧನೆ ಮಾಡಲಾಗಿರುತ್ತದೆ. ಅದರಂತೆ ದಿನಾಂಕ.02-10-2016ರಂದು ಬಯಲು ಶೌಚ ಮುಕ್ತ ಗ್ರಾಮ ಪಂಚಾಯಿತಿ ಪ್ರಶಸ್ತಿ ಸ್ವೀಕರಿಸಿದ ಹೆಮ್ಮೆ ಗ್ರಾಮ ಪಂಚಾಯತಿಗೆ ಸಂದಿದೆ.

ಗ್ರಾಮ ಪಂಚಾಯಿತಿಯು ಸ್ವಂತ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಕಂದಾಯ ವಸೂಲಾತಿ ಸಪ್ತಾಹ ಮುಖಾಂತರ ಶೇ.80% ಕಂದಾಯ ವಸೂಲಿ ಮಾಡಲಾಗಿರುತ್ತದೆ ಹಾಗೆ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಕೆರೆಗಳನ್ನು ಹರಾಜು ಮಾಡುವ ಮೂಲಕ ಮತ್ತು ಹಳೆ ಅನುಪಯುಕ್ತ ಸಾಮಗ್ರಿಗಳನ್ನು ಹರಾಜು ಮಾಡುವ ಮೂಲಕ ಗ್ರಾಮ ಪಂಚಾಯಿತಿಗೆ ಆದಾಯವನ್ನು ವೃದ್ದಿಸಿಕೊಂಡು ಮೂಲಭೂತ ಸೌಕರ್ಯಗಳಾದ ಶುದ್ದ ಕುಡಿಯುವ ನೀರು, ಬೀದಿ ದೀಪ, ಸರ್ವಕಾಲಿಕ ರಸ್ತೆ, ಚರಂಡಿ ನಿರ್ವಹಿಸಲು ಸಾಧ್ಯವಾಗಿದೆ.

**ಸ್ವಚ್ಚತೆ:** ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಉತ್ತಮ ವಾತಾವರಣವನ್ನು ಸೃಷ್ಟಿಸುವ ಸಲುವಾಗಿ ಸೂಕ್ತ ರೀತಿಯಲ್ಲಿ ಘನ ತ್ಯಾಜ್ಯ ವಿಲೇವಾರಿ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅದಕ್ಕೆ ಸಂಬಂಧಿಸಿದಂತೆ ಹಸಿ ಮತ್ತು ಒಣ ಕಸ ವಿಂಗಡಣೆ ಮಾಡುವ ಸಲುವಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿನೂತನವಾದಂತಹ ಕಸದ ಬುಟ್ಟಿಗಳನ್ನು ಎಲ್ಲಾ ಶಾಲೆಗಳಿಗೆ ಮತ್ತು ಅಂಗನವಾಡಿಗಳಿಗೆ ವಿತರಿಸಲಾಗಿದೆ. ಹಾಗೂ ಕಾಲೋನಿಗಳಲ್ಲಿ ಮತ್ತು ಮುಖ್ಯ ಬೀದಿಗಳಲ್ಲಿ ಒಣಕಸ ಮತ್ತು ಹಸಿ ಕಸದ ತೊಟ್ಟಿಗಳನ್ನು ಇರಿಸಲಾಗಿರುತ್ತದೆ, ಇದರಿಂದ ಸುತ್ತಮುತ್ತಲಿನ ಸ್ಥಳ ಸ್ವಚ್ಚವಾಗಿರುವಂತೆ ಚರಂಡಿ ಸ್ವಚ್ಚ ಮಾಡುವುದರಿಂದ 100% ಗ್ರಾಮಗಳ ನೈರ್ಮಲ್ಯ ಕಾಪಾಡಲಾಗುತ್ತಿದೆ.

ಪ್ಲಾಸ್ಟಿಕ್ ಮುಕ್ತ ಗ್ರಾಮವನ್ನಾಗಿ ಮಾಡಲು ಹಳ್ಳಿ ಹಳ್ಳಿಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನರಿಗೆ ಅರಿವು ಮೂಡಿಸಲಾಗಿರುತ್ತದೆ. ಗ್ರಾಮಗಳ ಒಳಭಾಗದಲ್ಲಿನ ತಿಪ್ಪೆಗುಂಡಿಗಳ ಸ್ಥಳಾಂತರ ಮಾಡಲಾಗಿರುತ್ತದೆ, ಇದರಿಂದ ಸ್ವಚ್ಚತೆಗೆ ಒತ್ತು ನೀಡಲಾಗಿರುತ್ತದೆ.ಮಾದರಿ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ ಮಹತ್ವದ ಉದ್ದೇಶ ಹೊಂದಲಾಗಿದ್ದು, ಕಂದಾಯ ಇಲಾಖೆಯಿಂದ ಸ್ಥಳ ಮಂಜೂರಾದ ತಕ್ಷಣ ಘಟಕ ಸ್ಥಾಪಿಸಲು ಕ್ರಮಕೈಗೊಳ್ಳುವ ಉದ್ದೇಶ ಹೊಂದಲಾಗಿದೆ.

ಸರ್ಕಾರದ ಮಾರ್ಗಸೂಚಿಯನ್ವಯ 2018-19ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಡಿ ಸಿ.ಸಿ ರಸ್ತೆ, ಪೈಪ್‌ಲೈನ್, ಬೀದಿ ದೀಪ, ಸೋಲಾರ್ ದೀಪ ಅಳವಡಿಕೆ, ಕಸದ ತೊಟ್ಟಿಗಳ ನಿರ್ಮಾಣ, ಚರಂಡಿಗಳನ್ನೊಳಗೊಂಡಂತೆ ಅನೇಕ ಕಾಮಗಾರಿಗಳನ್ನು ಮಾಡಲಾಗಿರುತ್ತದೆ, ಮತ್ತು ಮನೆ ನಲ್ಲಿ ಮೀಟರ್ ಅಳವಡಿಕೆ ಕ್ರಮವಹಿಸಲಾಗಿದೆ. ವಸತಿ ಯೋಜನೆಯಡಿ ನೀಡಿರುವ ಗುರಿಗೆ ಅನುಗುಣವಾಗಿ ಶೇ.90ರಷ್ಟು ಸಾಧಿಸುವ ಮೂಲಕ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆ..

**ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಎಂ ಜಿ ಎನ್ ಆರ್ ಇ ಜಿ ಎ ಯೋಜನೆಯಡಿ ಜನರು ವಲಸೆ ಹೋಗುವುದನ್ನು ತಡೆದು ತಮ್ಮ ಜಮೀನಿನಲ್ಲಿ ಬದು ನಿರ್ಮಾಣ, ಮಾವಿನ ಸಸಿ, ತೆಂಗು ಸಸಿ, ದನದ ಕೊಟ್ಟಿಗೆ, ಗಂಗೋನಹಳ್ಳಿ ಮತ್ತು ಸೀನಪ್ಪನಹಳ್ಳಿ ಶಾಲೆಗಳಲ್ಲಿ ಕಾಂಪೌಂಡ್ ನಿರ್ಮಾಣ ಕಾಮಗಾರಿಗಳನ್ನು ಮಾಡಲಾಗಿರುತ್ತದೆ. ಹಾಗೆಯೇ ಕೆಂಬಳಲು ಕೆರೆಯ ಅಂಗಳದಲ್ಲಿ ಅರಣ್ಯ ಇಲಾಖೆ ಸಹಯೋಗದೊಂದಿಗೆ ನೆಡುತೋಪು ಬೆಳಿಸುವ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದೆ, ಕೋಟಿ-ನಾಟಿ ಯೋಜನೆಯಡಿ ಸರ್ಕಾರಿ ಜಾಗದಲ್ಲಿ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸುಮಾರು 500 ಸಸಿಗಳನ್ನು ನಾಟಿ ಮಾಡಲಾಗಿದೆ. ಸರ್ಕಾರಿ ಕೊಳವೆ ಬಾವಿಗಳ ಮರುಪೂರಣ, ಜಾನುವಾರುಗಳಿಗೆ ಕುಡಿಯುವ ನೀರಿನ ತೊಟ್ಟಿ, ವೈಯಕ್ತಿಕ ಕಾಮಗಾರಿಗಳಾದ ಮತ್ತು ವಸತಿ ಯೋಜನೆಯಡಿ ಫಲಾನುಭವಿಗಳಿಗೆ ಎನ್

ಎಂ ಆರ್ ಗಳನ್ನು ಸೃಜಿಸಿ ಕಾಮಗಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಸಕಾಲದಲ್ಲಿ ಕೂಲಿ ಹಣವನ್ನು ಪಾವತಿ ಮಾಡಲಾಗಿರುತ್ತದೆ ಈ ಯೋಜನೆಯಿಂದಾಗಿ ಜನರ ಜೀವನ ಮಟ್ಟ ಸುಧಾರಿಸಿರುತ್ತದೆ ಮತ್ತು ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.

**ಶೇ.25%, 5% ಮತ್ತು 2%ರ ಮೀಸಲಾತಿ ಬಳಕೆ :** ಶೇ.25% ಮೀಸಲಾತಿ ಹಣದಲ್ಲಿ ಅರ್ಹ ಫಲಾನಿಭವಿಗಳಿಗೆ ಆರ್ಥಿಕವಾಗಿ ಸಧೃಡಗೊಳಿಸುವ ಸಲುವಾಗಿ ಹೊಲಿಗೆ ಯಂತ್ರವನ್ನು ವಿತರಿಸಿ ಮಹಿಳೆಯರು ಸ್ವ-ಉದ್ಯೋಗ ಕಲ್ಪಿಸಿಕೊಳ್ಳಲು ಸಹಕಾರಿಯಾಗಿದೆ. ಶಾಲಾ ಮಕ್ಕಳಿಗೆ ಶಾಲಾ ಬ್ಯಾಗ್ ವಿತರಿಸಲಾಗಿದೆ, ಶೇ. 5 ರ ಅಂಗವಿಕಲರ ಕಲ್ಯಾಣ ನಿಧಿಯಡಿ ಅರ್ಹ ಫಲಾನುಭವಿಗಳಿಗೆ ಸೋಲಾರ್ ಲಾಟಿನ್, ವಿದ್ಯುತ್ ಮಿತವ್ಯಯ ಗ್ರಾಮ ಪಂಚಾಯಿತಿಯಾಗಿ ಮಾಡುವಲ್ಲಿ ಸಹಕಾರಿಯಾಗಿದೆ ಹಾಗು ಶೇ.2 ರ ಕ್ರೀಡಾ ನಿಧಿಯಡಿ ಕ್ರೀಡಾ ಸಾಮಗ್ರಿಗಳನ್ನು ವಿತರಿಸಿ ನಿಧಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ.

ನಮ್ಮ ಗ್ರಾಮ ನಮ್ಮ ಯೋಜನೆಯನ್ನು ಸರ್ಕಾರದ ಮಾರ್ಗಸೂಚಿಯನ್ವಯ ಎಲ್ಲಾ ಗ್ರಾಮಗಳಲ್ಲೂ ಸಂಪನ್ಮೂಲ ಮತ್ತು ಸಾಮಾಜಿಕ ನಕ್ಷೆ ಮುಖಾಂತರ ಆಯಾ ಗ್ರಾಮಗಳ ಕ್ರಿಯಾ ಯೋಜನೆಯನ್ನು ಆಯಾ ಗ್ರಾಮಸ್ಥರುಗಳಿಂದ ಪಡೆದು ನಮ್ಮ ಗ್ರಾಮ ನಮ್ಮ ಯೋಜನೆ ಕ್ರಿಯಾ ಯೋಜನೆಯನ್ನು ತಯಾರಿಸಿ ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನ ಮಾಡಲಾಗಿರುತ್ತದೆ.

ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಒಟ್ಟು 5 ಸಿ ಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು ಗ್ರಾಮ ಪಂಚಾಯಿತಿಯ ಕೆಲಸ ನಿರ್ವಹಣೆಯು ಪಾರದರ್ಶಕತೆಯಿಂದ ಕೂಡಿರುತ್ತದೆ. ಸಿ.ಸಿ ಟಿವಿ ಅಳವಡಿಸುವುದರಿಂದ ಅಪರಾಧಗಳು ನಡೆಯುವ ಮುನ್ನವೇ ಎಚ್ಚರ ವಹಿಸಲು ಸಿ.ಸಿ ಟಿವಿ ಸಹಕಾರಿಯಾಗಿದೆ. ಹೊಗೆ ಮುಕ್ತ ಗ್ರಾಮ ಪಂಚಾಯಿತಿ ಮಾಡುವ ದಿಸೆಯಲ್ಲಿ ಸರ್ಕಾರದಿಂದ ಉಚಿತವಾಗಿ ಎಲ್ಲಾ ಮನೆಗಳಿಗೂ ಅನಿಲ ಸಂಪರ್ಕ ಕಲ್ಪಿಸಲಾಗಿದೆ ಹಾಗೆಯೇ ಪ್ರತಿ ಕುಟುಂಬಕ್ಕೂ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಒಟ್ಟಾರೆಯಾಗಿ 5 ವರ್ಷಗಳ ಹಿಂದೆ ಗಂಗೋನಹಳ್ಳಿ ಎಂಬ ಹೆಸರು ಮೂಲೆ ಗುಂಪಾಗಿದ್ದು, ಇಂದು ಎಲ್ಲಾರಿಗೂ ಚಿರಪರಿಚಿತವಾಗಿದೆ, ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಅಭಿವೃದ್ಧಿ ಶೀಲ, ಮಾದರಿ ಗ್ರಾಮ ಪಂಚಾಯತಿಯಾಗಿ ಹೊರಹೊಮ್ಮುತ್ತಿದೆ. ತನ್ನ ಆಡಳಿತದಲ್ಲಿ ಪಾರದರ್ಶಕತೆ, ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ವ್ಯವಸ್ಥಿತ ವಿಧಾನಗಳನ್ನು ಅಳವಡಿಸಿಕೊಂಡು, ಸರ್ಕಾರ ಜಾರಿಗೆ ತಂದಿರುವ ವಿವಿಧ ತಂತ್ರಾಂಶಗಳ ಮೂಲಕ ಉತ್ತಮವಾದ ಆಡಳಿತ ಮತ್ತು ಅಭಿವೃದ್ಧಿಯ ಪಥದತ್ತ ಸಾಗುತ್ತ. 2018-19ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನವಾಗಿದೆ.

**ಶ್ರೀಮತಿ ತೀರ್ಥ.ಎ**
**ಪಂಚಾಯತ್ ಅಭಿವೃದ್ಧಿ ಅಧಿಕಾರಿ**
**ಗಂಗೋನಹಳ್ಳಿ ಗ್ರಾಮ ಪಂಚಾಯತ್**

## ಬಿಳಿಗೆರೆ

ತುಮಕೂರು ಜಿಲ್ಲೆಯ ತಿಪಟೂರು ತಾಲೂಕು ಬಿಳಿಗೆರೆ ಗ್ರಾಮ ಪಂಚಾಯತಿ ಜನಸಂಖ್ಯೆ 7632 ಹೊಂದಿದ್ದು ಪಂಚಾಯಿತಿಯು 8 ರೆವೆನ್ಯೂ ಗ್ರಾಮ 6 ಮಜರೆ ಗ್ರಾಮಗಳನ್ನು ಸೇರಿ 14 ಗ್ರಾಮಗಳನ್ನು ಹೊಂದಿದ್ದು 19 ಜನ ಸದಸ್ಯರನ್ನು ಒಳಗೊಂಡಿದೆ ಪಂಚಾಯತಿ ವ್ಯಾಪ್ತಿಯ ಮಧ್ಯಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ 206 ಮತ್ತು 150ಎ ಹಾದು ಹೋಗಿದ್ದು, ತೆಂಗು ಮತ್ತು ಕಂಗು (ಅಡಿಕೆ) ಗಳನ್ನು ಹೊಂದಿರುವ ಸ್ವಚ್ಛ ಸುಂದರ ಗ್ರಾಮ ಪಂಚಾಯತಿ ಎನಿಸಿಕೊಂಡಿದೆ. ಜನರ ಪರವಾಗಿ ಅನಿಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳು, ತೆರಿಗೆ ಸಂಗ್ರಹ ಗುರಿಯಲ್ಲಿ ಗರಿಷ್ಠತೆ ಕಾಯ್ದುಕೊಂಡಿರುವುದು, ಸ್ವಚ್ಛತಾ ವ್ಯವಸ್ಥೆಗೆ ನೀಡಿರುವ ವಿಶೇಷ ಗಮನ. ಕುಡಿಯುವ ನೀರಿನ ಪಂಪು ಚಾಲನೆಗಾಗಿ ಹಾಗೂ ಬೀದಿ ದೀಪ ನಿರ್ವಹಣೆಗೆ ಸಮಯಾಧಾರಿತ ಸ್ವಯಂಚಾಲಿತ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಈ ಗ್ರಾಮ ಪಂಚಾಯತಿ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ.

ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸದ್ಬಳಕೆ ಮಾಡಿಕೊಂಡು ಗೋಕಟ್ಟೆಗಳ ನಿರ್ಮಾಣ ಮತ್ತು ಪುನರುಜ್ಜೀವನ, ಬೋರ್‌ವೆಲ್‌ಗಳಿಗೆ ಜಲ ಮರುಪೂರಣ, ಮಳೆ ನೀರು ಕೊಯ್ಲು, ರೈತರ ಒಕ್ಕಣೆ ಕಣ, ಕೃಷಿ ಹೊಂಡ, ರೈತರ ಹೊಲ ತೋಟಗಳಿಗೆ ದಾರಿಗಾಗಿ ನಮ್ಮ ಹೊಲ ನಮ್ಮ ದಾರಿ, ದನದ ಕೊಟ್ಟಿಗೆ, ಹಾಗೂ ಇತರೆ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ.



2018–19 ರಲ್ಲಿ ದೊರೆತಿರುವ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯ ಅನುದಾನವನ್ನು ಗ್ರಾಮ ಸಭೆಯಲ್ಲಿ ಕ್ರಿಯಾ ಯೋಜನೆ ತಯಾರಿಸಿ ನೀಲ ನಕ್ಷೆಯೊಂದಿಗೆ ಗ್ರಾಮಾಭಿವೃದ್ಧಿಗೆ ಬಳಸಿಕೊಳ್ಳಲಾಗಿದೆ. ಗ್ರಾಮ ಪಂಚಾಯ್ತಿ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಪೂರಕವಾಗಿ ಹಲವು ಕಾರ್ಯಕ್ರಮಗಳನ್ನು ಪಂಚಾಯತ್ ಸಹಭಾಗಿತ್ವ ಮತ್ತು ಸಹಕಾರದಲ್ಲಿ ನೆರವೇರಿಸುತ್ತಿದ್ದೇವೆ.

ಬಿಳಿಗೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 08 ಸರಕಾರಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿದ್ದು, 02 ಖಾಸಗಿ ಪ್ರೌಢಶಾಲೆ ಸೇರಿ 03 ಪ್ರೌಢಶಾಲೆಗಳು ಮತ್ತು 01 ಪದವಿ ಪೂರ್ವ ಕಾಲೇಜು ಕಾರ್ಯನಿರ್ವಹಿಸುತ್ತಿದ್ದು, ಉತ್ತಮ ಶಿಕ್ಷಣ ಒದಗಿಸುತ್ತಿದ್ದು, ಶೇ.99ರಷ್ಟು ಸಾಕ್ಷರತೆ ಇರುತ್ತದೆ. ಪಂಚಾಯತಿ ಶಿಫಾರಸ್ಸಿನೊಂದಿಗೆ ಸರಕಾರಿ ಶಾಲೆ ಉಳಿವಿಗಾಗಿ ಹಲವು ದಾನಿಗಳಿಂದ ದೇಣಿಗೆ ಶ್ರಮಿಸಲಾಗಿತ್ತು. ಶಾಲೆಯಲ್ಲಿನ ಹಲವು ಕಾರ್ಯಕ್ರಮಗಳಿಗೆ ಶಿಕ್ಷಣಕ್ಕೆ ಪೂರಕವಾಗಿ ಪಂಚಾಯತಿ ಸಹಭಾಗಿತ್ವವನ್ನು ವಹಿಸಲಾಗಿದ್ದು, ಶಾಲೆಯಲ್ಲಿ ಕೈ ತೋಟ, ವಿಜ್ಞಾನ ಪ್ರಯೋಗಾಲಯ, ಸ್ಮಾರ್ಟ್ ಕ್ಲಾಸ್, ಕೈತೊಳೆಯುವ ಘಟಕ, ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ ಸವಲತ್ತುಗಳನ್ನು ನೀಡಲಾಗಿರುತ್ತದೆ.

ಮಹಿಳಾ ಆರ್ಥಿಕ ಸಬಲೀಕರಣಕ್ಕಾಗಿ ಪಂಚಾಯತಿ ವ್ಯಾಪ್ತಿಯಲ್ಲಿ ಎಲ್ಲಾ ಸ್ವಸಹಾಯ ಸಂಘಗಳ ಸಮೀಕ್ಷೆ ನಡೆಸಿ ಹೊಸ ಸಂಘಗಳ ರಚನೆ ಮಾಡಲಾಗಿದೆ. ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟ ರಚನೆ ಮಾಡಿ ಸಾಲ ಮತ್ತು ಸಹಾಯಧನ ಮುಖೇನ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪಂಚಾಯತಿ ಉತ್ತೇಜನ ನೀಡಿರುತ್ತದೆ. ಇದರಿಂದಾಗಿ ಸ್ವಸಹಾಯ ಸಂಘಗಳ ಆರ್ಥಿಕ ಮಟ್ಟ ಹೆಚ್ಚಿದೆ.

**"ನಮ್ಮ ಗ್ರಾಮ ನಮ್ಮ ಯೋಜನೆ"** – ಗ್ರಾಮ ಪಂಚಾಯತ್ ವ್ಯಾಪ್ತಿಯ ಸರ್ವ ಕುಟುಂಬಗಳ ಸಮೀಕ್ಷೆಯನ್ನು ನಿಗಧಿತ ನಮೂನೆಯಲ್ಲಿ ತಯಾರಿಸಿ ಅವರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಬಗೆಗೆ ಮೂಲಭೂತ ಸೌಕರ್ಯ, ಬೇಡಿಕೆಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿದ್ದು, ಈ ಮಾಹಿತಿಯಿಂದ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಹಕಾರಿಯಾಗಿದೆ.

2017ರ ಅಕ್ಟೋಬರ್ 02 ರಂದು ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯತಿ ಎಂದು ಘನ ಸರ್ಕಾರದಿಂದ ಘೋಷಿತವಾಗಿದ್ದು, ಗ್ರಾಮ ಸ್ವಚ್ಛತೆಗೆ ಪ್ರಮುಖ ಆದ್ಯತೆ ನೀಡಿದೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಘನ ದ್ರವ ಸಂಪನ್ಮೂಲ ನಿರ್ವಹಣೆ ಘಟಕ (ಘನ ತ್ಯಾಜ್ಯ ವಿಲೇವಾರಿ) ಮಂಜೂರಾಗಿದ್ದು, ಗ್ರಾಮ ಪಂಚಾಯ್ತಿ ಸ್ವಂತ ವಾಹನದ ಮೂಲಕ ಮನೆ ಬಾಗಿಲಿನಿಂದ ಒಣ ಕಸ ಮತ್ತು ಹಸಿ ಕಸ ವನ್ನು ಪ್ರತ್ಯೇಕವಾಗಿ ಸಂಗ್ರಹಿಸುವ ವ್ಯವಸ್ಥೆ ಮಾಡಲಾಗಿದೆ. ಪೈಪ್ ಕಾಂಪೋಸ್ಟ್, ಪ್ಲಾಸ್ಟಿಕ್ ನಿಷೇಧ, ಶ್ರಮದಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಜನರಿಗೆ ಕುಡಿಯಲು 05 ಶುದ್ಧ ನೀರಿನ ಘಟಕವನ್ನು ಸ್ಥಾಪನೆ ಮಾಡಲಾಗಿರುತ್ತದೆ. ಹೇಮಾವತಿ ನಾಲೆಯ ಮೂಲಕ ಬಿಳಿಗೆರೆ ಕೆರೆಗೆ ನೀರನ್ನು ಹರಿಸಿ ಗ್ರಾಮ ಪಂಚಾಯ್ತಿಯ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಪ್ರಗತಿಯಲ್ಲಿರುತ್ತದೆ. ವರ್ಷದಲ್ಲಿ 2 ಗ್ರಾಮ ಸಭೆಗಳನ್ನು, ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆಗಳನ್ನು ವಿಶೇಷವಾಗಿ ಅರ್ಥಪೂರ್ಣವಾಗಿ ನಡೆಸುತ್ತಿದ್ದು ಹೆಚ್ಚು ಜನರು ಭಾಗವಹಿಸಿ ಮುಕ್ತವಾಗಿ ಚರ್ಚಿಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಗ್ರಾಮ ಪಂಚಾಯ್ತಿಯ ಮೇಲ್ಕಂಡ ಸಾಧನೆಗಳನ್ನು ಸರ್ಕಾರವು ಗುರ್ತಿಸಿ ಈಗಾಗಲೇ 2015–16 ಹಾಗೂ 2016–17ನೇ ಸಾಲಿನಲ್ಲಿ ಗಾಂಧಿಗ್ರಾಮ ಪುರಸ್ಕಾರವನ್ನು ಗ್ರಾಮ ಪಂಚಾಯತಿಗೆ ನೀಡಿದ್ದು, ಈಗ ಮತ್ತೊಮ್ಮೆ 2018–19ನೇ ಸಾಲಿನಲ್ಲಿ ಗಾಂಧಿ ಗ್ರಾಮ ಪುರಸ್ಕಾರವನ್ನು ಪುರಸ್ಕಾರ ನೀಡಿ ಗೌರವಿಸಿದ್ದು ಕಾರ್ಯನಿರ್ವಹಣೆಗೆ ಹೆಚ್ಚಿನ ಉತ್ಸಾಹ ತುಂಬಿದೆ. ಒಟ್ಟು ಮೂರು ಬಾರಿ ಗಾಂಧಿ ಗ್ರಾಮ ಪುರಸ್ಕಾರ ಪಡೆದಿದ್ದು ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮತ್ತು ಗ್ರಾಮಸ್ಥರಿಗೆ ಹಾಗೂ ಸಿಬ್ಬಂದಿಗೆ ತುಂಬು ಹರ್ಷವನ್ನು ಉಂಟುಮಾಡಿದೆ.

**ಸಿದ್ದರಾಮಯ್ಯ**
**ಪಂಚಾಯತಿ ಅಭಿವೃದ್ಧಿ ಅಧಿಕಾರಿ.**
**ಬಿಳಿಗೆರೆ ಗ್ರಾಮ ಪಂಚಾಯತಿ, ತುಮಕೂರು.**

## ಹೊಸಕೆರೆ

ಗ್ರಾಮ ಪಂಚಾಯಿತಿಯು, ತುಮಕೂರು ಜಿಲ್ಲೆಯ,ಮಧುಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿದ್ದು, ಈ ಪಂಚಾಯತಿಯು ಜಿಲ್ಲಾ ಕೇಂದ್ರದಿಂದ 60ಕಿ.ಮೀ. ತಾಲ್ಲೂಕು ಕೇಂದ್ರದಿಂದ 12ಕಿ.ಮೀ ದೂರದಲ್ಲಿವೆ. ಈ ಗ್ರಾಮ ಪಂಚಾಯಿತಿಯ ಒಟ್ಟು ಜನಸಂಖ್ಯೆ ಸುಮಾರು 7643 ಆಗಿರುತ್ತದೆ.

ಹೊಸಕರೆ ಗ್ರಾಮ ಪಂಚಾಯತಿಯ ಒಟ್ಟು ಭೌಗೋಳಿಕ ವಿಸ್ತೀರ್ಣ 3976.68 ಹೆಕ್ಟೇರ್ ವಿಸ್ತೀರ್ಣ, 1839 ಕುಟುಂಬಗಳು ಹಾಗೂ 7643 ಜನಸಂಖ್ಯೆಯನ್ನು ಹೊಂದಿದೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ 12 ಗ್ರಾಮಗಳನ್ನೊಳಗೊಂಡಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿ 13 ಅಂಗನವಾಡಿ ಕೇಂದ್ರಗಳು, 06 ಕಿರಿಯ ಪ್ರಾಥಮಿಕ ಶಾಲೆ, 05 ಹಿರಿಯ.ಪ್ರಾ.ಶಾಲೆ ಮತ್ತು 01 ಪ್ರೌಢ ಶಾಲೆಗಳಿವೆ. ಗ್ರಾಮದ ಶೇ.60ರಷ್ಟು ಕುಟುಂಬದವರು

ವ್ಯವಸಾಯದಿಂದ ಜೀವನ ಸಾಗಿಸುತ್ತಿದ್ದಾರೆ ಹಾಗೂ ಶೇ.40ರಷ್ಟು ಕುಟುಂಬದವರು ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಭತ್ತ, ಶೇಂಗಾ ಮತ್ತು ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ ಹಾಗೂ ಉಳಿದವರು ಬಡಿಗಿ, ಬುಟ್ಟಿ ಹಣೆಯುವುದು, ಬೀಡಿ ಕಟ್ಟುವುದು, ಟೈಲರಿಂಗ್ ಮುಂತಾದ ವೃತ್ತಿಯನ್ನು ಅವಲಂಬಿಸಿದ್ದಾರೆ. ಹೀಗೆ ಹೊಸಕೆರೆ ಗ್ರಾಮ ಪಂಚಾಯಿತಿಯ ಆರ್ಥಿಕತೆಯನ್ನು ಕಂಡುಕೊಂಡಿದ್ದು, ಜನರು ಉತ್ತಮ ರೀತಿಯಲ್ಲಿ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

**ಗ್ರಾಮ ಪಂಚಾಯಿತಿಯ ಆಡಳಿತ :** ಹೊಸಕೆರೆ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನೊಳಗೊಂಡಂತೆ 19 ಸದಸ್ಯರುಗಳ ಆಡಳಿತ ಮಂಡಳಿಯಿದೆ. ಪಂಚಾಯಿತಿ ಅಭಿವೃದಿ ಅಧಿಕಾರಿ, ಕಾರ್ಯದರ್ಶಿ ಹಾಗೂ ಇತರೆ ಎಲ್ಲಾ ವೃಂದದ ಸಿಬ್ಬಂದಿಗಳು ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಹಿಂದಿನ



ಸಾಲಿನಲ್ಲಿ 4 ಗ್ರಾಮ ಸಭೆಗಳು, 16 ವಾರ್ಡ್ ಸಭೆಗಳು 7 ಸಾಮಾನ್ಯ ಸಭೆಗಳು. 1 ಮಕ್ಕಳ ಮತ್ತು ಮಹಿಳಾ ಗ್ರಾಮ ಸಭೆ, 3 ಸ್ಥಾಯಿ ಸಮಿತಿ ಸಭೆಗಳನ್ನು ನೆಡಸಲಾಗಿದೆ. ಕರ ಪರಿಷ್ಕರಣೆ ಮಾಡಿ 80% ಕಂದಾಯವನ್ನು ವಸೂಲು ಮಾಡಲಾಗಿದೆ. ಅಂಗಡಿ ಮಳಿಗೆಗಳು, ಸಂತೆ ಹರಾಜು, ಬಸ್ ಸ್ಟ್ಯಾಂಡ್ ಶುಲ್ಕ, ಎತ್ತುವ ಅಂಗಡಿಗಳ ಶುಲ್ಕ, ಪ್ಲೋರ್‌ಮಿಲ್ ಹರಾಜು ಇತ್ಯಾದಿಗಳಿಂದ ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳಲಾಗಿದೆ.

**ಗ್ರಾಮದ ಅಭಿವೃದ್ಧಿ ಕಾರ್ಯಗಳು :** ಪಂಚಾಯಿತಿಯ ಕೇಂದ್ರ ಸ್ಥಾನವಾದ ಹೊಸಕೆರೆಯು ಅರೆ ನಗರ ಪ್ರದೇಶವಾಗಿದ್ದು, ಸಕಲ ನಾಗರೀಕ ಸೌಲಭ್ಯಗಳನ್ನು ಒದಗಿಸುವಲ್ಲಿ ಗ್ರಾಮ ಪಂಚಾಯಿತಿಯಿಂದ ಅವಿರತ ಪ್ರಯತ್ನ ನೆಡೆಸಲಾಗುತ್ತಿದೆ. ಪಂಚಾಯತಿ ವ್ಯಾಪ್ತಿಯ ಎಲ್ಲಾ ವಿದ್ಯುತ್ ಕಂಬಗಳಿಗೂ ವಿದ್ಯುತ್ ಉಳಿಸುವ ಸಲುವಾಗಿ ಎಲ್.ಇ.ಡಿ ದೀಪಗಳನ್ನು ಅಳವಡಿಸಲಾಗಿದೆ ಹಾಗೂ ವ್ಯವಸ್ಥಿತ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಅಗತ್ಯವಿರುವ ಎಲ್ಲಾ ಕಡೆಯೂ ಸಿ.ಸಿ ಚರಂಡಿ ನಿರ್ಮಿಸಿ ನಿರಂತರವಾಗಿ ಕಸವನ್ನು ತೆರವುಗೊಳಿಸಲಾಗುತ್ತಿದೆ. ಅಗತ್ಯವಿರುವ ಎಲ್ಲಾ ಕಡೆಯೂ ಸಿ.ಸಿ ರಸ್ತೆ ನಿರ್ಮಿಸಿ, ಸ್ವಚ್ಚವಾಗಿಟ್ಟುಕೊಳ್ಳಲಾಗಿದೆ.

**ಸರ್ಕಾರದ ಯೋಜನೆಗಳ ಸಮರ್ಪಕ ಹಾಗೂ ಪಾರದರ್ಶಕ ಅನುಷ್ಠಾನ:** ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳನ್ನು ಸರ್ಕಾರದ ಮಾರ್ಗಸೂಚಿಗಳ ಅನುಸಾರವಾಗಿ ಪಾರದರ್ಶಕವಾಗಿ ಅನುಷ್ಠಾನ ಮಾಡಲಾಗುತ್ತಿದೆ. 14ನೇ ಹಣಕಾಸು ಯೋಜನೆಯಡಿಯಲ್ಲಿ ಕುಡಿಯುವ ನೀರು, ಸಮುದಾಯ ಅಸ್ಥಿಗಳ ನಿರ್ವಹಣೆ, ಗ್ರಾಮ ಸ್ವಚ್ಚತೆ, ಸಿ.ಸಿ ಚರಂಡಿ ಹಾಗೂ ಸಿ.ಸಿ ರಸ್ತೆಗಳನ್ನು ನಿರ್ಮಿಸಲಾಗಿದೆ. ಸಂಪೂರ್ಣ ಅನುದಾನವನ್ನು ಬಳಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕಾರ್ಮಿಕ ಆಯವ್ಯಯಕ್ಕೆ ಅನುಗುಣವಾಗಿ 13423 ಮಾನವ ದಿನಗಳನ್ನು ಸೃಜಿಸಲಾಗಿದೆ. ಸದರಿ ಯೋಜನೆಯಡಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಮಾಡಲು ಶೇ.70ರಷ್ಟು ಕಾಮಗಾರಿ ತೆಗೆದುಕೊಂಡಿದೆ. ದನದಕೊಟ್ಟಿಗೆ, ಬದುನಿರ್ಮಾಣ, ಕೃಷಿಹೊಂಡ, ಸಸಿಗಳನ್ನು ನೆಡುವ ವೈಯಕ್ತಿಕ ಕಾಮಗಾರಿಗಳನ್ನು ನಿರ್ವಹಿಸಿದೆ. ಗೋದಾಮು ನಿರ್ಮಾಣ, ಸಂಜೀವಿನಿ ಶೆಡ್, ಅಂಗನವಾಡಿ ಕೇಂದ್ರ ಇತರೆ ಸಮುದಾಯ ಆಸ್ತಿಗಳನ್ನು ಸೃಜಿಸಲಾಗಿದೆ.

ವಸತಿ ಯೋಜನೆಯಡಿಯಲ್ಲಿ ಎಂಪಿಕ್ ಗುರಿಯನ್ನು ಸಾಧಿಸಲಾಗಿದೆ, ರಾಜೀವ್ ಗಾಂದಿ ಚೈತನ್ಯ ಯೋಜನೆಯಡಿ ಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿ ಕೊಡಿಸಿ ಬ್ಯಾಂಕಿನಿಂದ ಸಾಲ ಪಡೆದುಕೊಂಡು ಸ್ವಯಂ ಉದ್ಯೋಗವನ್ನು ಯುವಕರು ಮಾಡಲು ಮಾರ್ಗದರ್ಶನ ನೀಡಲಾಗಿದೆ. ಸ್ವಚ್ಚ ಭಾರತ ಮಿಷನ್ ಯೋಜನೆಯಡಿಯಲ್ಲಿ 1456 ಶೌಚಾಲಯಗಳನ್ನು ನಿರ್ಮಿಸಿ ಸಹಾಯಧನ ನೀಡಿ ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯಿತಿಯನ್ನಾಗಿ ಮಾಡಲಾಗಿದೆ. ಕೇಂದ್ರ ಸ್ಥಾನದಲ್ಲಿ ಸಾರ್ವಜನಿಕರ ಅನುಕೂಲ ಕ್ಕಾಗಿ ಸಮುದಾಯ ಶೌಚಾಲಯವನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಶೇ.25ರ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮಕ್ಕಳ ಶಿಕ್ಷಣಕ್ಕಾಗಿ ಪ್ರೋತ್ಸಾಹ ಧನ, ವೈದ್ಯಕೀಯ ವೆಚ್ಚ, ಶವ ಸಂಸ್ಕಾರ ಹಾಗೂ ಇತರೆ ಕಲ್ಯಾಣ ಕಾರ್ಯಗಳಿಗೆ ಸಂಪೂರ್ಣ ಅನುದಾನವನ್ನು ವಿನಿಯೋಗಿಸಿದೆ. ಶೇ.2ರ ಕ್ರೀಡಾ ಅನುದಾನ ಹಾಗೂ ಶೇ.5ರ ಅಂಗವಿಕಲರ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಲಾಗಿದೆ. ಶಾಲೆ ಹಾಗೂ ಅಂಗನವಾಡಿಗಳಿಗೆ ವಿವಿಧ ಯೋಜನೆಗಳಡಿಯಲ್ಲಿ ಮೂಲ ಭೂತ ಸೌಲಭ್ಯಗಳನ್ನು ಒದಗಿಸಿ ಮಕ್ಕಳ ದಾಖಲಾತಿ, ಹಾಜರಾತಿ, ಉಳಿಕೆ ಹಾಗೂ ಗಳಿಕೆಯನ್ನು ಮೇಲುಸ್ತುವಾರಿ

ಮಾಡಲಾಗಿದೆ. ಪ್ಲಾಸ್ಟಿಕ್ ಮುಕ್ತವನ್ನಾಗಿ ಮಾಡಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸರ್ಕಾರೇತರ ಸಂಸ್ಥೆಯ ಸಹಭಾಗಿತ್ವದಲ್ಲಿ ವಿಶೇಷವಾಗಿ ಕ್ಲೀನ್ ಅಂಡ್ ಗ್ರೀನ್ ಹೊಸಕರೆ ಗ್ರಾಮ ಪಂಚಾಯಿತಿ ಆಂದೋಲನವನ್ನು ಮಾಡಲಾಗಿದೆ.

ಮಹಾತ್ಮ ಗಾಂಧಿಜಿಯವರ 150ನೇ ಜನ್ಮ ದಿನಾಚರಣೆಯ ಸುಸಂಧರ್ಭದಲ್ಲಿ ಮಾಹಾತ್ಮರು ಕಂಡ ಗ್ರಾಮ ಸ್ವರಾಜ್ಯದ ಕನಸಾದ ಜನರ ಕೈಗೆ ಆಡಳಿತ, ವ್ಯಸನ ಮುಕ್ತ, ವ್ಯಾಜ್ಯ ಮುಕ್ತ, ಮಹಿಳೆಯರಿಗೆ ಸ್ವಾತಂತ್ರ್ಯ ಹಾಗೂ ಸಮಾನತೆ ಹಿಂದುಳಿದವರ ಕಾಲ್ಯಾಣ, ಪ್ರಜೆಗಳ ಭಾಗವಹಿಸುವಿಕೆ ಇತ್ಯಾದಿಗಳಿಗೆ ನಮ್ಮ ಗ್ರಾಮ ಪಂಚಾಯತಿಯು ಪ್ರಥಮಾದ್ಯತೆ ನೀಡಲಾಗಿದ್ದು, ಪಂಚಾಯತಿ ಸಾಧನೆಗಳನ್ನು ಗುರುತಿಸಿ ಮಾನ್ಯ ಘನ ಸರ್ಕಾರವು ಗಾಂಧಿ ಗ್ರಾಮ ಪುರಸ್ಕಾರ ನೀಡಿ ಪ್ರೋತ್ಸಾಗಿಸಿದ್ದಾಕ್ಕಾಗಿ ಅನಂತ ಧನ್ಯವಾದಗಳು. ಈ ಸಾಧನೆಗೆ ಸಹಕರಿಸಿದ ನಮ್ಮ ಇಲಾಖೆಯ ಅಧಿಕಾರಿ ವರ್ಗದವರಿಗೆ, ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಗ್ರಾ.ಪಂ ಸಿಬ್ಬಂದಿ, ಎಲ್ಲಾ ಹಂತದ ಜನ ಪ್ರತಿನಿಧಿಗಳು ಹಾಗೂ ಹೊಸಕೆರೆ ಪಂಚಾಯಿತಿಯ ಮಹಾ ಜನತೆಗೆ ಗೌರವಪೂರ್ವಕ ನಮನಗಳು.

**ಶಿವಕುಮಾರ್ ಎಂ ಎನ್**
**ಪಿ ಡಿ ಓ, ಹೊಸಕೆರೆ ಗ್ರಾಮ ಪಂಚಾಯಿತಿ,**
**ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ**

## ಕಡ್ತಲ :

2018–2019ನೇ ಸಾಲಿನಲ್ಲಿ ಪಂಚಾಯತಿಯ ಪಾರದರ್ಶಕ ಆಡಳಿತ, ಆರ್ಥಿಕ ಪ್ರಗತಿ, ವಿವಿಧ ಯೋಜನೆಗಳ ಯಶಸ್ವಿ ಅನುಷ್ಠಾನ ಪರಿಗಣಿಸಿ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆಯು ಕಡ್ತಲ ಗ್ರಾಮ ಪಂಚಾಯತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. ಕಡ್ತಲ ಗ್ರಾಮ ಪಂಚಾಯತಿ ಕಡ್ತಲ, ಕುಕ್ಕುಜೆ, ಎಳ್ಳಾರೆ ಎಂಬ 3 ಗ್ರಾಮಗಳನ್ನು ಹೊಂದಿದ್ದು, 5370 ಜನಸಂಖ್ಯೆ ಹೊಂದಿದೆ. ಕಡ್ತಲ ಗ್ರಾಮ ಪಂಚಾಯತಿಯು ಸಂಪೂರ್ಣ ಸಾಕ್ಷರತೆಯನ್ನು ಹೊಂದಿದೆ. ಎಸ್.ಎಲ್.ಆರ್. ಎಮ್ ಘಟಕ ಹೊಂದಿದ್ದು, ಪ್ರತಿ ಮನೆಯಿಂದ ಒಣಕಸ ಸಂಗ್ರಹಿಸಿ ಕ್ರಮಬದ್ಧವಾಗಿ ವಿಲೇವಾರಿ ಮಾಡಲಾಗುತ್ತಿದೆ. ಹಸಿ ಕಸವನ್ನು ಮನೆ ಹಂತದಲ್ಲಿಯೇ ಪೈಪ್ ಕಾಂಪೋಸ್ಟ್ ಮತ್ತು ಗೊಬ್ಬರ ಗುಂಡಿಗಳ ಮುಖಾಂತರ ನಿರ್ವಹಣೆ ಮಾಡಿ ಗೊಬ್ಬರ ಉತ್ಪತ್ತಿ ಮಾಡಲಾಗುತ್ತಿದೆ. ಗ್ರಾಮ ಪಂಚಾಯತಿ ವತಿಯಿಂದ ಪ್ರತಿಯೊಂದು ಶಾಲೆ ಹಾಗೂ ಅಂಗನವಾಡಿಗಳಿಗೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಪೈಪ್ ಕಾಂಪೋಸ್ಟ್ ಒದಗಿಸಲಾಗಿದೆ.

**ಆಡಳಿತಾತ್ಮಕ ಸಾಧನೆ:** 2018–2019ನೇ ಸಾಲಿನಲ್ಲಿ ಕಡ್ತಲ ಗ್ರಾಮ ಪಂಚಾಯತಿಯಲ್ಲಿ ತೆರಿಗೆ ಪರಿಷ್ಕರಣೆಯನ್ನು ಕ್ರಮಬದ್ಧವಾಗಿ ಮಾಡಿ ಶೇಕಡಾ.100 ರಷ್ಟು ತೆರಿಗೆ ವಸೂಲಿ ಮಾಡಲಾಗಿದೆ. ಮಹಾತ್ಮ ಗಾಂಧಿ ಯೋಜನೆಯಡಿ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿ ಶೇ.100 ಕ್ಕಿಂತ ಹೆಚ್ಚು ಮಾನವ ದಿನಗಳನ್ನು ಸೃಜಿಸಲಾಗಿದೆ. ಈ ಮೂಲಕ ನಿರುದ್ಯೋಗಿಗಳು ವಲಸೆ ಹೋಗುವುದನ್ನು ತಪ್ಪಿಸಲಾಗಿದೆ. ವಸತಿ ಯೋಜನೆಯಡಿ ನಿರಾಶ್ರಿತರಿಗೆ ವಸತಿ ಒದಗಿಸಲಾಗಿದೆ. ಬೀದಿ ದೀಪಗಳನ್ನು ಉತ್ತಮ ಮಟ್ಟದಲ್ಲಿ ನಿರ್ವಹಿಸಲಾಗಿದೆ ಹಾಗೂ ಚರಂಡಿಗಳನ್ನು ಕೂಡಾ ಉತ್ತಮ ರೀತಿಯಲ್ಲಿ ನಿರ್ವಹಿಸಲಾಗಿದೆ. ಪ್ಲಾಸ್ಟಿಕ್ ನಿಷೇಧದ ಬಗ್ಗೆ ಗ್ರಾಮ ಸಭೆ ನಡೆಸಲಾಗಿದೆ ಹಾಗೂ ವಿವಿಧ ಸಂಘಟನೆಗಳು ಮತ್ತು ಶಾಲಾ ಕಾಲೇಜಿನ ಮಕ್ಕಳ ಸಹಭಾಗಿತ್ವದಲ್ಲಿ ಆಂದೋಲನ ನಡೆಸುವ ಮೂಲಕ ಜನಜಾಗೃತಿ ಜೊತೆಗೆ ಪ್ಲಾಸ್ಟಿಕನ್ನು ಸಂಪೂರ್ಣವಾಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಿಷೇಧಿಸಲಾಗಿದೆ. ಪ್ರತಿಯೊಂದು ಮನೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ ಹಾಗೂ ಮೀಟರ್‌ಗಳನ್ನು ಅಳವಡಿಸಿ ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರತಿಯೊಂದು ಮನೆಯು ಕೂಡಾ ಶೌಚಾಲಯದ ವ್ಯವಸ್ಥೆ ಹೊಂದಿದೆ ಹಾಗೂ ಸಮರ್ಪಕವಾಗಿ ಶೌಚಾಲಯದ ಬಳಕೆ ಹಾಗೂ ನಿರ್ವಹಣೆ ಮಾಡಲಾಗುತ್ತಿದೆ. ಈ ಕುರಿತು ಕಡ್ತಲ ಗ್ರಾಮ ಪಂಚಾಯತಿಯನ್ನು "ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯತಿ" ಎಂದು ಕೂಡಾ ಘೋಷಿಸಲಾಗಿದೆ.

2018–2019ನೇ ಸಾಲಿನಲ್ಲಿ ಕಡ್ತಲ ಗ್ರಾಮ ಪಂಚಾಯತಿಯಲ್ಲಿ 2 ಗ್ರಾಮ ಸಭೆ, 12 ವಾರ್ಡ್ ಸಭೆಗಳನ್ನು ಹಾಗೂ ತಿಂಗಳಿಗೆ ಒಂದರಂತೆ ಸಾಮಾನ್ಯ ಸಭೆಯನ್ನು ನಡೆಸಲಾಗಿದೆ. ಅದಕ್ಕೆ ಪೂರಕವಾಗಿ ಸ್ಥಾಯಿ ಸಮಿತಿ ಸಭೆ, ಜಮಾಬಂಧಿ ಸಭೆಯನ್ನು ನಿರ್ಧಿಷ್ಟ ಅವಧಿಯಲ್ಲಿ ನಡೆಸಲಾಗಿದೆ. ಮಹಿಳಾ ಮತ್ತು ಕಿಶೋರಿಯರ ಹಾಗೂ ಮಕ್ಕಳ ಗ್ರಾಮ ಸಭೆಯನ್ನು ಕೂಡಾ ನಡೆಸಲಾಗಿದೆ. ವಿಶೇಷ ಗ್ರಾಮ ಸಭೆಯಡಿ ಕ್ಯಾಸನೂರು ಮಂಗನ ಕಾಯಿಲೆ,



ನಮ್ಮ ಗ್ರಾಮ ನಮ್ಮ ಯೋಜನೆಯ ಗ್ರಾಮ ಸಭೆ, ಹಸಿರು ಕರ್ನಾಟಕ, ಯೋಗ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳ ಸಹಯೋಗದೊಂದಿಗೆ ವಿಶೇಷ ಸಭೆಯನ್ನು ನಡೆಸಲಾಗಿದೆ. ಸ್ತ್ರೀಶಕ್ತಿ ಸಂಘದವರಿಗೆ ಪ್ರಧಾನ ಮಂತ್ರಿಯವರು ನಡೆಸಿಕೊಡುವ ಮನ್ ಕಿ ಬಾತ್ ಕಾರ್ಯಕ್ರಮವನ್ನು ಕೂಡಾ ನಡೆಸಲಾಗಿದೆ. ಸಂಪೂರ್ಣ 100ರಷ್ಟು ವಿದ್ಯುತ್ ಬಿಲ್ಲನ್ನು ಪಂಚಾಯತಿ ಮೆಸ್ಕಾಂ ಇಲಾಖೆಗೆ ಪಾವತಿ ಮಾಡಿದೆ. ಅನೇಕ ಬಾರಿ ವಿವಿಧ ಮಾಹಿತಿ ಶಿಬಿರವನ್ನು ಸ್ತ್ರೀಶಕ್ತಿ ಸಂಘಗಳಿಗೆ, ಸ್ವ-ಸಹಾಯ ಸಂಘಗಳಿಗೆ ಹಾಗೂ ಮಕ್ಕಳಿಗೋಸ್ಕರ ಹಮ್ಮಿಕೊಳ್ಳಲಾಗಿದೆ.

**ವಿಶೇಷ ಸಾಧನೆಗಳು:** ಕೇಂದ್ರ ಸರ್ಕಾರದ ವತಿಯಿಂದ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಜಿಲ್ಲಾ ಪಂಚಾಯತಿ ಉಡುಪಿ, ಪವರ್ ಓವರ್ ಕಂಪನಿಯ ಸಹಯೋಗಯೊಂದಿಗೆ ದೇಶದಲ್ಲಿ ಪ್ರಪ್ರಥಮವಾಗಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಕಡ್ತಲ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಶೋಕನಗರ, ಮುಳ್ಳಜಾಲು, ದರ್ಬುಜೆ ಮತ್ತು ಗೋಳಿಪಲ್ಕೆ ಸೇರಿದಂತೆ 50 ಮನೆಗಳಿಗೆ ವರ್ಮಿಫಿಲ್ಟರ್/ಟೈಗರ್ ಶೌಚಾಲಯ ಪೈಲೆಟ್ ಪ್ರಾಜೆಕ್ಟ್ ಕಾಮಗಾರಿಯನ್ನು ನಡೆಸಲಾಯಿತು. ಟೈಗರ್ ಶೌಚಾಲಯದ ಬಳಕೆ ಮತ್ತು ನಿರ್ವಹಣೆ ಬಗ್ಗೆ ಅರಿವು ಕಾರ್ಯಕ್ರಮವನ್ನು ಆಯಾಯ ಕಾಲೋನಿಗಳಲ್ಲಿ ನಡೆಸಲಾಗಿದೆ. ಪ್ರಸ್ತುತ ಶೌಚಾಲಯದ ಗುಂಡಿಯ ಆಳವು 4 ಫೀಟ್ ಆಗಿದ್ದು, ಇದರಿಂದ ಜಲಮೂಲಗಳು ಕಲುಷಿತವಾಗದಂತೆ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಇದರಲ್ಲಿ ಟೈಗರ್ ವರ್ಮ್ (ಎರೆಹುಳ ಮಾದರಿ) ಎಂಬ ಕೀಟವನ್ನು ಅಳವಡಿಸಿದ್ದು, ಮಾನವ ತ್ಯಾಜ್ಯವನ್ನು ತನ್ನ ಆಹಾರವನ್ನಾಗಿಸಿ ನೀರನ್ನು ಶುದ್ಧೀಕರಿಸಿ ವರ್ಮಿ ಕಾಂಪೋಸ್ಟ್ ಆಗಿ ಪರಿವರ್ತಿಸುತ್ತದೆ.

ರಾಮಕೃಷ್ಣ ಮಿಷನ್ ವತಿಯಿಂದ ಸಿರಿಬೈಲು ಶ್ರೀದುರ್ಗಾ ಪರಮೇಶ್ವರಿ ಭಜನಾ ಮಂಡಳಿ ಇವರ ಸಹಯೋಗದೊಂದಿಗೆ ಗ್ರಾಮದ ವಿವಿಧ ಸ್ಥಳಗಳಲ್ಲಿ ಪ್ರತಿ ತಿಂಗಳ ಕೊನೆಯ ಭಾನುವಾರದಂದು ಸ್ವಚ್ಛತಾ ಕಾರ್ಯಕ್ರಮವನ್ನು ಕೂಡಾ ಉತ್ತಮ ರೀತಿಯಲ್ಲಿ ನಡೆಸಲಾಗುತ್ತದೆ. "ಜನರ ಬಳಿಗೆ ಪಂಚಾಯತ್ " ಎಂಬ ಶೀರ್ಷಿಕೆಯಡಿ ಪ್ರತಿ ಎರಡು ತಿಂಗಳಿಗೊಮ್ಮೆ ಕೊರಗರ ಕಾಲೋನಿಯಲ್ಲಿ ಪಂಚಾಯತ್ ವತಿಯಿಂದ ಕೊರಗರ ಕುಂದು ಕೊರತೆ ಸಭೆ ನಡೆಸಿ ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ದೊರೆಯುವಲ್ಲಿ ಪಂಚಾಯತಿ ಯಶಸ್ವಿಯನ್ನು ಕಂಡಿದೆ.

**ಮುಂದಿನ ಯೋಜನೆಗಳು:**

ಪಂಚಾಯತಿ ವ್ಯಾಪ್ತಿಯಲ್ಲಿ ಮಾದರಿ ಸ್ಮಶಾನ ನಿರ್ಮಾಣ, ಮಾದರಿ ಅಂಗನವಾಡಿ, ತೀರ್ಥೊಟ್ಟು ಹೊಳೆಗೆ ಕಿಂಡಿ ಅಣೆಕಟ್ಟು ನಿರ್ಮಾಣ, ಉದ್ಯಾನವನ, ಕುಕ್ಕುಜೆ ಪೇಟೆಗೆ ಇಂಟರ್ ಲಾಕ್ ಅಳವಡಿಕೆ, ನಗದು ರಹಿತ ವ್ಯವಹಾರ ಅಳವಡಿಸುವ ಯೋಜನೆ ಪಂಚಾಯತಿ ಆಡಳಿತ ಹೊಂದಿದೆ.

**ಫರ್ಜಾನ ಎಂ.**
**ಪಂಚಾಯತಿ ಅಭಿವೃದ್ಧಿ ಅಧಿಕಾರಿ,**
**ಕಡ್ತಲ ಗ್ರಾ.ಪಂ. ಉಡುಪಿ.**

## ಆರೂರು :

ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ 2015-16ನೇ ಸಾಲಿನ ಜುಲೈನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದ ಆರೂರು ಗ್ರಾಮ ಪಂಚಾಯತಿ ಸುಸಜ್ಜಿತ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. 3609 ಜನಸಂಖ್ಯೆ ಹೊಂದಿದ್ದು, 995.75 ಹೆಕ್ಟೇರ್ ವಿಸ್ತೀರ್ಣದಲ್ಲಿ 928 ಕುಟುಂಬ ಹೊಂದಿದೆ. ಆರೂರು ಗ್ರಾಮ 6 ಮಠ, 6 ಊರುಗಳಿಂದ ಸುತ್ತುವರೆದಿರುವುದರಿಂದ ಆರೂರು ಎಂಬ ಹೆಸರು ಅನ್ವರ್ಥ ನಾಮವಾಗಿದೆ. ಶ್ರೀ ವಿಷ್ಣುಮೂರ್ತಿ ದೇವರು ಗ್ರಾಮ ದೇವರಾಗಿದೆ. ಕಿರಿಯ ಪ್ರಾಥಮಿಕ ಶಾಲೆ-1, ಹಿರಿಯ ಪ್ರಾಥಮಿಕ ಶಾಲೆ-1, ಪ್ರೌಢಶಾಲೆ-1, ಮೊರಾರ್ಜಿ ದೇಸಾಯಿ ವಸತಿ ಶಾಲೆ-1 ಹಾಗೂ 5 ಅಂಗನವಾಡಿ ಹೊಂದಿದ್ದು, 10 ಸದಸ್ಯರು ಆಯ್ಕೆಗೊಂಡಿರುತ್ತಾರೆ. ಅಧ್ಯಕ್ಷರಾಗಿ ಶ್ರೀ. ರಾಜೀವ ಕುಲಾಲ್, ಉಪಾಧ್ಯಕ್ಷರಾಗಿ ಶ್ರೀ.ಗಣೇಶ್ ಕುಲಾಲ್, ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷರಾದ ಶ್ರೀ.ಮನೋಜ್ ನಾಯ್ಕರು ಕಾರ್ಯನಿರ್ವಹಿಸುತ್ತಿದ್ದಾರೆ.



**ನೂತನ ಆವಿಷ್ಕಾರ ತಂತ್ರಗಳು : BULK SMS :-**"ಪ್ರತಿ ಮನೆ ಮನೆಗೂ ಸಂದೇಶ ಸಾಕಾರವಾಗಲಿ ಎಂಬುಂದು ಗ್ರಾಮ ಸ್ವರಾಜ್ ಉದ್ದೇಶ"

ಗ್ರಾಮಸ್ಥರಿಗೆ ಈ ನಮ್ಮ ಎಸ್.ಎಮ್.ಎಸ್ ಮಾಹಿತಿ ಸಂದೇಶವು ಜನ ವಸತಿ, ವಾರ್ಡ್ ಗ್ರಾಮ ಸಭೆ ಹಾಗೂ ಇನ್ನಿತರ ಸಭೆ ಹಾಗೂ ಸಂಬಂಧಪಟ್ಟ ಮಾಹಿತಿ ಸಂದೇಶವು ಜನರಿಗೆ ತಲುಪಿ ಜನರ ಭಾಗವಹಿಸುವಿಕೆಗೆ

ಪೂರಕವಾದ ವಾತಾವರಣ ಕಲ್ಪಿಸಿದೆ. ಪಂಚಾಯತಿಯ ಪ್ರತಿಯೊಂದು ಚಟುವಟಿಕೆಯ ಬಗ್ಗೆ ಮಾಹಿತಿ ರವಾನೆಯು ಪಾರದರ್ಶಕತೆಗೂ ಕನ್ನಡಿಯಾಗಿದೆ. ಹಿಂದಿನ ಗ್ರಾಮ ಸಭೆಗಳಿಗೆ ದೂರುಗಳೊಂದಿಗೆ ಬರುತ್ತಿದ್ದ ಗ್ರಾಮಸ್ಥರು ಈ ಬಗ್ಗೆ ಧನಾತ್ಮಕ ಅಭಿಪ್ರಾಯದೊಂದಿಗೆ ಪಂಚಾಯತಿ ಪ್ರಗತಿಗೆ ಸಹಕರಿಸುತ್ತಿದ್ದಾರೆ.

**"SAVE WATER,SAVE FUTURE" ಎಂಬ ಧ್ಯೇಯೋದ್ದೇಶಕ್ಕೆ ಪೂರಕ WATER LAVEL CONTROLLER SYSTEM:** ಪಂಚಾಯತಿಯಲ್ಲಿ ಎದುರಾಗುವ ಸಮಸ್ಯೆ ಔಊಖಿಯ ನೀರು ಪೋಲಾಗುವ ಬಗ್ಗೆ ಗ್ರಾಮಸ್ಥರ ದೂರುಗಳಿಗೆ ಅಂತಿಮ ಪರಿಹಾರ ಹುಡುಕುವ ನಿಟ್ಟಿನಲ್ಲಿ ತಿಚಿಣಜಡಿ ಟಜತಜಟ ಛಿಠಟಿಣಡಿಠಟಟಜಡಿ, ಥಿಣಜಟ ನೀರಿನ ಸರಬರಾಜು ವ್ಯವಸ್ಥೆಗೆ ಪೂರಕವಾಗಿ ಅಳವಡಿಸಲಾಯಿತು. ನಮ್ಮ ಪಂಚಾಯತಿ ವ್ಯಾಪ್ತಿಯಲ್ಲಿರುವ 1 ಲಕ್ಷ ನೀರಿನ ಔಊಖಿ ಸುಮಾರು 3 ರಿಂದ 4 ಕಿ.ಮೀ ದೂರದಲ್ಲಿದ್ದು, ವಿದ್ಯುತ್ ಸಮಸ್ಯೆ, ನೀರಿಲ್ಲದೆ ಪಂಪ್ ಸುಟ್ಟು ಹೋಗುವುದು, ಟ್ಯಾಂಕ್ ನೀರು ತುಂಬಿ ವ್ಯರ್ಥವಾಗಿ ಹರಿಯುವುದು, ಪಂಚಾಯತಿಯ ವಾಟರ್ ಮ್ಯಾನ್ ರಾತ್ರಿಯೆಲ್ಲಾ ಕಾದು ನೀರು ತುಂಬಿಸುತ್ತಿದ್ದು, ವಿದ್ಯುತ್ ಶಾಕ್ ಇತ್ಯಾದಿ ಸಮಸ್ಯೆಗಳನ್ನು ಎದುರುಸುತ್ತಿದ್ದು, ಇದರಿಂದ ಮುಕ್ತಿ ಪಡೆಯಲು ಪಂಚಾಯತಿಯಲ್ಲಿ ವಯರ್ ಲೆಸ್ ವಾಟರ್ ಲೆವೆಲ್ ಕಂಟ್ರೋಲರ್ ಹಾಕುವ ಬಗ್ಗೆ ತೀರ್ಮಾನಿಸಿ, ಅಳವಡಿಕೆ ಯಶಸ್ಸು ಕಂಡಿರುತ್ತದೆ. ಇದು ಸಮಯ, ಮಾನವ ಶ್ರಮ ಮತ್ತು ವಿದ್ಯುತ್ ವೆಚ್ಚದ ಉಳಿತಾಯವಾಗಿದೆ. ಹೊರ ಜಿಲ್ಲೆಯಿಂದಲೂ ವೀಕ್ಷಣೆಗೆ ಬರುವ ಈ ಅತ್ಯುತ್ತಮ ಯೋಜನೆಯು ಪಂಚಾಯತಿಗೆ ಹೆಮ್ಮೆ ತಂದಿದೆ.

ನೀರಿನ ಪಂಪ್ ಮತ್ತು ಟ್ಯಾಂಕ್‌ನ ನಡುವೆ ಯಾವುದೇ ವಯರ್‌ಗಳ ಸಂಪರ್ಕವಿಲ್ಲದೆ ಟ್ಯಾಂಕ್‌ನ ನೀರಿನ ಮಟ್ಟದ ಆಧಾರದ ಮೇಲೆ ಟ್ಯಾಂಕ್‌ನಲ್ಲಿ ನೀರು ಖಾಲಿಯಾದಾಗ ಪಂಪ್ ಆನ್ ಆಗುವ ಹಾಗೆ, ಟ್ಯಾಂಕ್ ತುಂಬಿದಾಗ ಪಂಪ್ ಆಫ್ ಮಾಡುವ ತಂತ್ರಜ್ಞಾನವಾಗಿದೆ. ಪಂಪ್‌ನ ಸ್ಟಾರ್ಟರ್ ಪಕ್ಕ ನಯಾಗಾರ ವಯರ್ ಲೆಸ್ ವಾಟರ್ ಲೆವೆಲ್ ಕಂಟ್ರೋಲರ್ ಅಳವಡಿಸಲಾಗಿದ್ದು ಟ್ಯಾಂಕ್‌ನ ನೀರಿಗೆ ಸೆನ್ಸರ್ ಮತ್ತು ಕಂಟ್ರೋಲರ್ ಅಳವಡಿಸಿ ಎರಡೂ ಕಡೆ ಕಂಟ್ರೋಲರ್‌ಗಳಿಗೆ ಜಿ.ಎಸ್.ಎಮ್. ಸಿಮ್ ಅಳವಡಿಸಿ ರಿಜಿಸ್ಟ್ರೇಷನ್ ಮಾಡಿದ ನಂತರ ಆಟೋಮ್ಯಾಟಿಕ್ ವಿಧಾನದ ಮೂಲಕ ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತದೆ.

**ಅಭಿವೃದ್ಧಿ ಕಾರ್ಯಗಳು:** ಪಂಚಾಯತಿ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆ ಬಗ್ಗೆ SLRM ಘಟಕ, 14ನೇ ಹಣಕಾಸು ಯೋಜನೆಯಡಿಯಲ್ಲಿ OHTಗೆ ಶುದ್ಧಿಕರಣ ಘಟಕ ಅಳವಡಿಕೆ, ಪೈಪ್ ಕಾಂಪೋಸ್ಟ್, ಮಳೆ ನೀರು ಕೊಯ್ಲು, ವಾಟ್ಸಾಪ್ ಗ್ರೂಪ್ ಮುಖಾಂತರ ಗ್ರಾಮಸ್ಥರ ಸಮಸ್ಯೆಗೆ ಸ್ಪಂದನೆ ಮತ್ತು ಎಲ್ಲಾ ರಸ್ತೆಗಳ ಇಕ್ಕೆಲಗಳ ವಿದ್ಯುತ್ ಕಂಬಗಳಿಗೆ ತಗುಲಿದ ಮರದ ಗೆಲ್ಲುಗಳನ್ನು ಗ್ರಾಮಸ್ಥರ ಶ್ರಮದಾನ ಹಾಗೂ ಸಹಕಾರದ ಮೂಲಕ ಕಡಿಯಲಾಗಿದೆ. ಇದರಿಂದ ಗ್ರಾಮದಲ್ಲಿನ ಗ್ರಾಮಸ್ಥರ ವಿದ್ಯುತ್ ಪೂರೈಕೆಯಲ್ಲಿನ ಸಮಸ್ಯೆಯ ಬಗ್ಗೆ ಗ್ರಾಮ ಪಂಚಾಯತಿ ಗ್ರಾಮಸ್ಥರ ಸಹಕಾರದೊಂದಿಗೆ ನಿವಾರಿಸಲು ಪ್ರಯತ್ನಿಸಿದೆ. ಪಂಚಾಯತಿಯು ಮುಂದಿನ ದಿನಗಳಲ್ಲಿ ಸುಸಜ್ಜಿತ ಸ್ಮಶಾನ ರಚನೆ ಹಾಗೂ ಅರ್ಹ ಫಲಾನುಭವಿಗಳಿಗೆ ನಿವೇಶನ ಒದಗಿಸುವ ಗುರಿಯನ್ನು ಹೊಂದಿದೆ.

ಗ್ರಾಮದ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಾ ಬಂದಿರುವ ಗ್ರಾಮ ಪಂಚಾಯತಿಯು ಮೇಲಾಧಿಕಾರಿಗಳು, ಜನ ಪ್ರತಿನಿಧಿಗಳು, ಕಾರ್ಯದರ್ಶಿ, ಸಿಬ್ಬಂದಿಗಳು ಮತ್ತು ಗ್ರಾಮಸ್ಥರ ಸಹಕಾರದಿಂದ "ಗಾಂಧಿ ಗ್ರಾಮ"ಪ್ರಶಸ್ತಿ ಪಡೆಯಲು ಸಾಧ್ಯವಾಯಿತು. ಇದು ಪಂಚಾಯತಿಗೆ ಇನ್ನು ಮುಂದೆಯೂ ವಿವಿಧ ಅಭಿವೃದ್ಧಿ ಕೆಲಸಗಳನ್ನು ಮಾಡಲು ಸ್ಫೂರ್ತಿ ನೀಡಿದೆ.

**ಶ್ರೀಮತಿ ಗೀತಾ ಬಾಳಿಗ**
**ಪಂಚಾಯತ್ ಅಭಿವೃದ್ಧಿ ಅಧಿಕಾರಿ**
**ಆರೂರು ಗ್ರಾ.ಪಂ. ಉಡುಪಿ**

## ಮಾಲವಿ :

ಸ್ಥಳೀಯ ಆಡಳಿತ ಪ್ರಜಾಪ್ರಭುತ್ವದ ತೊಟ್ಟಿಲು. ಜನ ಸಾಮಾನ್ಯರು ಸರ್ಕಾರದ ಆಡಳಿತದಲ್ಲಿ ಭಾಗಿಯಾಗಿಲು ಮತ್ತು ಪ್ರತಿನಿಧಿ ಸರ್ಕಾರದ ಯೋಜನೆಗಳನ್ನು ಯಶಸ್ವಿಯಾಗಿ, ಕಟ್ಟಕಡೆಯ ವ್ಯಕ್ತಿಗೆ ಮುಟ್ಟಿಸಲು ಗ್ರಾಮ ಪಂಚಾಯತಿಗಳು ನಿಜವಾದ ಸ್ಥಳೀಯ ಸರ್ಕಾರಗಳಾಗಬೇಕು. ಭಾರತ ಹಳ್ಳಿಗಳ ದೇಶ. ಗ್ರಾಮಾಭಿವೃದ್ಧಿಯೇ ದೇಶದ ಅಭಿವೃದ್ಧಿ. ಕರ್ನಾಟಕ ಮಧ್ಯ ಭಾಗದಲ್ಲಿನ ಹಾಗೂ ವಿಶ್ವ ಐತಿಹಾಸಿಕ ಪರಂಪರಾ ಪಟ್ಟಿಯಲ್ಲಿರುವ ಹಂಪಿಯಂತಹ ಪ್ರಸಿದ್ಧಿ ಸ್ಥಳವನ್ನು ಹೊಂದಿರುವ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿಗೆ ಸೇರಿರುವ ಗ್ರಾಮ ಪಂಚಾಯತಿಯು ಮಾಲವಿ ಆಗಿದೆ. ಈ ನಿಟ್ಟಿನಲ್ಲಿ ಮಾಲವಿ ಗ್ರಾಮ ಪಂಚಾಯತಿ ಸಾಧನೆ ಮಾಡಿ ಪ್ರಶಕ್ತ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ಪಡೆದಿದೆ.

ಭಾರತ ಸರ್ಕಾರದ ಸ್ವಚ್ಛ ಗ್ರಾಮ ಯೋಜನೆ ಸಹಕಾರಗೊಳ್ಳಲು ಶೌಚಾಲಯ ನಿರ್ಮಾಣದಲ್ಲಿ ಶೇ% 95 ಗುರಿ ಸಾಧಿಸಿದೆ. ಪಂಚಾಯತಿ ವ್ಯಾಪ್ತಿಯ 1415 ಕುಟುಂಬಗಳಲ್ಲಿ 1344 ಕುಟುಂಬಗಳು ಶೌಚಾಲಯ ಹೊಂದಿವೆ. 2018–2019ನೇ ಸಾಲಿನಲ್ಲಿ 10.36 ಲಕ್ಷ ತೆರಿಗೆ ಸಂಗ್ರಹಿಸಿ, ಶೇ.81.44%ರಷ್ಟು ಗುರಿ ಸಾಧಿಸಿದೆ. ನರೇಗಾ ಯೋಜನೆಯಲ್ಲಿ



ವಿವಿಧ ಕಾಮಗಾರಿಗಳ ಎಲ್ಲಾ ಕೂಲಿ ಕಾರ್ಮಿಕರಿಗೆ ರೂ.2.17 ಕೋಟಿ ಪಾವತಿಸಿ, ಶೇ.200% ಗುರಿ ಸಾದಿಸಿದೆ. ವಿವಿಧ ವಸತಿ ಯೋಜನೆಯಲ್ಲಿ 90 ಮನೆಗಳನ್ನು ನಿರ್ಮಿಸಿ, ಶೇ.100% ರಷ್ಟು ನರೇಗಾ ಮತ್ತು ವಸತಿ ಯೋಜನೆಯ ಅನುದಾನ ಬಳಕೆ ಮಾಡಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯ 2 ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿ ಪ್ರತಿ ಮನೆಯ ಎಲ್ಲಾ ಸಾರ್ವಜನಿಕರಿಗೂ ಶುದ್ಧ ಜಲ ಒದಗಿಸಲಾಗಿದೆ.

2 ಗ್ರಾಮದಲ್ಲಿ ಕುಡಿಯುವ ನೀರು, ನೈರ್ಮಲ್ಯ ಮತ್ತು ಬೀದಿ ದೀಪಗಳ ವ್ಯವಸ್ಥೆಗೆ ಆಧ್ಯತೆ ನೀಡಿ, ಪ್ರತಿ ಕಂಬಗಳಿಗೆ ನಿರಂತರ ದೀಪದ ವ್ಯವಸ್ಥೆ ಮಾಡಲು ಕ್ರಮ ಸಂಖ್ಯೆ ನೀಡಿ, ನೇರವಾಗಿ ಸಾರ್ವಜನಿಕರು ದೂರವಾಣಿ ಮೂಲಕ ದೂರು ಸಲ್ಲಿಸಿದ ದಿನವೇ ಬೇಡಿಕೆ ಈಡೇರುವಂತೆ ಮಾಡಿದೆ. ಗ್ರಾಮ ಸಾಕ್ಷರತೆಗೆ ಆದ್ಯತೆ ನೀಡಿದ್ದೂ, ಶೇ.89 ರಷ್ಟು ಸಾಕ್ಷರತೆ ಸಾಧಿಸಿ, ಸಂಪೂರ್ಣ ಸಾಕ್ಷಾರತೆ ಗುರಿಯತ್ತಾ ದಾಪುಗಾಲು ಇರಿಸಿದೆ. ಪ್ರಜೆಗಳ ಅರ್ಜಿಯನ್ನು ಸಕಾಲದಲ್ಲಿ ಪಡೆದು, ನೂರಕ್ಕೆ ನೂರರಷ್ಟು ಸಾಧನೆ ಮಾಡಲಾಗಿದೆ.

ಈ ಸ್ವತ್ತು ಯೋಜನೆಯಲ್ಲಿ ಶತಕ ಭಾರಿಸಿದ ಕೀರ್ತಿ ಮಾಲವಿ ಗ್ರಾಮ ಪಂಚಾಯತಿಯದ್ದು. ಸದರಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯ ನಿರ್ವಹಿತ್ತಿರುವ ಸಿಬ್ಬಂದಿ ವರ್ಗದವರಿಗೆ ಬಯೋಮೆಟ್ರಿಕ್ ವ್ಯವ್ಯಸ್ತೆ ಕಲ್ಪಿಸಿ, ಎಲ್ಲಾವು ಅಚ್ಚುಕಟ್ಟಾಗಿ ನಡೆಸಿದೆ. ಬರ ಪರಿಸ್ಥಿತಿಯಲ್ಲೂ, ಇಲ್ಲಿರುವ ಡ್ಯಾಂ ಬರಿದಾಗಿದ್ದರೂ, ಗ್ರಾಮಗಳ ದಾಹ ಮತ್ತು ಅವಶ್ಯಕತೆಗಳ ಪೂರೈಕೆಗೆ ನೀರು ಒದಗಿಸಲಾಗಿದೆ. ವಾರ್ಡ್ ಸಭೆ, ಗ್ರಾಮ ಸಭೆ, ಜನ ವಸತಿ ಸಭೆ ಸಕಾಲದಲ್ಲಿ ಸಾಮಾನ್ಯ ಸಭೆ ನಡೆಸಿ ಜನರ ಕುಂದು ಕೊರತೆಗಳಿಗೆ ಸ್ಪಂದಿಸಲಾಗಿದೆ. ಜೊತೆಗೆ ಮಕ್ಕಳ ಗ್ರಾಮ ಸಭೆ ಮಹಿಳಾ ಗ್ರಾಮ ಸಭೆ, ಕರ್ನಾಟಕ ಹೈದರಾಬಾದ್ ಅಭಿವೃದ್ಧಿ ಗ್ರಾಮ ಸಭೆ, ನಡೆಸಲಾಗಿದೆ. ಪರಿಸರ ಸ್ವಚ್ಛತೆ ಜೊತೆಗೆ ಪರಿಸರ ನಿರ್ಮಾಣಕ್ಕೆ ಗಿಡಮರಗಳನ್ನು ನೆಡಲಾಗಿದೆ. ಅಲ್ಲದೇ ಪ್ರಾಥಮಿಕ ಶಾಲೆಯಲ್ಲಿ ಉದ್ಯಾನವನ, ಶೌಚಾಲಯ, ಕಾಂಪೌಂಡ್, ನಲಿಕಲಿ ಕೊಠಡಿ, ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಆಟದ ಮೈದಾನ, ಕೈ ತೊಳೆಯುವ ನಳದ ವ್ಯವಸ್ಥೆ ಮಾಡಿದೆ.

ಹಬ್ಬ ಹರಿದಿನಗಳಲ್ಲಿ ಗ್ರಾಮಗಳ ಬೇಡಿಕೆಗೆ ತಕ್ಕಂತೆ ಮೂಲಭೂತ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಲಾಗುತ್ತದೆ. ಪ್ರತಿ ಕಾಮಗಾರಿಯನ್ನು ಸರ್ಕಾರದ ಗುಣಮಟ್ಟಕ್ಕೆ ತಕ್ಕಂತೆ ಎಲ್ಲಾ ನಿಯಮಗಳನ್ನು ಅಳವಡಿಸಿಕೊಂಡು ಜಾರಿಗೆ ತರಲಾಗಿದೆ. ಯೋಜನೆಗಳ ಜಯವೇ ಜನತೆಯ ಅಭ್ಯುದಯ ಎಂಬ ಸೂಕ್ತಿಯಂತೆ ಸರ್ಕಾರದ ಯೋಜನೆಗಳ ಯಶಸ್ವಿಗೆ ಜನರ ಪ್ರಗತಿಗೆ ಕಾರ್ಯ ನಿರ್ವಹಿಸಲಾಗಿದೆ. ಈ ಎಲ್ಲಾ ಯಶಸ್ವಿಗಳ ಹಿಂದೆ ಈ ಭಾಗದ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ.ಎಸ್.ಭೀಮಾ ನಾಯಕ್ ರವರು ಹಾಗೂ ಎಲ್ಲಾ ಹಂತದ ಚುನಾಯಿತ ಪ್ರತಿನಿಧಿಗಳ ಮತ್ತು ಮಾಲವಿ ಗ್ರಾಮ ಪಂಚಾಯತಿಯ ಆದ್ಯಕ್ಷರಾದ ಶ್ರೀಮತಿ. ಕಟಿಗಿ ಬಸಮ್ಮ ಪಕ್ಕೀರಪ್ಪ, ಉಪಾಧ್ಯಕ್ಷರಾದ ಶ್ರೀ.ಹ್ಯಾಳ್ಯಾದ್ ಚನ್ನಬಸಪ್ಪ ಹಾಗೂ ಸರ್ವ ಸದಸ್ಯರನ್ನು ಒಳಗೊಂಡಂತೆ ಪಂಚಾಯತಿ ಅಭಿವೃದ್ಧಿ ಆಧಿಕಾರಿಗಳಾದ ಶ್ರೀ.ಸಿ.ಮಂಜುನಾಥ, ಕಾರ್ಯದರ್ಶಿಗಳಾದ ಶ್ರೀ.ಕೆ.ಕೊಟ್ರೇಶ ಹಾಗೂ ಗ್ರಾಮ ಪಂಚಾಯತಿಯ ಎಡಬಿಡದೇ ನಿರಂತರವಾಗಿ ಸೇವೆ ಸಲ್ಲಿಸುವ ಸಿಬ್ಬಂದಿ ವರ್ಗದವರ ಶ್ರಮ ಮರೆವಂತಿಲ್ಲಾ. ಇದರ ಜೊತೆಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕರ ಸಹನೆ ಸಹಕಾರ ಕೂಡಾ ಬಹಳ ಮುಖ್ಯವಾಗಿದೆ. ಇಲ್ಲಿ ಗುಣಮಟ್ಟದ ರಸ್ತೆ ಚರಂಡಿ ಮತ್ತಿತರ ಕೈಗೊಂಡ ಕಾಮಗಾರಿಗಳು ಎಲ್ಲಾ ಯೋಜನೆಗಳ ಸಾರ್ಥಕತೆಯ ಮೌಲ್ಯಮಾಪನ ಮಾಡಲು ಜಿಲ್ಲಾ ಮತ್ತು ರಾಜ್ಯ ಮಟ್ಟದ ತಂಡಗಳು ಆಗಮಿಸಿ, ಕಾಮಗಾರಿಗಳನ್ನು ಪರಿಶೀಲಿಸಿ ವರದಿ ಸಲ್ಲಿಸಿವೆ. ಇದರೆಲ್ಲದರ ಪರಿಶ್ರಮ ಹಾಗೂ ಕಾಳಜಿಯಿಂದ ಮಾಲವಿ ಗ್ರಾಮ ಪಂಚಾಯತಿಗೆ ಗಾಂಧಿ ಗ್ರಾಮ ಪುರಸ್ಕಾರ ದಕ್ಕಿದೆ ಎಂದರೆ ಅತಿಶಯೋಕ್ತಿಯೇನಲ್ಲ. ಕಾಮಗಾರಿಗಳ ಪಕ್ಷಿ ನೋಟವನ್ನು ಬರಹದಲ್ಲಿ ತೋರಿಸುವುದಕ್ಕಿಂತ ಪ್ರತ್ಯಕ್ಷವಾಗಿ ಪ್ರಮಾಣಿಸಿ ನೋಡಬೇಕು. ಗಾಂಧೀಜಿ ಕಂಡ ಕನಸು ನನಸಾಗಿದೆ. ಜನರ ಪಾಲ್ಗೊಳ್ಳುವಿಕೆ ಹಾಗೂ ಅಧಿಕಾರಿಗಳ ಪ್ರಾಮಾಣಿಕತೆಗೆ ಈ ಪುರಸ್ಕಾರ ಸಾಕ್ಷಿಯಾಗಿದೆ,

ಇದಕ್ಕೆ ತಾಲ್ಲೂಕು ಪಂಚಾಯತಿಯ ಮಾನ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಹಾಗೂ ಜಿಲ್ಲಾ ಪಂಚಾಯತಿಯ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಹಾಗೂ ಇತರೆ ಅಧಿಕಾರಿಗಳ  ಮಾರ್ಗದರ್ಶನವೂ ಕೂಡಾ ಸೇರಿದೆ.

**ಸಿ. ಮಂಜುನಾಥ**
**ಪಂಚಾಯತಿ ಅಭಿವೃದ್ಧಿ ಅಧಿಕಾರಿ,**
**ಮಾಲವಿ ಗ್ರಾ.ಪಂ. ಬಳ್ಳಾರಿ**

ವರದಿ



**ಹೆಚ್ ಆರ್ ರಾಜೇಶ್**

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು
ರಾಜಾನುಕುಂಟೆ ಗ್ರಾಮ ಪಂಚಾಯಿತಿ
ಬೆಂಗಳೂರು ಉತ್ತರ ತಾಲ್ಲೂಕು.

**ಗ್ರಾಮ ಪಂಚಾಯಿತಿಯ ಅಭಿವೃದ್ಧಿಯಷ್ಟೇ ಅಲ್ಲದೆ ಸಾಮಾಜಿಕ ಕ್ಷೇತ್ರಕ್ಕೂ ಒತ್ತುಕೊಟ್ಟು ಶೇ.25ರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳನ್ನು ವಿನೂತನವಾಗಿ ರೂಪಿಸಲಾಗಿದೆ. ಹಾಗೆಯೇ ಶೇ.5ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳನ್ನು ವಿಶೇಷವಾಗಿ ರೂಪಿಸಿ ವೈಯುಕ್ತಿಕವಾಗಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.**

# ಪಂಚಾಯತ್ ಸಶಕ್ತಿಕರಣ ಮತ್ತು ಮಕ್ಕಳ ಸ್ನೇಹಿ ಪುರಸ್ಕಾರ

ರಾಜಾನುಕುಂಟೆ ಗ್ರಾಮ ಪಂಚಾಯಿತಿಯು ಒಂದು ಸಮಗ್ರ ದೂರದೃಷಿಯನ್ನು ಇಟ್ಟುಕೊಂಡು ಆಯವ್ಯಯವನ್ನು ತಯಾರಿಸಿ ಅದರಂತೆ ಕ್ರಿಯಾ ಯೋಜನೆ ರೂಪಿಸಿ ಗ್ರಾಮ ಪಂಚಾಯಿತಿಯನ್ನು ಮಾದರಿ ಗ್ರಾಮ ಪಂಚಾಯಿತಿಯನ್ನಾಗಿಸಲಾಗಿದೆ. ಕಾಲಕಾಲಕ್ಕೆ ತೆರಿಗೆ ಪರಿಷ್ಕರಣೆಯನ್ನು ಮಾಡುತ್ತಾ ಶೇ.80ಕ್ಕೂ ಹೆಚ್ಚು ತೆರಿಗೆ ವಸೂಲಾತಿಯನ್ನು ಮಾಡಲಾಗುತ್ತಿದೆ. ತೆರಿಗೆ ವಸೂಲಾತಿಯ ಜೊತೆಗೆ ಸಂಪನ್ಮೂಲ ಕ್ರೋಡಿಕರಣಕ್ಕೂ ಒತ್ತುಕೊಟ್ಟು ಕೇಬಲ್ ಅಳವಡಿಕೆ ಶುಲ್ಕ, ಲೈಸೆನ್ಸ್ ಶುಲ್ಕ, ವಾಣಿಜ್ಯ ಕಟ್ಟಡಗಳ ನಿರ್ಮಾಣದ ಮೂಲಗಳಿಂದ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ.

ಗ್ರಾಮ ಪಂಚಾಯಿತಿಯು ಘನ ತ್ಯಾಜ್ಯ ವಿಲೇವಾರಿಗಾಗಿ 5 ವಾಹನಗಳನ್ನು ಹೊಂದಿದ್ದು, ಎಲ್ಲಾ 7 ಗ್ರಾಮಗಳಿಗೂ ವಾಹನ ತೆರಳಿ ಹಸಿ ಕಸ ಒಣಕಸವನ್ನು ಮೂಲದಲ್ಲಿಯೇ ವಿಂಗಡಿಸಿ ವಿಲೇವಾರಿ ಮಾಡಲಾಗುತ್ತಿದೆ. ತ್ಯಾಜ್ಯದಿಂದ ಮತ್ತು ತ್ಯಾಜ್ಯ ಶುಲ್ಕ ಸಂಗ್ರಹದಿಂದ ವಾರ್ಷಿಕ 9 ಲಕ್ಷದಷ್ಟು ಆದಾಯಗಳಿಸಲಾಗುತ್ತಿದೆ. ತೊರೆ ಚರಂಡಿಗಳಿಗೆ ಬ್ಲೀಚಿಂಗ್ ಪೌಡರ್ ಸಿಂಪಡಣೆ, ಕಳೆನಾಶಕ ಸಿಂಪಡಣೆ ಮಾಡುತ್ತಾ ನೈರ್ಮಲ್ಯ ಕಾಪಾಡಲಾಗುತ್ತಿದೆ.

ಗ್ರಾಮದ ಎಲ್ಲಾ ಬೀದಿ ದೀಪದ ಕಂಬಗಳಿಗೆ ಎಲ್.ಇ.ಡಿ ದೀಪಗಳನ್ನು ಅಳವಡಿಸಲಾಗುತ್ತಿದ್ದು, ಪ್ರತ್ಯೇಕ ಬೀದಿ ದೀಪದ ಲೈನ್ ಅಳವಡಿಸಲಾಗುತ್ತಿದೆ. ಬೀದಿ ದೀಪದ ಕಂಬಗಳಿಗೆ ಸಂಖ್ಯೆಗಳನ್ನು ನೀಡಲಾಗಿದ್ದು, ದೂರು ಬಂದ ತಕ್ಷಣ ಕ್ರಮವಹಿಸಲಾಗುತ್ತಿದೆ. ಗ್ರಾಮ ಪಂಚಾಯಿತಿಯ ಕಟ್ಟಡಕ್ಕೆ 6 ಕೆ.ವಿ ಸೋಲಾರ್ ಆನ್‌ಗ್ರಿಡ್ ಘಟಕ ಸ್ಥಾಪಿಸಲಾಗಿದ್ದು, 4 ಅಂಗನವಾಡಿಗಳಿಗೂ ತಲಾ 3 ಕೆ.ವಿ ಸಾಮರ್ಥ್ಯದ ಸೋಲಾರ್ ಆನ್‌ಗ್ರಿಡ್ ಘಟಕ ಸ್ಥಾಪಿಸಲಾಗಿದೆ. ಇದರಿಂದ ಉತ್ಪತ್ತಿಯಾದ ವಿದ್ಯುತ್‌ನಿಂದ ಗ್ರಾಮ ಪಂಚಾಯಿತಿಗೆ ಆದಾಯ ಬರುವುದಲ್ಲದೆ ಬೀದಿ ದೀಪ ಅಳವಡಿಕೆಗಾಗಿ ವಿದ್ಯುತ್ ಚಾಲಿತ ವಾಹನವನ್ನು ಸಹ ಓಡಿಸಲಾಗುತ್ತಿದೆ.

ಗ್ರಾಮ ಪಂಚಾಯಿತಿಯ ಎಲ್ಲಾ ಗ್ರಾಮಗಳಿಗೂ ಪಕ್ಕಾ ರಸ್ತೆಗಳ ಅಭಿವೃದ್ಧಿಯಾಗಿದ್ದು, ಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಎಲ್ಲಾ ಹಳ್ಳಿಗಳಿಗೂ ಶುದ್ಧ ನೀರಿನ ಘಟಕಗಳ ಸೌಲಭ್ಯವಿದ್ದು, ತುರ್ತು ಕುಡಿಯುವ ನೀರಿಗಾಗಿ ಸ್ವಂತ ಟ್ಯಾಂಕರ್ ಸೌಲಭ್ಯವನ್ನು ಹೊಂದಲಾಗಿದೆ. ಸಾರ್ವಜನಿಕರಿಗೆ ಸಮುದಾಯ ಶೌಚಾಲಯ, ಸ್ಮಶಾನ ಅಭಿವೃದ್ಧಿ, ಆಟದ ಮೈದಾನ ಅಭಿವೃದ್ಧಿ, ಉದ್ಯಾನವನ ನಿರ್ಮಾಣ, ಸಮುದಾಯ ಭವನಗಳ ನಿರ್ಮಾಣದಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ.

ಗ್ರಾಮ ಸಭೆ, ವಾರ್ಡ್‌ಸಭೆ, ಸಾಮಾನ್ಯ ಸಭೆ, ಸ್ಥಾಯಿ ಸಮಿತಿ, ಉಪ ಸಮಿತಿ, ಜಮಾಬಂಧಿ, ಸಾಮಾಜಿಕ ಲೆಕ್ಕ ಪರಿಶೋಧನೆ, ಕೆ.ಡಿ.ಪಿ ಸಭೆಯಂತಹ ಸಭೆಗಳನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಕಾಲಕಾಲಕ್ಕೆ ನಡೆಸಲಾಗುತ್ತಿದೆ. ಪೀಪಲ್ ಟ್ರಸ್ಟ್‌ನ ಸಹಯೋಗದೊಂದಿಗೆ ರಕ್ತದಾನ ಶಿಬಿರ, ಮಕ್ಕಳ ಗ್ರಾಮ ಸಭೆ, ಬೇಸಿಗೆ ಶಿಬಿರ, ವಾಕಥಾನ್, ಸರಳ ವಿವಾಹ, ವಿಶ್ವಯೋಗ ದಿನಾಚರಣೆ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ, ಟೈಲರಿಂಗ್ ತರಬೇತಿ, ವಿಶ್ವ ಆಹಾರ ದಿನಾಚರಣೆ, ಜಲಾಮೃತ, ಪೌಷ್ಟಿಕ ಆಹಾರ ದಿನಾಚರಣೆ, ಗುಡಿ ಕೈಗಾರಿಕೆ ತರಬೇತಿಯಂತಹ ಅನೇಕ ಜನೋಪಯೋಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಎಂ.ಜಿ.ಎನ್.ಆರ್.ಇ.ಜಿ ಯೋಜನೆಯಡಿ ದನದದೊಡ್ಡಿ ನಿರ್ಮಾಣ, ವಸತಿ ಯೋಜನೆ ಅರಣ್ಯೀಕರಣದಂತಹ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅಲ್ಲದೆ ಗ್ರಾಮ ಪಂಚಾಯಿತಿಯೂ ಒಂದು ಸ್ವಂತ ನರ್ಸರಿಯನ್ನು ಹೊಂದಿದ್ದು, ಪ್ರತಿ ವರ್ಷ ಎನ್.ಎಸ್.ಎಸ್, ಸಂಘ ಸಂಸ್ಥೆಗಳೊಂದಿಗೆ 1000ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತಿದೆ. ಮಳೆ ನೀರು ಕೊಯ್ಲು, ಚೆಕ್ ಡ್ಯಾಂ ನಿರ್ಮಾಣ, ಕುಂಟೆ ಅಭಿವೃದ್ದಿ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಳ್ಳಲಾಗಿದೆ.

ಗ್ರಾಮ ಪಂಚಾಯಿತಿಯ ಅಭಿವೃದ್ದಿಯಷ್ಟೇ ಅಲ್ಲದೆ ಸಾಮಾಜಿಕ ಕ್ಷೇತ್ರಕ್ಕೂ ಒತ್ತುಕೊಟ್ಟು ಶೇ.25ರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳನ್ನು ವಿನೂತನವಾಗಿ ರೂಪಿಸಲಾಗಿದೆ. ಹಾಗೆಯೇ ಶೇ.5ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳನ್ನು ವಿಶೇಷವಾಗಿ ರೂಪಿಸಿ ವೈಯುಕ್ತಿಕವಾಗಿ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಶವ ಪೆಟ್ಟಿಗೆ, ಫಿಟ್ ಇಂಡಿಯಾ, ಡಿಜಿಟಲ್ ಲೈಬ್ರರಿ, ಬಳಸಿದ ವಸ್ತುಗಳನ್ನು ಅಗತ್ಯವಿರುವವರಿಗೆ ನೀಡುವ ಘಟಕ ಮುಂತಾದ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶೇ.2ರ ಯುವಜನ ಕ್ರೀಡಾ ಕಲ್ಯಾಣ ಕಾರ್ಯಕ್ರಮದಲ್ಲಿ ಕ್ರೀಡಾಪಟುಗಳಿಗೆ ಅನೇಕ ಪ್ರಯೋಜನಗಳನ್ನು ಕಲ್ಪಿಸಲಾಗಿತ್ತು. ಗ್ರಾಮವಾರು ಮಕ್ಕಳು, ಮಹಿಳೆಯರು ಮತ್ತು ಯುವಕರ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ. ವಸತಿ ಯೋಜನೆ, ಎಂ.ಜಿ.ಎನ್.ಆರ್.ಇ.ಜಿ.ಎ, ಇ–ಸ್ವತ್ತು, ಕಖಖಂ ಖಂಜಿಣ, ಗಾಂಧಿ ಸಾಕ್ಷಿ ಕಾಯಕ, ಮಿಷನ್ ಅಂತ್ಯೋದಯ, ಎಲ್ಲಾ ಯೋಜನೆಗಳನ್ನು ತಂತ್ರಾಂಶ ಮತ್ತು ಮೊಬೈಲ್ ಅಪ್ಲಿಕೇಷನ್ ಅಳವಡಿಸಿಕೊಳ್ಳಲಾಗಿದೆ.

ರಾಜಾನುಕುಂಟೆ ಗ್ರಾಮ ಪಂಚಾಯಿತಿಯು ಅಭಿವೃದ್ದಿ ನೈರ್ಮಲ್ಯ, ಆರೋಗ್ಯ, ಸಾಮಾಜಿಕ, ಉತ್ಪಾದನಾ ಕ್ಷೇತ್ರಗಳಿಗೂ ಒತ್ತುಕೊಟ್ಟಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೂ ಒತ್ತು ನೀಡಲಾಗಿದೆ. ಪ್ರತಿ ವರ್ಷವೂ 20 ಲಕ್ಷಕ್ಕೂ ಹೆಚ್ಚು ಅನುದಾನವನ್ನು ಮೀಸಲಿರಿಸಿ ಮಕ್ಕಳಿಗಾಗಿ ನೇರವಾಗಿ ವ್ಯಯಿಸಲಾಗುತ್ತಿದೆ. ಎಸ್.ಡಿ.ಎಂ.ಸಿ, ಬಾಲವಿಕಾಸ ಸಮಿತಿಗಳನ್ನು ನಿಯಮಿತವಾಗಿ ನಡೆಸುತ್ತಾ ಮಕ್ಕಳ ಅಂಕಿ ಅಂಶಗಳನ್ನು ಸಂಗ್ರಹಿಸುತ್ತಾ ಅವರ ಬೇಡಿಕೆಗಳಿಗೆ ಸ್ಪಂದಿಸಲಾಗುತ್ತಿದೆ. ವಿದ್ಯಾರ್ಥಿ ವೇತನ, ಪಠ್ಯ ಪರಿಕರಗಳು, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಪ್ರಶ್ನಾವಳಿ ಪುಸ್ತಕಗಳು, ಕ್ರೀಡಾ ಪರಿಕರಗಳು, ಲ್ಯಾಪ್‌ಟಾಪ್ ಇನ್ನಿತರೆ ಸೌಕರ್ಯಗಳನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿಯೇ ವಿನೂತನವಾಗಿ ಮಕ್ಕಳಿಂದ ಮಕ್ಕಳಿಗಾಗಿ ಮಕ್ಕಳಿಗೋಸ್ಕರ ಅರ್ಥಪೂರ್ಣ ಮಕ್ಕಳ ಗ್ರಾಮ ಸಭೆ ನಡೆಸಲಾಗುತ್ತಿದೆ. ಹಾಗೆಯೇ ಅಂಗನವಾಡಿಗಳಿಗೆ ಚಿತ್ರಕಲೆ, ಆಟಿಕೆ ಸಾಮಗ್ರಿ, ಸಮವಸ್ತ್ರ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಮಾದರಿಯಾಗಿ ಮಕ್ಕಳ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದಕ್ಕಾಗಿ 2017–18ನೇ ಸಾಲಿನ ಮಕ್ಕಳ ಸ್ನೇಹಿ ಪಂಚಾಯತ್ ಮತ್ತು 2017–18ನೇ ಸಾಲಿನ ದೀನ್‌ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರ ಮತ್ತು 2018–19ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರವನ್ನು ಪಡೆಯಲಾಗಿದೆ. ❖



# ಚಿಂತನ–ಮಂಥನ ಸಮಾವೇಶ

ವರದಿ

ಕೆ ಎಸ್ ಮನೋಜ್‌ಕುಮಾರ್
ಬೋಧಕರು, ಅನಸಾ ರಾಗ್ರಾ
ಮತ್ತು ಪಂರಾಜ್ ಸಂಸ್ಥೆ,
ಮೈಸೂರು

ಕೆ ಆರ್ ಶಂಕರ
ಬೋಧಕರು, ಅನಸಾ ರಾಗ್ರಾ
ಮತ್ತು ಪಂರಾಜ್ ಸಂಸ್ಥೆ,
ಮೈಸೂರು

**ಈ ಸಮಾವೇಶದಲ್ಲಿ ಬರುವ ಹಿಮ್ಮಾಹಿತಿಗಳು, ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಪರಿಗಣಿಸಿಕೊಂಡು ಸರ್ಕಾರದ ಹಿತಿಮಿತಿಯಲ್ಲಿ ಉತ್ತಮ ಪಡಿಸಲಾಗುವುದು. ಇದಕ್ಕೆ ಪೂರಕವಾಗಿ ಪ್ರತಿಯೊಂದು ಗ್ರಾಮ ಪಂಚಾಯತಿಯಿಂದ ಒಂದು ಹಾಳೆಯಲ್ಲಿ, ತಮ್ಮ ಪಂಚಾಯತಿ ವ್ಯಾಪ್ತಿಯಲ್ಲಿ ಎದುರಿಸುತ್ತಿರುವ ಪ್ರಮುಖ ಮೂರು ವಿಷಯಗಳನ್ನು ಲಿಖಿತವಾಗಿ ಪ್ರಸ್ತಾಪಿಸಲು ಸಲಹೆ ನೀಡಿದರು.**

ರಾಜ್ಯದ ಉತ್ತಮ ಸಾಧನೆಗೈದ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಚಿಂತನ–ಮಂಥನ ಸಮಾವೇಶವನ್ನು ದಿನಾಂಕ 02ನೇ ನವಂಬರ್, 2019 ರಂದು ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್ ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ, ಡಾ. ಬಾಬು ರಾಜೆಂದ್ರ ಪ್ರಸಾದ್ ಅಂತರ ರಾಷ್ಟ್ರಿಯ ಸಮಾವೇಶ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಇಲ್ಲಿ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೈಸೂರು, ವತಿಯಿಂದ ಆಯೋಜಿಸಲಾಗಿತ್ತು.

ರಾಜ್ಯ ಸಕಾರವು ವಾಡಿಕೆಯಂತೆ ಪ್ರತಿ ವರ್ಷ ಅಕ್ಟೋಬರ್ 2 ರಂದು ಗಾಂಧಿ ಗ್ರಾಮ ಪುರಸ್ಕಾರವನ್ನು ಉತ್ತಮ ಸಾಧನೆಗೈದ ಗ್ರಾಮ ಪಂಚಾಯತಿಗಳಿಗೆ ಪ್ರತಿ ತಾಲ್ಲೂಕಿಗೆ ಒಂದರಂತೆ ಪ್ರಶಸ್ತಿ ಹಾಗೂ ರೂ.5.00 ಲಕ್ಷಗಳ ನಗದು ಬಹುಮಾನವನ್ನು 2013–14 ನೇ ಸಾಲಿನಿಂದ ನೀಡುತ್ತಾ ಬಂದಿದೆ. ಈ ಪ್ರಶಸ್ತಿಯನ್ನು ಪಡೆಯಲು ತಾಲ್ಲೂಕಿನಲ್ಲಿ, ಆನ್ ಲೈನ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಗೆ ಸಂಬಂಧಿಸಿದಂತೆ, ಹಲವಾರು ಮಾನದಂಡಗಳನ್ನು ಪೂರೈಸಿದ ಪಂಚಾಯತಿಗಳು ನಿಗಧಿ ಪಡಿಸಿದ ಒಟ್ಟು 150 ಅಂಕಗಳ ಪೈಕಿ, ಗರಿಷ್ಟ ಅಂಕ ಪಡೆದ 5 ಗ್ರಾಮ ಪಂಚಾಯತಿಗಳನ್ನು ಪ್ರಥಮ ಹಂತದಲ್ಲಿ ಆಯ್ಕೆ ಮಾಡಲಾಗುತ್ತದೆ. ಎರಡನೇ ಹಂತದಲ್ಲಿ ಜಿಲ್ಲಾ ಪಂಚಾಯತಿ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಮರು ಮೌಲ್ಯಮಾಪನವನ್ನು ಮಾಡಿ, ತಾಲ್ಲೂಕಿಗೆ ಒಂದರಂತೆ ಗರಿಷ್ಟ ಅಂಕ ಪಡೆದ ಒಂದು ಗ್ರಾಮ ಪಂಚಾಯತಿಯನ್ನು ಆಯ್ಕೆ ಮಾಡಲಾಗುತ್ತದೆ. ಹೀಗೆ ಆಯ್ಕೆಯಾದ ಗ್ರಾಮ ಪಂಚಾಯತಿಗಳಿಗೆ ಪ್ರಶಸ್ತಿ ಹಾಗೂ ನಗದು ಪುರಸ್ಕಾರವನ್ನು ನೀಡುವ ಮೂಲಕ ಪಂಚಾಯತಿಗಳ ನಡುವೆ ಆರೋಗ್ಯಕರ ಪೈಪೋಟಿಗೆ ಬೆಂಬಲ ನೀಡುತ್ತಿದೆ.

ಈ ಆರೋಗ್ಯಕರ ಪೈಪೋಟಿಯಲ್ಲಿ ಅತ್ಯಲ್ಪ ಕಡಿಮೆ ಅಂತರದಲ್ಲಿ ಕೆಲವು ಗ್ರಾಮ ಪಂಚಾಯತಿಗಳು ಎರಡನೇ ಮತ್ತು ಮೂರನೇ ಸ್ಥಾನವನ್ನು ಗಳಿಸಿವೆ. ಪುರಸ್ಕಾರದಿಂದ ವಂಚಿತರಾದ ಗ್ರಾಮ ಪಂಚಾಯತಿಗಳನ್ನು ಹುರಿದುಂಬಿಸುವ ನಿಟ್ಟಿನಲ್ಲಿ, ಇಲಾಖೆಯು ಇದೇ ಮೊದಲ ಬಾರಿಗೆ ಅಂಕಗಳಲ್ಲಿ ಎರಡನೇ ಸ್ಥಾನ ಹಾಗೂ ಮೂರನೇ ಸ್ಥಾನವನ್ನು ತಾಲ್ಲೂಕು ಮಟ್ಟದಲ್ಲಿ ಪಡೆದ ಪಂಚಾಯತ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ರಾಜ್ಯದ 528 ಗ್ರಾಮ ಪಂಚಾಯತಿಗಳಿಂದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಚಿಂತನ–ಮಂಥನ ಸಮಾವೇಶಕ್ಕೆ ಆಹ್ವಾನಿಸಲಾಗಿತ್ತು.

ಇಲಾಖೆಯ ಸಚಿವರು ಗಿಡಕ್ಕೆ ನೀರೆರೆಯುವುದರ ಮೂಲಕ ಸಮಾವೇಶವನ್ನು ಉದ್ಘಾಟನೆ ಮಾಡಿ ಸರ್ಕಾರದ ಆಶಯದಂತೆ, ರಾಜ್ಯದ ಕೆಲವು ಗ್ರಾಮ ಪಂಚಾಯತಿಗಳಲ್ಲಿ ಅನುಸರಿಸಿರುವ ವಿನೂತನ ಪ್ರಯತ್ನಗಳು, ರಾಜ್ಯದಾದ್ಯಂತ ಇತರೆ ಗ್ರಾಮ ಪಂಚಾಯತಿಗಳಿಗೆ ವಿಸ್ತರಣೆಯಾಗಬೇಕೆಂದು ಆಶಯವನ್ನು ವ್ಯಕ್ತಪಡಿಸಿ, ಗ್ರಾಮಗಳ ಅಭಿವೃದ್ಧಿಯಲ್ಲಿ ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯತಿಗಳ ಪಾತ್ರವು ಬಹಳ ಮುಖ್ಯವಾಗಿದೆ. ವಿನೂತನ ಪ್ರಯತ್ನಗಳ ಮೂಲಕ ಅಭಿವೃದ್ಧಿಯನ್ನು ಸಾಕಾರಗೊಳಿಸಿದ




ಗ್ರಾಮ ಪಂಚಾಯತಿ ಅಧ್ಯಕ್ಷರುಗಳನ್ನು ಮತ್ತು ಚುನಾಯಿತ ಪ್ರತಿನಿಧಿಗಳನ್ನು ಶ್ಲಾಘಿಸಿದರು. ಕಾರ್ಯಾಗಾರದಲ್ಲಿ ಭಾಗವಹಿಸಿರುವ ಆಯ್ದ ಗ್ರಾಮ ಪಂಚಾಯತಿಗಳಿಂದ ಸಾಧನೆಯನ್ನು ಪರಿಚಯಿಸುವ ಮೂಲಕ ರಾಜ್ಯದ ಇತರೆ ಗ್ರಾಮ ಪಂಚಾಯತ್‌ಗಳು ಪ್ರೇರಣೆಗೊಳ್ಳುವಂತೆ ಮಾಡುವುದು ಈ ನೂತನ ಚಿಂತನ-ಮಂಥನ ಸಮಾವೇಶದ ಆಶಯವಾಗಿದೆ. ಈ ಸಮಾವೇಶದಲ್ಲಿ ಬರುವ ಹಿಮ್ಮಾಹಿತಿಗಳು, ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಪರಿಗಣಿಸಿಕೊಂಡು ಸರ್ಕಾರದ ಹಿತಿಮಿತಿಯಲ್ಲಿ ಉತ್ತಮ ಪಡಿಸಲಾಗುವುದು. ಇದಕ್ಕೆ ಪೂರಕವಾಗಿ ಪ್ರತಿಯೊಂದು ಗ್ರಾಮ ಪಂಚಾಯತಿಯಿಂದ ಒಂದು ಹಾಳೆಯಲ್ಲಿ, ತಮ್ಮ ಪಂಚಾಯತಿ ವ್ಯಾಪ್ತಿಯಲ್ಲಿ ಎದುರಿಸುತ್ತಿರುವ ಪ್ರಮುಖ ಮೂರು ವಿಷಯಗಳನ್ನು ಲಿಖಿತವಾಗಿ ಪ್ರಸ್ತಾಪಿಸಲು ಸಲಹೆ ನೀಡಿದರು. ಆ ಮೂಲಕ ಸರ್ಕಾರದ ಮಟ್ಟದಲ್ಲಿ. ಇದನ್ನು ಅಭ್ಯಜಿಸಿ, ಮುಂದಿನ ದಿನಗಳಲ್ಲಿ, ಆಗಬೇಕಾದ ಕ್ರಮಗಳ ಬಗ್ಗೆ ತೀರ್ಮಾನ ತೆಗೆದುಕೊಂಡು ಪಂಚಾಯತಿಗಳನ್ನು ಇನ್ನಷ್ಟು ಸದೃಡಗೊಳಿಸಲಾಗುವುದೆಂದು ತಿಳಿಸಿದರು.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಕನಸಾದ ಫಿಟ್ ಇಂಡಿಯಾ ಬಗ್ಗೆ ಪ್ರಸ್ತಾಪಿಸಿ, ಆರೋಗ್ಯದ ಮಹತ್ವನ್ನು ಸಾರಿದರು, ಸುಧಾರಿತ ಆರೋಗ್ಯ-ಸದೃಡ ದೇಶಕ್ಕೆ ಸಹಕಾರಿ ಎಂಬಂತೆ, ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬಯಲು ಜಿಮ್‌ಗಳನ್ನು ಪ್ರಾರಂಭಿಸುವ ಅವಶ್ಯಕತೆಯನ್ನು ವಿವರಿಸಿದರು. ಸನ್ಮಾನ್ಯ ಸಚಿವರು ಸಕ್ರಿಯವಾಗಿ ಭಾಗವಹಿಸಿ ಇಂಗ್ಲೀಷ್‌ನ ನಾಣ್ಣುಡಿಯಂತೆ, "A Good Leader- is Good Listener Too" ನೆರೆದಿದ್ದ ಎಲ್ಲಾ ಆಹ್ವಾನಿತರುಗಳಿಗೆ ಮಾದರಿಯಾದರು.

ಚಿಂತನ-ಮಂಥನ ಸಮಾವೇಶದ ಕುರಿತು ಪ್ರಾಸ್ತಾವಿಕ ನುಡಿಗಳನ್ನು ಶ್ರೀಮತಿ ಉಮಾ ಮಹಾದೇವನ್, ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರು ಹಾಗೂ ಆಶಯ ನುಡಿಗಳನ್ನು ಡಾ.ನಾಗಾಂಬಿಕಾದೇವಿ, ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರವರು ನೀಡಿದರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಸಮಾವೇಶದಲ್ಲಿ ಉಪಸ್ಥಿತರಿದ್ದರು.

ಚಿಂತನ-ಮಂಥನ ಸಮಾವೇಶದ ವಿನೂತನತೆಯೆಂದರೆ, 4 ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಪ್ರತಿ ಗೋಷ್ಠಿಯಲ್ಲಿ ಸಾಧನೆಗೈದ ನಾಲ್ಕು ಗ್ರಾಮ ಪಂಚಾಯತಿಗಳಿಂದ ಅಧ್ಯಕ್ಷರು, ತಮ್ಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಮಾಡಿರುವ ಸಾಧನೆಯನ್ನು ಮಂಡಿಸಿದರು. ಪಂಚಾಯತ್‌ನ ಯಶಸ್ಸಿನ ಗುಟ್ಟೇನು ಎಂಬುದರ ಬಗ್ಗೆ ಯಾವುದೇ ತಜ್ಞರುಗಳಿಗೆ ಕಡಿಮೆಯೆನಿಸದೇ ವಿಷಯವನ್ನು ಮಂಡಿಸಿ, ಆ ಮೂಲಕ ಭಾಗವಹಿಸಿದ ಇತರೆ ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಅಧಿಕಾರಿ ವರ್ಗದವರನ್ನು ಪ್ರೇರೆಪಿಸಿದರು. ಗ್ರಾಮ ಪಂಚಾಯಿತಿ ಸಭೆಗಳು, ಸ್ಥಾಯಿ

ಸಮಿತಿ ಸಭೆಗಳು, ಸಮಿತಿಗಳು, ಗ್ರಾಮ ಸಭೆ, ಮಕ್ಕಳ ಗ್ರಾಮ ಸಭೆ, ಮಹಿಳಾ ಗ್ರಾಮ ಸಭೆ, ಇ. ಆಡಳಿತ ಇವುಗಳ ಮಹತ್ವ ಹಾಗೂ ಕಾರ್‍ಯ್ದಯಲ್ಲಿನ ಪೂರಕ ಅಂಶಗಳು ಶ್ರೀ ಅಶ್ರಫುಲ್ ಹಸನ್, ನಿರ್ದೇಶಕರು – ಪಂಚಾಯತ್ ರಾಜ್ –1 ರವರು ಮಂಡಿಸಿದರು.

ಗ್ರಾಮ ಪಂಚಾಯತ್ ಸಂಪನ್ಮೂಲ ಕ್ರೋಡಿಕರಣ ಹಾಗೂ ಬಳಕೆ– ತೆರಿಗೆ ಸಂಗ್ರಹ, ಪರಿಷ್ಕರಣೆ, ಶಾಸನ ಬದ್ದ ಅನುದಾನ ಹಣಕಾಸು ಆಯೋಗದ ಅನುದಾನ. ವಿಷಯದ ಕುರಿತು ಶ್ರೀ.ಪಿ.ಶಿವಶಂಕರ್, ನಿರ್ದೇಶಕರು – ಪಂಚಾಯತ್ ರಾಜ್ –1 ಮತ್ತು ಅನಸಾ ರಾಗ್ರಾ ಮತ್ತು ಪಂರಾಜ್ ಸಂಸ್ಥೆ, ಮೈಸೂರುರವರು ಮಂಡಿಸಿದರು. ಈ ವಿಷಯಕ್ಕೆ ಪೂರಕವಾಗಿ ನಾಲ್ಕು ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳು ತಮ್ಮ–ತಮ್ಮ ಗ್ರಾಮ ಪಂಚಾಯತಿಯ ಸಾಧನೆಗಳನ್ನು ವಿವರಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರಿಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಸ್ವಚ್ಛ ಭಾರತ್ ಅಭಿಯಾನ ಮೊದಲಿಗೆ ಮಹತ್ಮ ಗಾಂಧಿ ರಾಷ್ಟ್ರಿಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕುರಿತು ಶ್ರೀ ಶ್ರೀನಿವಾಸ ಮಾರಂಗಪ್ಪ, ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯರವರು ಮಂಡಿಸಿದರು ಹಾಗೂ ಸ್ವಚ್ಛ ಭಾರತ್ ಅಭಿಯಾನದ ಕುರಿತು ಶ್ರೀಯುತ ಹರೀಶ್, ಸಹಾಯಕ ನಿರ್ದೇಶಕರು, ವಿಷಯವನ್ನು ಮಂಡಿಸಿದರು. ಈ ವಿಷಯಗಳಿಗೆ ಪೂರಕವಾಗಿ ಬಾಗಲಕೋಟೆ, ಮಂಡ್ಯ, ರಾಮನಗರ, ಬಳ್ಳಾರಿ, ಧಾರವಾಡ, ಬೆಂಗಳೂರು ಗ್ರಾಮಾಂತರ ಪಂಚಾಯತಿಗಳ ಅಧ್ಯಕ್ಷರುಗಳು ತಮ್ಮ–ತಮ್ಮ ಗ್ರಾಮ ಪಂಚಾಯತಿಯ ಸಾಧನೆಗಳನ್ನು ವಿವರಿಸಿದರು.

## ಇತರೆ ಕಾರ್ಯಕ್ರಮಗಳ ಅನುಷ್ಠಾನ

ಶಾಲೆ, ಅಂಗನವಾಡಿ, ಆಸ್ಪತೆ, ಪಶುಚಿಕಿತ್ಸಾಲಯ, ವಿದ್ಯಾರ್ಥಿ ನಿಲಯಗಳಿಗೆ ಸೌಕರ್ಯ ಕಲ್ಪಿಸುವಿಕೆ, ಡಿಜಿಟಲ್ ಲೈಬ್ರರಿ ಸ್ಥಾಪನೆ ಇತ್ಯಾದಿ ವಿನೂತನ ಪ್ರಯತ್ನಗಳು. ಈ ಅಧಿವೇಶನದಲ್ಲಿ ಶ್ರೀಮತಿ ಉಮಾಮಹದೇವನ್, ಪ್ರಧಾನ ಕಾರ್ಯದರ್ಶಿಗಳು, ಪಂಚಾಯತ್ ರಾಜ್ ಇವರು ಹಲವಾರು ಸರ್ಕಾರದ ಯೋಜಗಳ ಒಗ್ಗೂಡಿಸುವಿಕೆ ಕುರಿತು ವಿಶೇಷವಾಗಿ ನರೇಗಾ ಯೋಜನೆ ಒಗ್ಗೂಡಿಸುವಿಕೆ ಬಗ್ಗೆ ಪ್ರಸ್ತಾಪಿಸಿದರು. ವಿಶೇಷವಾಗಿ ಅಂಗನವಾಡಿ ಹಾಗೂ ಶಾಲೆಗಳ ಸರ್ವಾಂಗಿಣ ಅಭಿವೃದ್ಧಿಗೆ ಪಂಚಾಯಿತಿಗಳು ತಮ್ಮನ್ನು ತಾವು ಹೇಗೆ ತೊಡಗಿಸಿಕೊಳ್ಳಬಹುದೆಂದು ತಿಳಿಸಿದರು. ನಂತರ ಶ್ರೀ. ವಿಕಾಸ್ ಕಿಶೋರ್ ಸುರಾಳಕರ್, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ರವರು ಈ ಹಿಂದೆ ವಿಜಯಪುರ ಜಿಲ್ಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಾಗ ಡಿಜಿಟಲ್ ಲೈಬ್ರರಿಯನ್ನು ಪಂಚಾಯಿತಿ ಮಟ್ಟದಲ್ಲಿ ಸಾಕಾರಗೊಳಿಸುವುದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳ ಸರ್ವಾಂಗಿಣ ಅಭಿವೃದ್ಧಿಗೆ ಪೂರಕವಾಗಿರುವ ಬಗ್ಗೆ ವಿಷಯ ಮಂಡಿಸಿದರು. ಈ ವಿಷಯಗಳಿಗೆ ಪೂರಕವಾಗಿ ಉತ್ತರ ಕನ್ನಡ, ಮೈಸೂರು, ಬೆಂಗಳೂರು ಗ್ರಾಮಾಂತರ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳು ತಮ್ಮ–ತಮ್ಮ ಗ್ರಾಮ ಪಂಚಾಯತಿಯ ಸಾಧನೆಗಳನ್ನು ವಿವರಿಸಿದರು.

## ಚಿಂತನ–ಮಂಥನ ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳು:

ಸಾಧನೆಗೈದಿರುವ ಪಂಚಾಯತಿಗಳ ಅನುಭವ ಹಂಚಿಕೆ ಮತ್ತು ನೆರೆದಿದ್ದ ಇತರೆ ಗ್ರಾಮ ಪಂಚಾಯತಿಗಳ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಅಭಿಪ್ರಾಯಗಳಂತೆ ಗ್ರಾಮ ಪಂಚಾಯಿತಿಗಳು ನಡೆಸಬೇಕಾದ ಸಾಮಾನ್ಯ ಸಭೆಗಳು ಕಡ್ಡಾಯವಾಗಿ ನಡೆಸುವುದು, ಗ್ರಾಮ ಪಂಚಾಯಿತಿಗಳು ಕೆ.ಡಿ.ಪಿ. ಸಭೆಗಳನ್ನು ವರ್ಷಕ್ಕೆ 4 ಬಾರಿ ಕಡ್ಡಾಯವಾಗಿ ನಡೆಸುವುದು, ಗ್ರಾಮ ಪಂಚಾಯಿತಿಗಳು ಕಾಲ ಕಾಲಕ್ಕೆ ತೆರಿಗೆ ಪರಿಷ್ಕರಣೆ ಮಾಡಿ ಶೇ.100 ರಷ್ಟು ವಸೂಲಿ ಮಾಡುವುದು, ಗ್ರಾಮ ಪಂಚಾಯಿತಿಗಳು ಸೋಲಾರ್ ತಾಂತ್ರಿಕತೆ ಬಳಸಿ, ವಿದ್ಯುತ್ ಬಿಲ್ಲನ್ನು ಕಡಿಮೆಗೊಳಿಸುವುದು, ಗ್ರಾಮ ಪಂಚಾಯಿತಿಗಳು ಬಯಲು ವ್ಯಾಯಾಮ ಶಾಲೆ ಅಭಿವೃದ್ಧಿಗೊಳಿಸುವತ್ತ ಕ್ರಮವಹಿಸುವುದು, ಗ್ರಾಮ ಪಂಚಾಯಿತಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಂಗನವಾಡಿ, ಶಾಲೆಗಳ ಕಾಪೌಂಡ್ ನಿರ್ಮಾಣ, ಕೈತೋಟ ಅಭಿವೃದ್ಧಿ, ಸ್ತ್ರೀಶಕ್ತಿ ಗುಂಪುಗಳಿಗೆ ವರ್ಕ್‌ಶೆಡ್ಡ್‌ಗಳ ನಿರ್ಮಾಣವನ್ನು ಕೈಗೊಳ್ಳುವುದು, ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಪ್ಲಾಸ್ಟಿಕ್ ನಿಷೇಧವನ್ನು ಕಡ್ಡಾಯಗೊಳಿಸುವುದು, ಗ್ರಾಮ ಪಂಚಾಯಿತಿಗಳ ಲೈಬ್ರರಿಗಳನ್ನು ಡಿಜಿಟಲ್ ಲೈಬ್ರರಿಗಳನ್ನಾಗಿ ಉನ್ನತೀಕರಿಸುವುದು, ಗ್ರಾಮ ಪಂಚಾಯಿತಿಗಳ ಎಲ್ಲಾ ಅಂಗನವಾಡಿ ಹಾಗೂ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯವನ್ನು ಒದಗಿಸುವುದು. ಆಟದ ಮೈದಾನಗಳ ಅಭಿವೃದ್ಧಿ ಮಾಡುವುದು ಹಾಗೂ ಶೇಕಡಾ 100ರಷ್ಟು ದಾಖಾಲಾತಿ ಮತ್ತು ಹಾಜರಾತಿಯನ್ನು ಖಾತರಿಪಡಿಸುವುದು, ವ್ಯಾಯಾಮ ಶಾಲೆ ಮತ್ತು ಸೋಲಾರ್ ತಾಂತ್ರಿಕತೆಯನ್ನು ಮುಂದಿನ ಚುನಾವಣೆ ಅವಧಿಯೊಳಗೆ ಅನುಷ್ಠಾನಗೊಳಿಸುವಂತೆ ಮತ್ತು ಅಭಿವೃದ್ಧಿಗೊಳಿಸುವಂತೆ ಕ್ರಮವಹಿಸಲು ಪ್ರರೇಪಿಸಿದರು.

❖

ವರದಿ



ಸುನೀಲ್ ಹೆಚ್.ಕೆ (ಸಾಬಣ್ಣ)

ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕರು,
ತಾಲೂಕ ಅಭಿಯಾನ ನಿರ್ವಹಣಾ ಘಟಕ,
ಸಂಜೀವಿನಿ ಯೋಜನೆ, ತಾ.ಪಂ
ಕೊಪ್ಪಳ.

**ಪ್ರತಿ ನೆರೆ ಸಂತ್ರಸ್ಥ ಕುಟುಂಬಕ್ಕೆ 20 ಕೆಜಿ ಅಕ್ಕಿ, 2 ಕೆಜಿ ಜೋಳ, 1/2 ಕೆಜಿ ತೊಗರಿ ಬೇಳೆ, 1/2 ಕೆಜಿ ಸಕ್ಕರೆ, 2 ಬಿಸ್ಕೀಟ್ ಪ್ಯಾಕ್, 2 ಸೀರೆ, 1 ಲುಂಗಿ ಮತ್ತು ಪೌಷ್ಟಿಕ ಆಹಾರ ಪಾಕೆಟ್, 1 ಬಟ್ಟೆ ಸೋಪ್, ಪೇಸ್ಟ್, ಕೊಬ್ಬರಿ ಎಣ್ಣೆ, ಇತ್ಯಾದಿ ಅಗತ್ಯ ವಸ್ತುಗಳನ್ನು ಗ್ರಾಮ ಪಂಚಾಯತಿಯಿಂದ ನೀಡಲಾದ ಬಟ್ಟೆ ಬ್ಯಾಗ್‌ನಲ್ಲಿ ಪ್ಯಾಕ್ ಮಾಡಿ ಎಲ್ಲಾ 180 ನೆರೆ ಸಂತ್ರಸ್ಥ ಕುಟುಂಬಗಳಿಗೆ ವಿತರಣೆ ಮಾಡಲಾಯಿತು.**

# ನೆರೆ ಸಂತ್ರಸ್ತರಿಗೆ ನೆರವಾದ ಸಂಜೀವಿನಿ ಒಕ್ಕೂಟ

ಗ್ರಾಮೀಣ ಪ್ರದೇಶದ ಬಡತನವನ್ನು ನಿರ್ಮೂಲನೆ ಮಾಡಲು ಬಂದಂತಹ ಹಲವಾರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳಂತೆ ಪ್ರಸ್ತುತ ಗ್ರಾಮೀಣ ಪ್ರದೇಶದ ಬಡತನದ ತೀವ್ರತೆಯನ್ನು ಕಡಿಮೆ ಮಾಡುವ ಮುಖ್ಯ ಧ್ಯೇಯವನ್ನು ಹೊಂದಿ ಜಾರಿಗೆ ಬಂದಿರುವ ಯೋಜನೆ ಸಂಜೀವಿನಿ– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವಾಗಿದೆ.

ಈ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರನ್ನು ಸ್ವಸಹಾಯ ಸಂಘದ ವ್ಯಾಪ್ತಿಗೆ ತಂದು ಅವರಿಗೆ ಒಕ್ಕೂಟಗಳಿಂದ ಹಣಕಾಸಿನ ಸಾಲ ಸೌಲಭ್ಯವನ್ನು ಒದಗಿಸಿ, ಅವರ ಜೀವನೋಪಾಯ ಚಟುವಟಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಅಲ್ಲದೇ ಬ್ಯಾಂಕ್ ಲಿಂಕೇಂಜ್ ಮೂಲಕವೂ ಸಹ ಸಾಲ ಸೌಲಭ್ಯವನ್ನು ಕೊಡಿಸಲಾಗುತ್ತಿದೆ. ಇದರಿಂದ ಸ್ವಸಹಾಯ ಸಂಘಗಳು ಬಡ್ಡಿ ಸಹಾಯ ಪಡೆಯಲು ಸಹಾಯಕವಾಗಿದೆ. ಹಾಗೇ ಸಹ ಇಲಾಖೆಗಳೊಂದಿಗೆ ಅಭಿಗಮನ ಸಾಧಿಸಿ, ಇಲಾಖೆಗಳಿಂದ ದೊರೆಯಬಹುದಾದ ಸೌಲಭ್ಯಗಳ ಕುರಿತು ಮಾಹಿತಿಯನ್ನು ಮಹಿಳೆಯರಿಗೆ ಕೊಡಿಸುವಲ್ಲಿ ಸಂಜೀವಿನಿ ಒಕ್ಕೂಟಗಳು ಕೆಲಸ ನಿರ್ವಹಿಸುತ್ತಿವೆ. ಅಲ್ಲದೇ ಸಾರಾಯಿ ನಿಷೇಧ, ಬಾಲ್ಯ ವಿವಾಹ ತಡೆ, ವರದಕ್ಷಿಣೆ ಕಿರುಕುಳ ತಡೆಗಟ್ಟುವಿಕೆಯಂತಹ ಸಾಮಾಜಿಕ ಚಟುವಟಿಕೆಗಳನ್ನು ಸಹ ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳು ಮಾಡುತ್ತಾ ಬರುತ್ತಿವೆ.



ಅದರಂತೆ ಪ್ರಸ್ತುತ ವರ್ಷದಲ್ಲಿ ನೆರೆಯ ಮಹಾರಾಷ್ಟ್ರದಲ್ಲಿ ಅತಿವೃಷ್ಟಿಯಿಂದಾಗಿ ಉತ್ತರ ಕರ್ನಾಟಕದ ಬೆಳಗಾವಿ, ಬಾಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ನೆರೆ ಹಾವಳಿವುಂಟಾಗಿ, ಅಪಾರ ಪ್ರಮಾಣದ ಹಾನಿ, ಸಾವು ನೋವುಗಳು ಸಂಭವಿಸಿರುತ್ತವೆ. ಅಲ್ಲದೇ ನೆರೆಯ ಮಲೆನಾಡು ಪ್ರದೇಶದಲ್ಲಿ ಅತಿವೃಷ್ಟಿಯಿಂದಾಗಿ ನಮ್ಮ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಮುನಿರಾಬಾದ್ ಡ್ಯಾಂ ಗ್ರಾಮದಲ್ಲಿ ಬರುವ ತುಂಗಭದ್ರಾ ನದಿಯ ನೀರಿನ ಒಳಹರಿವು ಸಾಕಷ್ಟು ಹೆಚ್ಚಾಗಿದ್ದರಿಂದ ಸದರಿ ನೀರನ್ನು ಕಾಲುವೆಗಳಿಗೆ ಹರಿದುಬಿಡಲಾಗಿ, ಮುನಿರಾಬಾದ್ ಡ್ಯಾಂ ಕಾಲುವೆಗೆ ಹೊಂದಿಕೊಂಡಿರುವ ಸುಮಾರು 150–180 ಮನೆಗಳಿಗೆ ನೀರು ನುಗ್ಗಿ ದವಸ–ಧಾನ್ಯ, ಬಟ್ಟೆ, ಪಾತ್ರೆ, ಇನ್ನಿತರ ಅಗತ್ಯ ವಸ್ತುಗಳು ನೀರು ಪಾಲಾಗಿ ಅಪಾರ ಪ್ರಮಾಣದ ಹಾನಿಯುಂಟಾಯಿತು.



ಇದರಿಂದ ಕಂಗಾಲದ ಕುಟುಂಬಗಳ ಸದಸ್ಯರನ್ನು ನೆರೆಯ ಜಿಲ್ಲೆ, ತಾಲ್ಲೂಕು, ಗ್ರಾಮಗಳಿಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಲಾಯಿತು. ಅಲ್ಲದೇ ಗ್ರಾಮ ಪಂಚಾಯತಿ ವತಿಯಿಂದ ಗಂಜಿ ಕೇಂದ್ರ ತೆರೆದು ಒಂದು ವಾರದವರೆಗೆ ಊಟದ ವ್ಯವಸ್ಥೆ ಮಾಡಲಾಯಿತು.

ಕೊಪ್ಪಳ ತಾಲೂಕಿನಲ್ಲಿರುವ ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಸದಸ್ಯರು, ಸ್ವಸಹಾಯ ಸಂಘಗಳ ಸದಸ್ಯರು, ನೆರೆಯಿಂದ ಕಂಗಾಲಾದ ಕುಟುಂಬಗಳಿಗೆ ಏನಾದರು ಸಹಾಯ ಮಾಡುವ ಆಲೋಚನೆಯೊಂದಿಗೆ ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ಹಾಗೂ ಸಂಜೀವಿನಿ ಸಿಬ್ಬಂದಿಗಳ ಮಾರ್ಗದರ್ಶನದೊಂದಿಗೆ ಜನರಿಗೆ ಅಗತ್ಯವಿರುವ ಅಕ್ಕಿ, ಬೇಳೆ, ಜೋಳ, ಬಟ್ಟೆ, ರೊಟ್ಟಿ, ಚಟ್ನಿ, ಬಿಸ್ಕೀಟ್ ಹೀಗೆ ಇತರೆ ಅಗತ್ಯ ವಸ್ತುಗಳನ್ನು ಒಕ್ಕೂಟಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮುಖ್ಯ ಪುಸ್ತಕ ಬರಹಗಾರರು, ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಸುಮಾರು ಒಂದು ವಾರದವರೆಗೆ ಅಗತ್ಯ ವಸ್ತುಗಳನ್ನು ಸಂಗ್ರಹಿಸಲಾಗಿ, ಒಕ್ಕೂಟದಲ್ಲಿರುವ ಸದಸ್ಯರು, ಎಲ್ಲಾ ಸಂಘಗಳ ಸದಸ್ಯರು, ಗ್ರಾಮದಲ್ಲಿನ ಗುರುಹಿರಿಯರು, ಒಕ್ಕೂಟಗಳ ಪದಾಧಿಕಾರಿಗಳು ನೆರೆ ಸಂತ್ರಸ್ಥರಿಗೆ ಸಹಾಯ ಮಾಡಲು ಮುಂದಾಗಿರುತ್ತಾರೆ.



36 ಕ್ವಿಂಟಲ್ ಅಕ್ಕಿ, 3 ಕ್ವಿಂಟಲ್ ಜೋಳ, 2 ಕ್ವಿಂಟಲ್ ಬೇಳೆ, 2 ಕ್ವಿಂಟಲ್ ಸಕ್ಕರೆ, 410 ಸೀರೆ, 25 ಬಾಕ್ಸ್ ಬಿಸ್ಕೀಟ್, 60 ಕೆಜಿ ಪೌಷ್ಟಿಕ ಆಹಾರ, 1500 ರೊಟ್ಟಿ, 15 ಕೆಜಿ ರವ, 3 ಕೆಜಿ ಉಪ್ಪಿನಕಾಯಿ & ಚಟ್ನಿ ಪುಡಿ, 60 ಬಟ್ಟೆ & ಮೈ ಸೋಪ್, 12 ಲುಂಗಿ, 12 ಪಂಚೆ, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಹೀಗೆ ದಾನಿಗಳು ಅಗತ್ಯ ವಸ್ತುಗಳನ್ನು ನೀಡಿದ್ದು, ಸದರಿ ವಸ್ತುಗಳನ್ನು ತಾಲ್ಲೂಕು ಪಂಚಾಯತಿ ಕೊಪ್ಪಳದಲ್ಲಿ ಸಂಗ್ರಹಿಸಿಟ್ಟು, ನಂತರ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಂತೆ ಕೊಪ್ಪಳ ತಾಲ್ಲೂಕು ವ್ಯಾಪ್ತಿಯ ಮುನಿರಾಬಾದ್ ಡ್ಯಾಂ ಗ್ರಾಮದಲ್ಲಿನ ನೆರೆ ಸಂತ್ರಸ್ಥ ಕುಟುಂಬಗಳಿಗೆ ವಿತರಿಸಲು ನಿರ್ಧರಿಸಲಾಯಿತು.

ನಂತರ ಸಂಗ್ರಹವಾದ ಎಲ್ಲಾ ದವಸ-ಧಾನ್ಯ, ಬಟ್ಟೆಗಳನ್ನು ಮುನಿರಾಬಾದ್ ಗ್ರಾಮ ಪಂಚಾಯತಿಗೆ ತೆಗೆದುಕೊಂಡು ಹೋಗಿ, ಶ್ರೀ.ಮದರ್ ಇಂಡಿಯಾ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಸದಸ್ಯರು, ಎಂಬಿಕೆ-ಎಲ್‌ಸಿಆರ್‌ಪಿರವರು ಹಾಗೂ ಜಿಲ್ಲಾ, ತಾಲ್ಲೂಕು ಸಿಬ್ಬಂದಿಗಳು ಎರಡು ದಿನಗಳ ಕಾಲ ಅವುಗಳನ್ನು ಬೇರ್ಪಡಿಸಿ, ಎಲ್ಲಾ ಅಕ್ಕಿ, ಬೇಳೆ, ಜೋಳ, ಸಕ್ಕರೆ, ಬಟ್ಟೆ ಇನ್ನಿತರೆ ವಸ್ತುಗಳನ್ನು 180 ಪ್ಯಾಕ್‌ಗಳಲ್ಲಿ ಪ್ಯಾಕ್ ಮಾಡಿ ದಿನಾಂಕ:05-09-2019 ರಂದು ಮುನಿರಾಬಾದ್ ಡ್ಯಾಂ ಗ್ರಾಮ ಪಂಚಾಯತಿ ಸಭಾಂಗಣದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ "ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಂದ ನೆರೆ ಸಂತ್ರಸ್ಥರಿಗೆ ಸಹಾಯದ ಹಸ್ತ" ಎಂಬ ಕಾರ್ಯಕ್ರಮ ಮೂಲಕ ನೆರೆ ಸಂತ್ರಸ್ತ ಕುಟುಂಬಸ್ಥರಿಗೆ ಸಂಗ್ರಹಿಸಿದ ಅಗತ್ಯ ವಸ್ತುಗಳನ್ನು ವಿತರಣೆ ಮಾಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಪಂಚಾಯತಿ ಅಧಿಕಾರಿ/ಸಿಬ್ಬಂದಿಗಳು ಮತ್ತು ನೆರೆ ಸಂತ್ರಸ್ಥ ಕುಟುಂಬಸ್ಥರು ಭಾಗವಹಿಸಿದ್ದರು.

ಪ್ರತಿ ನೆರೆ ಸಂತ್ರಸ್ಥ ಕುಟುಂಬಕ್ಕೆ 20 ಕೆಜಿ ಅಕ್ಕಿ, 2 ಕೆಜಿ ಜೋಳ, 1/2 ಕೆಜಿ ತೊಗರಿ ಬೇಳೆ, 1/2 ಕೆಜಿ ಸಕ್ಕರೆ, 2 ಬಿಸ್ಕೀಟ್ ಪ್ಯಾಕ್, 2 ಸೀರೆ, 1 ಲುಂಗಿ ಮತ್ತು ಪೌಷ್ಟಿಕ ಆಹಾರ ಪಾಕೆಟ್, 1 ಬಟ್ಟೆ ಸೋಪ್, ಪೇಸ್ಟ್, ಕೊಬ್ಬರಿ ಎಣ್ಣೆ, ಇತ್ಯಾದಿ ಅಗತ್ಯ ವಸ್ತುಗಳನ್ನು ಗ್ರಾಮ ಪಂಚಾಯತಿಯಿಂದ ನೀಡಲಾದ ಬಟ್ಟೆ ಬ್ಯಾಗ್‌ನಲ್ಲಿ ಪ್ಯಾಕ್ ಮಾಡಿ ಎಲ್ಲಾ 180 ನೆರೆ ಸಂತ್ರಸ್ಥ ಕುಟುಂಬಗಳಿಗೆ ವಿತರಣೆ ಮಾಡಲಾಯಿತು. ಸದರಿ ಕಾರ್ಯಕ್ರಮದ ಯಶಸ್ವಿಗೆ ಕಾರಣೀಭೂತರಾದ ಎಲ್ಲಾ ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಪದಾಧಿಕಾರಿಗಳಿಗೆ, ಸದಸ್ಯರಿಗೆ, ಸಹಾಯ ಮಾಡಿದ ಗುರು ಹಿರಿಯರಿಗೆ, ಸಾಕಷ್ಟು ಶ್ರಮಿಸಿದ ಮುಖ್ಯ ಪುಸ್ತಕ ಬರಹಗಾರರು, ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ, ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೂ ಹಾಗೂ ಸೂಕ್ತ ಮಾರ್ಗದರ್ಶನ ಮಾಡಿದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿ ವರ್ಗವದರಿಗೂ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ತುಂಬು ಹೃದಯದ ಧನ್ಯವಾದಗಳು. ❖

ವರದಿ




ಡಾ. ಹೇಮಾಂಬರ ಎಚ್.ಎಸ್

ಬೋಧಕರು (ಆರ್.ಜಿ.ಎಸ್.ಎ
ತರಬೇತಿ ಸಂಯೋಜಕರು)
ಅ.ನ.ಸಾ.ರಾ.ಗ್ರಾ & ಪಂ. ರಾ ಸಂಸ್ಥೆ
ಮೈಸೂರು


# ಮಹಿಳಾ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆ

ಮಕ್ಕಳ ರಕ್ಷಣೆ, ಉಳಿವು ಮತ್ತು ಅಭಿವೃದ್ಧಿ ಇನ್ನಿತರೆ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಯ ಹಕ್ಕುಗಳನ್ನು ಜಾರಿಗೊಳಿಸುವಲ್ಲಿ ಗ್ರಾಮ ಪಂಚಾಯತಿಗಳ ಪಾತ್ರ ಬಹಳ ಮುಖ್ಯವಾಗಿದ್ದು, ಈ ದೃಷ್ಟಿಯಿಂದ ಗ್ರಾಮ ಪಂಚಾಯತಿ ವತಿಯಿಂದ ಹಮ್ಮಿಕೊಳ್ಳುವ ಗ್ರಾಮ ಸಭೆಗಳಲ್ಲಿ ಮಹಿಳೆ ಮತ್ತು ಮಕ್ಕಳ ಸ್ಥಿತಿಗತಿ, ಮಕ್ಕಳ ಅಭಿವೃದ್ಧಿ, ಹಾಗೂ ಸಂವಿಧನಾತ್ಮಕವಾಗಿ ಮಹಿಳೆ ಮತ್ತು ಮಕ್ಕಳಿಗೆ ಒದಗಿಸಿರುವ ಹಕ್ಕುಗಳ ಬಗ್ಗೆ ಗ್ರಾಮ ಪಂಚಾಯತಿಗಳು ವಿಶೇಷವಾಗಿ ವಿಶೇಷ ಗ್ರಾಮ ಸಭೆಗಳಲ್ಲಿ ಚರ್ಚಿಸಿ ಗ್ರಾಮಸ್ಥರುಗಳಿಗೆ ಅವರುಗಳ ಜವಾಬ್ದಾರಿಯನ್ನು ತಿಳಿಸುವ ಹೊಣೆಗಾರಿಕೆ ಗ್ರಾಮ ಪಂಚಾಯತಿಯದ್ದಾಗಿರುತ್ತದೆ.

ಈ ದೃಷ್ಟಿಯಿಂದ ಮಹಿಳೆ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಭಾರತ ಸರ್ಕಾರದ ಶಿಫಾರಸ್ಸಿನ ಮೇರೆಗೆ ರಾಜ್ಯದ ಎರಡು Aspirational Districtಗಳ ಎಲ್ಲಾ ಗ್ರಾಮ ಪಂಚಾಯತಿಗಳ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಕ್ಕಳು, ಪೋಷಕರು, ಗ್ರಾಮಸ್ಥರು ಹಾಗೂ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡಂತೆ ವಿವಿಧ ಇಲಾಖೆಯ ಅಧಿಕಾರಿಗಳ ಸೇರಿ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಏರ್ಪಡಿಸಬೇಕಾಗಿರುವುದರಿಂದ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು "ರಾಷ್ಟ್ರೀಯ ಗ್ರಾಮ ಸ್ವರಾಜ್ ಯೋಜನೆ" (ಆರ್‌ಜಿಎಸ್ಎ)ಯಡಿ ಒಂದು ದಿನದ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಹಮ್ಮಿಕೊಳ್ಳುವುದರ ಮೂಲಕ ಮಹಿಳಾ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಕಡ್ಡಾಯವಾಗಿ ಹಮ್ಮಿಕೊಳ್ಳುವಂತೆ ಗ್ರಾಮ ಪಂಚಾಯತಿಗಳನ್ನು ಪ್ರೇರೇಪಿಸುವುದು ಈ ತರಬೇತಿ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿರುತ್ತದೆ.

ಸಂವಿಧನಾತ್ಮಕವಾಗಿ ಮಹಿಳೆ ಮತ್ತು ಮಕ್ಕಳಿಗೆ ಒದಗಿಸಿರುವ ಹಕ್ಕುಗಳ ಬಗ್ಗೆ ಗ್ರಾಮ ಪಂಚಾಯತಿಗಳು ವಿಶೇಷವಾಗಿ ವಿಶೇಷ ಗ್ರಾಮ ಸಭೆಗಳಲ್ಲಿ ಚರ್ಚಿಸಿ ಗ್ರಾಮಸ್ಥರುಗಳಿಗೆ ಅವರುಗಳ ಜವಾಬ್ದಾರಿಯನ್ನು ತಿಳಿಸುವ ಹೊಣೆಗಾರಿಕೆ ಗ್ರಾಮ ಪಂಚಾಯತಿಯ ದ್ದಾಗಿರುತ್ತದೆ.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೈಸೂರು ವತಿಯಿಂದ ಆರ್‌ಜಿಎಸ್ಎ ಯೋಜನೆಯಡಿ 2019-20ನೇ ಸಾಲಿನಲ್ಲಿ "ಮಹಿಳಾ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆಗಳ ಪರಿಣಾಮಕಾರಿ ಆಯೋಜನೆ" ಕುರಿತು ತರಬೇತಿ ಕಾರ್ಯಕ್ರಮವನ್ನು "Aspiration District" ಗಳಾದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ 303 ಗ್ರಾಮ ಪಂಚಾಯತಿಗಳ ಪೈಕಿ 153 ಗ್ರಾಮ ಪಂಚಾಯತಿಗಳಲ್ಲಿ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಮತ್ತು 150 ಮಹಿಳಾ ವಿಶೇಷ ಗ್ರಾಮ ಸಭೆಯ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಸಲುವಾಗಿ ಆರ್‌ಜಿಎಸ್ಎ ಯೋಜನೆಯ ಕ್ಯಾಲೆಂಡರಿನ ಕ್ರ.ಸಂ(8)ರಲ್ಲಿ ತರಬೇತುದಾರರ ತರಬೇತಿಯನ್ನು ಸಂಸ್ಥೆಯ ವಿಕೇಂದ್ರೀಕೃತ ತರಬೇತಿ ಸಂಯೋಜಕರುಗಳಿಗೆ ಮತ್ತು ಆಯ್ದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳ ಆಯೋಜನೆಯ ಮೇಲುಸ್ತುವಾರಿಯನ್ನು ನಿರ್ವಹಿಸುವ ಸಲುವಾಗಿ ತರಬೇತುದಾರರ ತರಬೇತಿಯನ್ನು ದಿನಾಂಕ: 26.09.2019ರಂದು ಸಂಸ್ಥೆಯ ಕಲಬುರಗಿ ಜಿಲ್ಲೆಯ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು. ಪ್ರಸ್ತುತ ತರಬೇತಿ ಕಾರ್ಯಕ್ರಮವನ್ನು ಅ.ನ.ಸಾ.ರಾ.ಗ್ರಾ & ಪಂಚಾಯತ್ ರಾಜ್ ಸಂಸ್ಥೆಯ ಕಲಬುರಗಿ ಪ್ರಾದೇಶಿಕ ಸಂಸ್ಥೆಯ ಉಪ ನಿರ್ದೇಶಕರಾದ ಶ್ರೀ.ಅಂಬರಾಯ ಬಿ.ಸಾಗರ್ ಮತ್ತು ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ.ಅಂಬೂಜಿ ನಾಯ್ಕೋಡಿ ಹಾಗೂ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಗಿಡಕ್ಕೆ ನೀರೆರೆಯುವುದರ



ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ತರಬೇತಿ ಸಂಯೋಜಕರು ತರಬೇತುದಾರರ ತರಬೇತಿ ಕಾರ್ಯಕ್ರಮದ ಮೊದಲನೇ ಅಧಿವೇಶನದಲ್ಲಿ ಶಿಭಿರಾರ್ಥಿ–ಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ (3 ಹೆಚ್ ಮತ್ತು 3 ಜಿ ಉಪ–ಪ್ರಕರಣದಲ್ಲಿ)ರಲ್ಲಿ ಪ್ರಸ್ಥಾಪಿಸಿರುವ ಅಂಶಗಳನ್ನು ವಿವರಿಸುತ್ತಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ, ಮಹಿಳೆಯರ ಮತ್ತು ಮಕ್ಕಳ ಸಬಲೀಕರಣಕ್ಕಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಪ್ರತ್ಯೇಕವಾಗಿ ಗ್ರಾಮ ಸಭಾ ವಿಶೇಷ ಸಭೆಗಳನ್ನು ಗ್ರಾಮ ಪಂಚಾಯತಿಗಳ ಸಭೆಗಳು ನಡೆಯುವುದಕ್ಕೂ ಮೊದಲು ಕಡೆಯ ಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ಅವರುಗಳಿಗೆ ಪ್ರತ್ಯೇಕವಾಗಿ ಸಂಭಂದಿಸಿದ ವಿಷಯಗಳ ಬಗ್ಗೆ ಚರ್ಚೆ ನಡೆಸಲು ವಿಶೇಷ ಗ್ರಾಮ ಸಭೆಯನ್ನು ಕರೆಯತಕ್ಕದ್ದು ಎಂಬುದನ್ನು ವಿಕೇಂದ್ರೀಕೃತ ತರಬೇತಿ ಸಂಯೋಜಕರುಗಳಿಗೆ ವಿವರಿಸುತ್ತಾ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದಲ್ಲಿ ಕಲ್ಪಿಸಿರುವ ವಿಷಯಗಳ ಕುರಿತು ಮಾಹಿತಿ ನೀಡುವುದರ ಮೂಲಕ ಈ ಮೇಲೆ ಹೇಳಿದ ಕಾಯ್ದೆಯ ಉದ್ದೇಶವನ್ನು ತರಬೇತಿಯಲ್ಲಿ ಭಾಗವಹಿಸುವ ಮಹಿಳೆಯರು ಮತ್ತು ಮಕ್ಕಳಿಗೆ ಕುರಿತಂತೆ ವಿಶೇಷ ಸಭೆಗಳ ಆಯೋಜನೆ ಮತ್ತು ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಕುರಿತಂತೆ ವಿವರಿಸಿದರು.

ಎರಡನೇ ಅಧಿವೇಶನದಲ್ಲಿ ಪ್ರಮುಖವಾಗಿ ತರಬೇತು ದಾರರ ತರಬೇತಿ ಕಾರ್ಯಕ್ರಮಕ್ಕೆ Aspirational District ಗಳಾದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳನ್ನು ಆಹ್ವಾನಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ತಮ್ಮ ತಮ್ಮ ಇಲಾಖೆಗಳ ಇಲಾಖಾವಾರು ಕಾರ್ಯಕ್ರಮಗಳ ಕುರಿತು ಮಾಹಿತಿ ಹಂಚಿಕೆ ಮಾಡಲಾಯಿತು. ಮಧ್ಯಾಹ್ನದ ನಂತರ ಅಧಿವೇಶನದಲ್ಲಿ ವಿಕೇಂದ್ರಿಕೃತ ತರಬೇತಿ ಸಂಯೋಜಕರು ಪಂಚಾಯತಿ ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆಯ ಒಂದು ದಿನದ ಸಾಮಾರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜನೆ ಮಾಡುವಾಗ ಕೈಗೊಳ್ಳಬೇಕಾದ ಕ್ರಮಗಳು ಮತ್ತು ಆಯೋಜನೆಯ ಪೂರ್ವಸಿದ್ದತೆಯ ಕುರಿತು ಗುಂಪುಗಳಲ್ಲಿ ಗುಂಪು ಚಟುವಟಿಕೆಯ ಮೂಲಕ ಅಧಿವೇಶನವನ್ನು ನಿರ್ವಹಿಸಿ ತರಬೇತಿ ಆಯೋಜನೆಯ ಕುರಿತಂತೆ ಮಾದರಿ ಗಳನ್ನು ಮತ್ತು ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಗಳು ಹಾಗೂ ಸಭೆಗೆ ಆಹ್ವಾನಿಸಬೇಕಾದ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕುರಿತು ವಿಷಯ ಮಂಡನೆ ಮಾಡಿದರು.

ತರಬೇತಿ ಆಯೋಜನೆಯನ್ನು ಅ.ನ.ಸಾ.ರಾ.ಗ್ರಾ & ಪಂಚಾಯತ್ ರಾಜ್ ಸಂಸ್ಥೆಯ ಬೋಧಕರುಗಳಾದ ಶ್ರೀ.ಅಬೂಬಕರ್ ಟಿ.ಎಂ, ಶ್ರೀ.ಗಿರಿಧರ್ ಎಂ.ಎಸ್, ಡಾ.ಹೇಮಾಂಬರ ಎಚ್.ಎಸ್, ಮತ್ತು ಶ್ರೀ.ಶಿವಪುತ್ರಪ್ಪ ಗೊಬ್ಬೂರ ಪರಿಣಿತ ಬೋಧಕರು ಅ.ನ.ಸಾ.ರಾ.ಗ್ರಾ & ಪಂಚಾಯತ್ ರಾಜ್ ಪ್ರಾದೇಶಿಕ ಸಂಸ್ಥೆ ಕಲುಬುರಗಿರವರು ನಿರ್ವಹಿಸಿದರು. ❖





ಮುರಳಿ.ಕೆ

ಸಂಶೋಧನ ಅಧಿಕಾರಿ
ರಾಜ್ಯ ಪಂಚಾಯತ್ ಸಂಪನ್ಮೂಲ
ಕೇಂದ್ರ, ಬೆಂಗಳೂರು

# ಮಿಷನ್ ಅಂತ್ಯೋದಯ ಕಾರ್ಯಾಗಾರ

ಭಾರತ ದೇಶವೂ ವಿಶ್ವದಲ್ಲೇ ಬಲಿಷ್ಟ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರವಾಗಿದ್ದು. ಭಾರತಕ್ಕೆ ಸ್ವಾತಂತ್ರ್ಯ ಬಂದು 72 ವರ್ಷಗಳೇ ಕಳೆದರು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪಟ್ಟಿಯಿಂದ ಹೊರ ಬರಲು ಸಾಧ್ಯವಾಗಿಲ್ಲ. ಗ್ರಾಮಗಳ ಹಿಂದುಳಿದಿರುವಿಕೆ ದೇಶದ ಅಭಿವೃದ್ಧಿಗೆ ತೋಡಕಾಗಿ ಪರಿಣಮಿಸಿದೆ. ಸ್ವತಂತ್ರ್ಯ ಬಂದ ನಂತರ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸಲಾಗಿದೆ. ಅಭಿವೃದ್ಧಿಗೆ ತೊಡಕಾಗಿರುವ ಅಂಶಗಳನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಸಮಸ್ಯೆಗಳಿಗೆ ಕಾರಣಗಳು ಹಾಗೂ ಪರಿಹಾರಗಳನ್ನು ಹುಡುಕುವ ಪ್ರಯತ್ನಗಳು ನಡೆಯುತ್ತಿವೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುವ ಗ್ರಾಮ ಪಂಚಾಯಿತಿಗಳು ಗ್ರಾಮಕ್ಕೆ ಬೇಕಾದ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಸಲುವಾಗಿ ಅಭಿವೃದ್ಧಿಯ ಭಾಗವಾಗಿರುವ ಜನರೇ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಯಲ್ಲಿ ಭಾಗವಹಿಸಬೇಕಾಗಿದೆ. ನಮ್ಮ ಗ್ರಾಮದ ಅಭಿವೃದ್ಧಿಗೆ ಬೇಕಾಗಿರುವ ಕಾರ್ಯಕ್ರಮಗಳನ್ನು ರೂಪಿಸುವ, ಯೋಜನೆ ತಯಾರಿಸುವ ಹಾಗೂ ಅನುಷ್ಠಾನಗೊಳಿಸುವ ಎಲ್ಲಾ ಹಂತಗಳಲ್ಲಿ ಜನರು ಸಕ್ರೀಯವಾಗಿ ಭಾಗವಹಿಸುವಂತೆ ಮಾಡಬೇಕಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಕಾರ್ಯಕ್ರಮವು ಪರಿಣಾಮಕಾರಿ ಅನುಷ್ಠಾನವಾಗಬೇಕಾದರೆ, ಅದು ಜನರ ಸಹಭಾಗಿತ್ವದಿಂದ ಮಾತ್ರ ಸಾಧ್ಯ ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ. ಕೆ.ಶಿವರಾಮೇಗೌಡ ತಿಳಿಸಿದರು.

**ಅಭಿವೃದ್ಧಿಗೆ ತೊಡಕಾಗಿರುವ ಅಂಶಗಳನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಸಮಸ್ಯೆಗಳಿಗೆ ಕಾರಣಗಳು ಹಾಗೂ ಪರಿಹಾರಗಳನ್ನು ಹುಡುಕುವ ಪ್ರಯತ್ನಗಳು ನಡೆಯುತ್ತಿವೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುವ ಗ್ರಾಮ ಪಂಚಾಯಿತಿಗಳು ಗ್ರಾಮಕ್ಕೆ ಬೇಕಾದ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಸಲುವಾಗಿ ಅಭಿವೃದ್ಧಿಯ ಭಾಗವಾಗಿರುವ ಜನರೇ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಯಲ್ಲಿ ಭಾಗವಹಿಸಬೇಕಾಗಿದೆ.**



ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು, ಹಾಗೂ ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ, ಬೆಂಗಳೂರು ವತಿಯಿಂದ ಹಮ್ಮಿಕೊಂಡಿದ್ದ ಬೆಂಗಳೂರು ವಿಭಾಗದ ತಾಲ್ಲೂಕು ಮಟ್ಟದ ಅಧಿಕಾರಿಗಳ ಮಿಷನ್ ಅಂತ್ಯೋದಯ ಮತ್ತು ಜನರ ಯೋಜನೆ ಮತ್ತು ಜನರ ಅಭಿವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.



ಗ್ರಾಮೀಣಾ ಪ್ರದೇಶದಲ್ಲಿ ಯೋಜನಾ ತಯಾರಿಕೆಯನ್ನು ಜನರ ಸಹಭಾಗಿತ್ವದಲ್ಲಿ ತಯಾರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಬ್‌ಕೀ ಯೋಜನಾ ಸಬ್‌ಕಾ ವಿಕಾಸ್‌ಯಡಿ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಇದರ ಪ್ರಕಾರ ಮಿಷನ್ ಅಂತ್ಯೋದಯದಡಿ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿರುವ 29 ವಿಷಯಗಳಿಗೆ ಸಂಬಂಧಿಸಿದ ಒಟ್ಟು 136 ಅಂಶಗಳ ಬಗ್ಗೆ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇದಕ್ಕಾಗಿ ಅಭಿವೃದ್ಧಿ ಪಡಿಸಿರುವ ಮೊಬೈಲ್ ಆಪ್‌ನಲ್ಲಿ ಸಂಗ್ರಹಿಸಬೇಕಾಗಿದ್ದು, ಸದರಿ ಅಂಶಗಳನ್ನು ಕೇಂದ್ರ ಸರ್ಕಾರದ ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಅಳವಡಿಸಿದ ನಂತರ ಗ್ರಾಮವಾರು ಇರುವಂತಹ ನಿರ್ಣಾಯಕ ಅಂತರ (Critical Gap) ವನ್ನು ತಿಳಿಯಬಹುದಾಗಿದೆ. ಈ ಅಂತರದ ಆಧಾರದ ಮೇಲೆ ಗ್ರಾಮ ಸಭೆಯಲ್ಲಿ ಜನರ ಸಹಭಾಗಿತ್ವದಲ್ಲಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಯೋಜನೆಯನ್ನು ಗ್ರಾಮ ಪಂಚಾಯಿತಿಗಳು ಸಿದ್ಧಪಡಿಸಿ ಪ್ಲಾನ್‌ಪ್ಲಸ್ ತಂತ್ರಾಂಶದಲ್ಲಿ ಅಳವಡಿಸಬೇಕಾಗಿರುತ್ತದೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಲಭ್ಯವಿರುವ ಸಂಪನ್ಮೂಲದ ಜೊತೆ ಹೊಂದಾಣಿಕೆ ಮಾಡಿಕೊಂಡು 2020–2021ನೇ ಸಾಲಿನ ಅಭಿವೃದ್ಧಿ ಯೋಜನೆಯನ್ನು ತಯಾರಿಸಬೇಕಾಗಿದೆ.

ಅಕ್ಟೋಬರ್ 02 ರಿಂದ 15ರವರೆಗೆ ಮಿಷನ್ ಅಂತ್ಯೋದಯ ನಮೂನೆಯಲ್ಲಿ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯ ಮಾಡಬೇಕಾಗಿದ್ದು ಅಕ್ಟೋಬರ್ 15 ರಿಂದ ನವೆಂಬರ್ 15ರೊಳಗೆ ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮ ಸಭೆಗಳನ್ನು ಆಯೋಜಿಸಿ, ಜನರ ಸಹಭಾಗಿತ್ವದೊಂದಿಗೆ ಯೋಜನಾ ತಯಾರಿಕೆಯನ್ನು ಸಿದ್ದಪಡಿಸಬೇಕಾಗಿದೆ. ನವೆಂಬರ್ 16 ರಿಂದ ಡಿಸೆಂಬರ್ 15ರೊಳಗೆ ಗ್ರಾಮ ಪಂಚಾಯಿತಿ ಸಭೆಗಳನ್ನು ನಡೆಸಿ, ಲಭ್ಯವಿರುವ ಸಂಪನ್ಮೂಲದೊಂದಿಗೆ ಹೊಂದಾಣಿಕೆ ಮಾಡಿಕೊಂಡು 2020–2021ನೇ ಸಾಲಿನ ಯೋಜನೆಯನ್ನು ತಯಾರಿಸಿ ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಅಳವಡಿಸಬೇಕಾಗಿದೆ ಎಂದು ಶ್ರೀ.ಕೆ.ಆರ್.ಶಂಕರ್ ಬೋಧಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ತಿಳಿಸಿದರು.

❖

**ಸಂಖ್ಯೆ: ಗ್ರಾಅಪ 336 ಉಖಾಯೋ 2016** **ದಿನಾಂಕ: 18–10–2019**

## ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ತಪಾಸಣೆ ಮಾಡುವ ಬಗ್ಗೆ.

**ಉಲ್ಲೇಖ:**

1. ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಧಿಸೂಚನೆ ಸಂಖ್ಯೆ: ಗ್ರಾಅಪ 41 ರಾ.ಗ್ರಾ.ಉ 06, ಬೆಂಗಳೂರು ದಿನಾಂಕ: 01–02–2007ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕ: 08–02–2007.
2. ಸರ್ಕಾರದ ಕಾರ್ಯದರ್ಶಿ (ಪಂ.ರಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರ ಪತ್ರದ ಸಂಖ್ಯೆ: ಗ್ರಾಅಪ 17 ಉಖಾಯೋ 2006 ದಿನಾಂಕ: 11–12–2006.
3. ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ: ಗ್ರಾಅಪ 49 ಉಖಾಯೋ 2007 ದಿನಾಂಕ: 26–06–2007.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಂದ ಹೊರಡಿಸಲಾದ ಸುತ್ತೋಲೆ ಪತ್ರದ ಸಂಖ್ಯೆ: ಗ್ರಾಅಪ 128 ಉಖಾಯೋ 2011 ದಿನಾಂಕ: 14–06–2011.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಪತ್ರದ ಸಂಖ್ಯೆ: ಗ್ರಾಅಪ 110 ಉಖಾಯೋ 2009 ದಿನಾಂಕ: 14–06–2011.

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಲಾದ/ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳನ್ನು ತಪಾಸಣೆ ನಡೆಸುವ ಕುರಿತು ಮೇಲೆ ಸೂಚಿಸಲಾದ ಉಲ್ಲೇಖಿತ ಪತ್ರಗಳಲ್ಲಿ ಯೋಜನೆಯ ಮಾರ್ಗಸೂಚಿಗಳನುಸಾರ ಹಲವಾರು ಸೂಚನೆಗಳನ್ನು ನೀಡಲಾಗಿದ್ದು, ಅವುಗಳ ಕಡೆಗೆ ಗಮನ ಸೆಳೆಯಲು ಕೋರಿದೆ. ಕಾಮಗಾರಿಗಳ ತಪಾಸಣೆಯನ್ನು ಕೇಂದ್ರ ಸರ್ಕಾರವು ಸೂಚಿಸಿದಂತೆ, ಶೇಕಡಾ 2ರಷ್ಟು ಕಾಮಗಾರಿಗಳನ್ನು ರಾಜ್ಯ ಮಟ್ಟದ ಅಧಿಕಾರಿಗಳು, ಶೇಕಡಾ 10ರಷ್ಟು ಕಾಮಗಾರಿಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಶೇಕಡಾ 100ರಷ್ಟು ಕಾಮಗಾರಿಗಳನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳು ಮಾಡಬೇಕಾಗಿರುತ್ತದೆ. ಮೇಲಿನಂತೆ ತಾವು ಈವರೆಗೂ ನರೇಗಾ ಯೋಜನೆಯ ಅನುಷ್ಠಾನದ ಕಾಮಗಾರಿಗಳನ್ನು ತಪಾಸಣೆ/ಪರಿವೀಕ್ಷಣೆ ಮಾಡಿ ತಮ್ಮ ಮೇಲಾಧಿಕಾರಿಗಳಿಗೆ ತಪಾಸಣ ವರದಿಯನ್ನು ಸಲ್ಲಿಸುತ್ತಿದ್ದೀರಿ ಎಂದು ವಿಶ್ವಾಸಿಸುತ್ತೇನೆ.

ನರೇಗಾ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ/ಅನುಷ್ಠಾನಗೊಳಿಸಿದ ಪ್ರತಿ ಕಾಮಗಾರಿಗೆ ಕಡತವನ್ನು ಪ್ರತ್ಯೇಕ ವಾಗಿ ತೆರೆದು ಲಗತ್ತಿಸಿದ ಅನುಬಂಧದ ರೀತ್ಯಾ 21 ದಾಖಲೆಗಳನ್ನು ನಿರ್ವಹಿಸುವುದು. ಕಡ್ಡಾಯವಾಗಿರುತ್ತದೆ. ಕಾಮಗಾರಿಗಳ ಪರವೀಕ್ಷಣೆಗೆ ಪ್ರಸ್ತುತ ಜಿಲ್ಲಾ ಪಂಚಾಯತಿಯನ್ನು ಮೂಲ ಘಟಕವನ್ನಾಗಿ ಪರಿಗಣಿಸಬೇಕು ಮತ್ತು ಕೂಲಿ ಸಾಮಗ್ರಿಗಳ ಅನುಪಾತವನ್ನು ಶೇಕಡಾ 60:40ರಲ್ಲಿ ಕಡ್ಡಾಯವಾಗಿ ನಿರ್ವಹಿಸಲು ಸೂಚಿಸಿದೆ. ಯಾವದೇ ಕಾರಣಕ್ಕೂ ಸಾಮಗ್ರಿ ವೆಚ್ಚದ ಅನುಪಾತವು ಶೇಕಡಾ 40ಕ್ಕಿಂತ ಮೀರುವಂತಿಲ್ಲ ಮತ್ತು ಈ ಅಂಶವನ್ನು ಜಾಗೃತಿಯಾಗಿ ಪಾಲಿಸುವುದು ತಮ್ಮ ಜವಾಬ್ದಾರಿಯಾಗಿರುತ್ತದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಕಾರ್ಯದರ್ಶಿಯವರು ಪ್ರತಿ ದಿನವು ಪರಿವೀಕ್ಷಣೆ ಮಾಡಬೇಕು ಮತ್ತು ಕಾಮಗಾರಿಗೆ ಸಂಬಂಧಿಸಿದ ಅನುಷ್ಠಾನ ಇಲಾಖೆಗಳ ಸಂಸ್ಥೆಗಳು ವಾರದಲ್ಲಿ 2 ಅಥವಾ 3 ಬಾರಿ ಪರಿವೀಕ್ಷಣೆ ಮಾಡಬೇಕು. ಗ್ರಾಮ ಪಂಚಾಯತಿಗಳ ಉಸ್ತುವಾರಿಗಾಗಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡುವುದು. ಒಂದು ವೇಳೆ ಈಗಾಗಲೇ ಉಸ್ತುವಾರಿಗಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಲ್ಲಿ ಈಗ ಹೊಸದಾಗಿ ನೇಮಕ ಮಾಡುವುದು ಅಗತ್ಯವಿರುವುದಿಲ್ಲ. ಈ ರೀತಿಯಾಗಿ ನೋಡಲ್ ಅಧಿಕಾರಿಗಳಿಗೂ ಸಹ ನರೇಗಾ ಯೋಜನೆಯ ಕಾಮಗಾರಿಗಳ ಪರಿವೀಕ್ಷಣೆಯ ಕಾರ್ಯವನ್ನು ವಹಿಸಬಹುದಾಗಿರುತ್ತದೆ. ಮಾಹೆಯಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತಿಯ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ತಾಲ್ಲೂಕಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಶೇಕಡಾ 50ರಷ್ಟು ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡುವುದು. ಜಿಲ್ಲಾ ಮಟ್ಟದಲ್ಲಿ ನಿಗಧಿಪಡಿಸಿದ ಶೇಕಡಾ 10ರಷ್ಟಿನ ಕಾಮಗಾರಿಗಳ ಪ್ರಗತಿಯು ಒಳ್ಳೆಯ ಗುಣಮಟ್ಟದಲ್ಲಿ ಇದೆಯೇ ಹಾಗೂ ಅಧಿನಿಯಮದ ನಿಯಮಗಳನ್ವಯ ಅನುಷ್ಠಾನವಾಗುತ್ತಿರುವ ಅಂಶಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಗಮನದಲ್ಲಿಟ್ಟುಕೊಂಡು ತಪಾಸಣೆ ಮಾಡುತ್ತಿರುವರೇ ಎಂಬುದನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಖಾತರಿ ಪಡಿಸಿಕೊಳ್ಳಬೇಕು.

ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕಾಮಗಾರಿಗಳ ಪರಿವೀಕ್ಷಣೆಗಳ ವಹಿಯನ್ನು ನಿರ್ವಹಿಸಬೇಕಾಗಿದೆ. ಪ್ರತಿ ಪರಿಶೀಲನಾಧಿಕಾರಿ ಕಾಮಗಾರಿಯ ಪರಿವೀಕ್ಷಣೆ ಮಾಡಿದ ನಂತರ ಗ್ರಾಮ ಪಂಚಾಯತಿಯಲ್ಲಿ ನಿರ್ವಹಿಸಿದ ಪರಿವೀಕ್ಷಣ ವಹಿಯಲ್ಲಿ ಕಡ್ಡಾಯವಾಗಿ ಮಾಹಿತಿಯನ್ನು ನಮೂದು ಮಾಡಿ ಸಹಿ ಮಾಡುವುದು. ಇದಲ್ಲದೇ ಪ್ರತಿವಾರ ಹಾಜರಾತಿ ಪಟ್ಟಿ ಮುಕ್ತಾಯವಾದ ನಂತರ ಅಳತೆ ಪುಸ್ತಕದಲ್ಲಿ ಕಾಮಗಾರಿಗಳ ಅಳತೆಗಳನ್ನು ನಮೂದು ಮಾಡುವುದಕ್ಕೆ ಪ್ರತಿ 2500 ಸಕ್ರಿಯ ಉದ್ಯೋಗ ಚೀಟಿದಾರರಿಗೆ ಒಬ್ಬ ತಾಂತ್ರಿಕ ಸಹಾಯಕ ಅಭಿಯಂತರರು/ತಾಂತ್ರಿಕ ಸಹಾಯಕ ಪದವೀದರರು (ಕೃಷಿ, ತೋಟಗಾರಿಕೆ ಮತ್ತು ಅರಣ್ಯ) ಇರತಕ್ಕದು. ಕಾಮಗಾರಿಯ ಕಡತವನ್ನು ಕಾಮಗಾರಿ ಆರಂಭವಾಗುವ ಮುನ್ನ ಕಿರಿಯ ಅಭಿಯಂತರರು/ಸಹಾಯಕ ಅಭಿಯಂತರರು ತೆರೆಯಬೇಕು. ಕೆಲವು ವೇಳೆ ಅತಿ ತುರ್ತಾದ ಸಂದರ್ಭಗಳು ಒದಗಿಬಂದ್ದಲ್ಲಿ ಅಂತಹ ಸಮಯದಲ್ಲಿ Barefoot Technicians (BFT) ಇವರುಗಳ ಸೇವೆಯನ್ನು ತಾಂತ್ರಿಕ ಸಹಾಯಕ ಅಭಿಯಂತರರು ಪಡೆಯಬಹುದಾಗಿರುತ್ತದೆ.

ಅಲ್ಲದೇ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಲು, ಕಾಮಗಾರಿಗಳ ಪರಿಶೀಲನೆಗಾಗಿ ರಾಜ್ಯದಲ್ಲಿ ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳನ್ನು (ನಿವೃತ್ತ SE/Executive Engineer) ನೇಮಕ ಮಾಡಿಕೊಳ್ಳಲಾಗಿರುತ್ತದೆ. ಸದರಿ ಗುಣ ನಿಯಂತ್ರಣ ಮಾನಿಟರ್‌ಗಳ ಸೇವೆಯನ್ನು ರಾಜ್ಯದ ಮಟ್ಟಕ್ಕೆ ನಿಗಧಿಪಡಿಸಿದ ಕಾಮಗಾರಿಗಳ ಪರಿವೀಕ್ಷಣೆಯಲ್ಲಿ ಶೇಕಡಾ 10ರಷ್ಟು ಕಾಮಗಾರಿಗಳ ಪರಿಶೀಲನೆಗಾಗಿ ಬಳಸಬಹುದಾಗಿದೆ ಮತ್ತು ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನಿಯತ ಮತ್ತು ಹೊರಗುತ್ತಿಗೆಯ ಅಭಿಯಂತರರಿಗೆ ತಾಂತ್ರಿಕ ನೆರವನ್ನು ನೀಡಲು ಅನುಕೂಲವಾಗುತ್ತದೆ. ಪ್ರತಿ ಕಾಮಗಾರಿಯ ಉಸ್ತುವಾರಿಯನ್ನು ಎರಡು ಹಂತಗಳಲ್ಲಿ ಅಂದರೆ ಪ್ರಗತಿಯಲ್ಲಿ ಮತ್ತು ಕಾಮಗಾರಿ ಪೂರ್ಣಗೊಂಡ ನಂತರ ಮಾಡುವುದು. ಗುಣ ನಿಯಂತ್ರಣ ಮಾನಿಟರ್‌ಗಳಿಂದ ಪರಿವೀಕ್ಷಿಸಲ್ಪಟ್ಟ ಕಾಮಗಾರಿಗಳ ಲೆಕ್ಕವು ರಾಜ್ಯಕ್ಕೆ ನಿಗಧಿಪಡಿಸಿದ ಶೇಕಡಾ 2ರಷ್ಟಿನ ಕಾಮಗಾರಿಗಳ ತಪಾಸಣೆಗೆ ಸೇರಿಕೊಳ್ಳುತ್ತದೆ.

ಆದ್ದರಿಂದ ಯೋಜನೆಯ ಅನುಷ್ಠಾನದ ಎಲ್ಲಾ ಕಾಮಗಾರಿಗಳನ್ನು ತಪಾಸಣೆಗೆ ನಿಗಧಿಪಡಿಸಿದ ಶೇಕಡಾ ಪ್ರಮಾಣವನ್ನು ತಪ್ಪದೇ ಪಾಲಿಸುವುದು ಮತ್ತು ರಾಜ್ಯದಿಂದ ಬರುವ ಹಿರಿಯ ಪರಿಶೀಲನಾಧಿಕಾರಿಗಳ ಪರಿವೀಕ್ಷಣಾ ಸಮಯದಲ್ಲಿ ಎಲ್ಲಾ ದಾಖಲಾತಿಗಳನ್ನು ಲಭ್ಯವಾಗುವಂತೆ ಕ್ರಮವಹಿಸುವುದು.

**ಸಹಿ/-**

**ಆಯುಕ್ತರು, ಗ್ರಾಮೀಣಾಭಿವೃದ್ಧಿ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

# ಅನುಬಂಧ

## ವಿಷಯ ನಿರ್ವಹಣೆ/ಕಾಮಗಾರಿ ಕಡತದಲ್ಲಿ ಇರಬೇಕಾದ ದಾಖಲೆಯ ಪಟ್ಟಿ:

| ಕ್ರ. ಸಂ. | ದಾಖಲೆಗಳ ಪಟ್ಟಿ |
|---|---|
| 1 | ಚೆಕ್‌ಲಿಸ್ಟ್ ದಾಖಲೆಗಳು |
| 2 | ವಾರ್ಷಿಕ ಕ್ರಿಯಾಯೋಜನೆ / ಕಾಮಗಾರಿ ಗುಚ್ಛ ಪ್ರತಿ |
| 3 | ತಾಂತ್ರಿಕ ಅಂದಾಜು ಮತ್ತು ವಿನ್ಯಾಸದ ಪ್ರತಿ |
| 4 | ತಾಂತ್ರಿಕ ಮಂಜೂರಾತಿ |
| 5 | ಆಡಳಿತಾತ್ಮಕ/ಆರ್ಥಿಕ ಮಂಜೂರಾತಿ |
| 6 | ಒಗ್ಗೂಡಿಸುವಿಕೆ ಅನುದಾನಗಳು/ಇನ್‌ಪುಟ್ಸ್ ಇದ್ದಲ್ಲಿ |
| 7 | ಬೇಡಿಕೆ ಅರ್ಜಿ ನಮೂನೆ |
| 8 | ಕೆಲಸ ಹಂಚಿಕೆ ನಮೂನೆ |
| 9 | ಭರ್ತಿ ಮಾಡಿದ ಹಾಜರಾತಿ (e-NMRs) |
| 10 | ಅಳತೆ ಪುಸ್ತಕದ ಪ್ರತಿ |
| 11 | ಸಾಮಗ್ರಿ ದಾಸ್ತಾನು ಮತ್ತು ಬಳಕೆ ಪ್ರತಿ |
| 12 | ಕೂಲಿಕಾರರ ಪಟ್ಟಿ (Wage list) |
| 13 | ಕೂಲಿ ಮತ್ತು ಸಾಮಗ್ರಿ ಪಾವತಿಯ ಪಾವತಿ ಆದೇಶದ ಪ್ರತಿ (FTO) |
| 14 | ಸಾಮಗ್ರಿ ಬಿಲ್ಲು ಮತ್ತು ವೋಚರ್‌ಗಳು |
| 15 | ರಾಯಲ್ಟಿ ಪಾವತಿಯ ಸ್ವೀಕೃತಿ ಪ್ರತಿ |
| 16 | ಕಾಮಗಾರಿ/ಕಾರ್ಯಕ್ರಮದ ಮೂರು ಹಂತದ ಛಾಯಾ ಚಿತ್ರಗಳು (ಮುಂಚಿನ/ಪ್ರಗತಿ/ಮುಕ್ತಾಯ) |
| 17 | ಕಾಮಗಾರಿ ಮುಕ್ತಾಯದ ವರದಿ |
| 18 | ಹಾಜರಾತಿ ಪಟ್ಟಿ ಚಲನಾ ಚೀಟಿ |
| 19 | ಆಸ್ತಿ ಸೃಜನೆಯ ಜಿಯೋ–ಟ್ಯಾಗ್ ಛಾಯಾಚಿತ್ರಗಳು (ಕನಿಷ್ಠ ಒಂದು ಹಂತ) |
| 20 | ಕಾಮಗಾರಿ ಸಾಮಾಜಿಕ ಪರಿಶೋಧನೆ ವರದಿಯ ಪ್ರತಿ |
| 21 | ರಾಜ್ಯದ ವತಿಯಿಂದ ಸೂಚಿಸುವ ಇತರೆ ದಾಖಲೆಗಳು |

# ಕರ್ನಾಟಕ ಸರ್ಕಾರ

**ಸಂ. ಗ್ರಾಅಪ 837 ಗ್ರಾಪಂಅ 2019**

**ಕರ್ನಾಟಕ ಸರ್ಕಾರದ ಸಚಿವಾಲಯ,**
**ಬಹುಮಹಡಿ ಕಟ್ಟಡ,**
**ಬೆಂಗಳೂರು, ದಿನಾಂಕ: 25.10.2019**

## ಸುತ್ತೋಲೆ

**ವಿಷಯ:** 2019ರ ನವೆಂಬರ್ ಮಾಹೆಯಲ್ಲಿ ಮಕ್ಕಳ ವಿಶೇಷ ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಸುತ್ತೋಲೆ ಸಂ. ಗ್ರಾಅಪ 367 ಗ್ರಾಪಂಅ 2006, ದಿನಾಂಕ 18.09.2006.

2. ಸರ್ಕಾರದ ಸುತ್ತೋಲೆ ಸಂ. ಗ್ರಾಅಪ 108 ಗ್ರಾಪಂಅ 2007, ದಿನಾಂಕ 30.10.2007.

3. ಸರ್ಕಾರದ ಸುತ್ತೋಲೆ ಸಂ. ಗ್ರಾಅಪ 487 ಗ್ರಾಪಂಅ 2017, ದಿನಾಂಕ 29.08.2017, 17.10.2018.

ಉಲ್ಲೇಖಿತ ಸುತ್ತೋಲೆಗಳಲ್ಲಿ ಪ್ರತಿ ವರ್ಷ ನವೆಂಬರ್ ತಿಂಗಳಿನಲ್ಲಿ ಮಕ್ಕಳ ವಿಶೇಷ ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ ಅವುಗಳ ರೂಪುರೇಷೆ ಮತ್ತು ಗ್ರಾಮಸಭೆಗಳಲ್ಲಿ ಚರ್ಚಿಸಲ್ಪಡಬೇಕಾದ ವಿಷಯಗಳ ಬಗ್ಗೆ ವಿಸ್ತೃತವಾಗಿ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಮಾರ್ಗದರ್ಶನ ನೀಡಲಾಗಿದೆ.

ಮಕ್ಕಳ ರಕ್ಷಣೆ, ಸರ್ವಾಂಗೀಣಾಭಿವೃದ್ಧಿಗಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಲವು ಹತ್ತು ಯೋಜನೆಗಳನ್ನು ರೂಪಿಸಿವೆ. ಮಕ್ಕಳ ಹಕ್ಕುಗಳನ್ನು ರಕ್ಷಿಸುವುದು ಎಲ್ಲರ ಕರ್ತವ್ಯಾವಾಗಿರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳ ಹಕ್ಕುಗಳನ್ನು ರಕ್ಷಿಸಿ ಜಾರಿಗೊಳಿಸಲು ಅವರುಗಳ ಆಶೋತ್ತರಗಳು ಹಾಗೂ ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸೂಕ್ತ ಅವಕಾಶಗಳನ್ನು ಕಲ್ಪಿಸಲು ಮಕ್ಕಳಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಗ್ರಾಮ ಪಂಚಾಯತಿಗಳ ವತಿಯಿಂದ ಪ್ರತಿ ವರ್ಷ ನಡೆಸಲಾಗುತ್ತಿದೆ. ಈ ಬಗ್ಗೆ ಉಲ್ಲೇಖದ ಸರ್ಕಾರದ ಸುತ್ತೋಲೆಗಳಲ್ಲಿ ವಿವರವಾಗಿ ತಿಳಿಸಲಾಗಿದೆ. ಗ್ರಾಮ ಪಂಚಾಯತಿಗಳು ನಡೆಸುವ ಗ್ರಾಮಸಭೆಗಳಲ್ಲಿ ಮಕ್ಕಳ ಸ್ಥಿತಿಗತಿ, ಅವರುಗಳ ಅಭಿವೃದ್ಧಿ ಹಾಗೂ ಅವರುಗಳಿಗೆ ಸಂವಿಧಾನಾತ್ಮಕವಾಗಿ ಒದಗಿಸಿರುವ ಹಕ್ಕುಗಳ ಬಗ್ಗೆ ವಿಶೇಷವಾಗಿ ಚರ್ಚಿಸಿ, ಅವರುಗಳ ಬೇಡಿಕೆಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು ಗ್ರಾಮ ಪಂಚಾಯತಿಗಳು ಹಾಗೂ ಪೋಷಕರು, ಶಾಲಾ ಮುಖ್ಯಸ್ಥರುಗಳ ಜವಾಬ್ದಾರಿಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2019ರ ನವೆಂಬರ್ ಮಾಹೆಯಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳ ವತಿಯಿಂದ ಕಡ್ಡಾಯವಾಗಿ ಮಕ್ಕಳ ವಿಶೇಷ ಗ್ರಾಮ ಸಭೆಗಳನ್ನು ನಡೆಸಲು ತಿಳಿಸಲಾಗಿದೆ. ಮಕ್ಕಳ ವಿಶೇಷ ಗ್ರಾಮ ಸಭೆಗಳನ್ನು ನಡೆಸುವಾಗ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ತಿಳಿಸಲಾಗಿದೆ.

- ಮಕ್ಕಳ ವಿಶೇಷ ಗ್ರಾಮ ಸಭೆಗಳನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಹೆಚ್ಚು ದೊಡ್ಡದಾದ ಆವರಣವಿರುವ ಪ್ರೌಢ ಶಾಲೆಗಳಲ್ಲಿ ನಡೆಸುವುದು.
- ಗ್ರಾಮ ಸಭೆಗಳಲ್ಲಿ ಮಕ್ಕಳು ಕುಳಿತುಕೊಳ್ಳಲು ಆಸನ ವ್ಯವಸ್ಥೆ ಮಾಡುವುದು, ಮಾತನಾಡಲು ಧ್ವನಿವರ್ಧಕ ವ್ಯವಸ್ಥೆ ಮಾಡುವುದು. ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.
- ಮುಕ್ತವಾಗಿ ಭಾಗವಹಿಸಲು ಸೂಕ್ತ ವಾತಾವರಣ ಕಲ್ಪಿಸುವುದು.
- ಮಕ್ಕಳು ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಭಾಗವಹಿಸುವ ಎಲ್ಲಾ ಅಧಿಕಾರಿಗಳು ಹಾಗೂ ಶಾಲಾ ಮುಖ್ಯಸ್ಥರು, ಪೋಷಕರು ಗಮನವಿಟ್ಟು ಕೇಳಿಸಿಕೊಳ್ಳುವುದು.

- ಮಕ್ಕಳಿಗಾಗಿ ಕರೆಯಲಾದ ವಿಶೇಷ ಗ್ರಾಮ ಸಭೆಗಳಲ್ಲಿ ಬೇರೆ ಯಾವುದೇ ವಿಷಯಗಳನ್ನು ಚರ್ಚಿಸಲು ಅವಕಾಶ ನೀಡಬಾರದು.
- ಮಕ್ಕಳ ವಿಶೇಷ ಗ್ರಾಮ ಸಭೆಗಳಲ್ಲಿ ಗ್ರಾಮ ಪಂಚಾಯತಿ ಅಧಿಕರಿಗಳು, ಅಂಗನವಾಡಿ ಕಾರ್ಯಕರ್ತರು, ಶಾಲಾ ಮುಖ್ಯೋಪಾಧ್ಯಾಯರು, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಆರೋಗ್ಯ ಇಲಾಖೆ ಕಾರ್ಯಕರ್ತರು, ಯುವಕ ಯುವತಿ ಮಂಡಲದ ಮುಖ್ಯಸ್ಥರು, ಪೋಲೀಸ್ ಅದಿಕಾರಿಗಳು ಭಾಗವಹಿಸುವಂತೆ ನೋಡಿಕೊಳ್ಳುವುದು.
- ಮಕ್ಕಳ ವಿಶೇಷ ಗ್ರಾಮ ಸಭೆಗಳಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡುವುದು.
- ಉಚಿತ ಶಿಕ್ಷಣ, ಉಚಿತ ಆರೋಗ್ಯ, ಮಧ್ಯಾಹ್ನದ ಬಿಸಿಯೂಟ, ಉಚಿತ ಪುಸ್ತಕ, ಸಮವಸ್ತ್ರ, ಕ್ರೀಡಾ ಚಟುವಟಿಕೆಗಳು, ಗ್ರಂಥಾಲಯ ಸೌಕರ್ಯ, ಇತ್ಯಾದಿ ಸೌಕರ್ಯಗಳ ಬಗ್ಗೆ ಮಾಹಿತಿ ನೀಡುವುದು.
- ಬಾಲ್ಯ ವಿವಾಹ ನಿಷೇಧ ಕಾಯ್ದೆ, ಮಕ್ಕಳ ಸಾಕಾಣಿಕೆ ನಿಷೇಧದ ಕಾಯ್ದೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ, ಬಾಲಕಾರ್ಮಿಕ ಪದ್ಧತಿ ನಿಷೇಧ, ಜೀತ ಪದ್ಧತಿ ನಿಷೇಧ ಕಾಯ್ದೆಗಳ ಬಗ್ಗೆ ಅರಿವು ಮೂಡಿಸುವುದು.
- ವಿಶೇಷವಾಗಿ ಶಾಲೆಯಿಂದ ಹೊರಗುಳಿದ ಮಕ್ಕಳು (ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು), ವಿಕಲಚೇತನರು ಹಾಗೂ ಹೆಣ್ಣು ಮಕ್ಕಳು ಈ ಗ್ರಾಮ ಸಭೆಯಲ್ಲಿ ಭಾಗವಹಿಸಿ ಚರ್ಚಿಸಲು ಅವಕಾಶ ಕಲ್ಪಿಸುವುದು.
- ಮಕ್ಕಳು ವ್ಯಕ್ತಪಡಿಸುವ ಎಲ್ಲಾ ಅಭಿಪ್ರಾಯಗಳನ್ನು ದಾಖಲಿಸಿಕೊಳ್ಳಲು ಹಾಗೂ ಅವುಗಳ ಮೇಲೆ ಅನುಪಾಲನ ಕ್ರಮ ಕೈಗೊಳ್ಳಲು ವ್ಯವಸ್ಥೆ ಮಾಡುವುದು.
- ಮಕ್ಕಳ ವಿಶೇಷ ಗ್ರಾಮ ಸಭೆಗಳ ನಡವಳಿಗಳನ್ನು ಗ್ರಾಮ ಪಂಚಾಯತಿಯು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಅನುಪಾಲನ ಕ್ರಮಕ್ಕಾಗಿ ಕಳುಹಿಸಿಕೊಡುವುದು.
- ಮಕ್ಕಳ ವಿಶೇಷ ಗ್ರಾಮ ಸಭೆಗಳ ನಡವಳಿಗಳನ್ನು ಪಂಚತಂತ್ರದಲ್ಲಿ ಅಪ್‌ಲೋಡ್ ಮಾಡುವುದು.

ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಕಾರ್ಯನಿರ್ವಹಣಾಧಿಕಾರಿಗಳಿಗೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಕಾರ್ಯದರ್ಶಿಗಳಿಗೆ ಕಡ್ಡಾಯವಾಗಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ಏರ್ಪಡಿಸುವಂತೆ ಸೂಕ್ತ ನಿರ್ದೇಶನ ನೀಡಲು ಮತ್ತು ಗ್ರಾಮ ಸಭೆಗಳನ್ನು ಆಯೋಜಿಸಿದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

**ಸಹಿ/–**
**(ಎಸ್.ಎ.ಅಶ್ರಫುಲ್ ಹಸನ್)**
**ನಿರ್ದೇಶಕರು (ಪಂಚಾಯತ್ ರಾಜ್–1) ಹಾಗೂ**
**ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ**
**ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಉಪಗ್ರಹ ಆಧಾರಿತ ಉಪ ತರಬೇತಿ ಕೇಂದ್ರ (ಸಬ್ ಸ್ಟುಡಿಯೋ)ವನ್ನು ಮರು ಸಂಸ್ಥಾಪಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ರವರ ಪತ್ರ ಸಂಖ್ಯೆ:ರಾಗ್ರಾಸಂ.ಸಿಬ್ಬಂದಿ.ಸಿಆರ್–58/2011–12, ದಿನಾಂಕ:13–09–2019.

## ಪ್ರಸ್ತಾವನೆ :

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 45 ಗ್ರಾಮೂಸೌ 2018, ದಿನಾಂಕ: 17–12–2018ರ ಆದೇಶದಂತೆ, ಎಂ.ಜಿ.ಐ.ಆರ್.ಡಿ ಸಂಸ್ಥೆಯ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ (SPRC) ಆಡಳಿತ ಕಛೇರಿಯನ್ನು ಹಾಗೂ ಉಪಗ್ರಹ ಆಧಾರಿತ ಉಪ ತರಬೇತಿ ಕೇಂದ್ರ (ಸಬ್ ಸ್ಟುಡಿಯೋ)ನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಕಟ್ಟಡ, ಗಾಂಧಿನಗರ, ಬೆಂಗಳೂರು ಇಲ್ಲಿಗೆ ಸ್ಥಳಾಂತರಿಸುವ ಸಲುವಾಗಿ ಅನುಮತಿಯನ್ನು ನೀಡಲಾಗಿರುತ್ತದೆ. ಅದರಂತೆ, ಸದರಿ ಕಛೇರಿಯನ್ನು ಪ್ರಾರಂಭಿಸುವ ಸಲುವಾಗಿ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಆರ್.ಐ.ಡಿ.ಎಲ್, ಬೆಂಗಳೂರುರವರು SPRC ಆಡಳಿತ ಕಛೇರಿ ಕಟ್ಟಡದ ದುರಸ್ಥಿಗಾಗಿ ರೂ.5.40ಲಕ್ಷಗಳಿಗೆ ಮತ್ತು ಉಪಗ್ರಹ ಆಧಾರಿತ ಉಪ ತರಬೇತಿ ಕೇಂದ್ರ (ಸಬ್ ಸ್ಟುಡಿಯೋ)ವನ್ನು ಮರು ಸಂಸ್ಥಾಪಿಸಲು ರೂ.41.60 ಲಕ್ಷಗಳಿಗೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಮತ್ತು ಕಾಮಗಾರಿಯನ್ನು ಕೈಗೊಳ್ಳಲು ಮುಂಗಡ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಕೆ.ಆರ್.ಐ.ಡಿ.ಎಲ್., ಬೆಂಗಳೂರು ವಿಭಾಗರವರು ಉಪಗ್ರಹ ಆಧಾರಿತ ಉಪ ತರಬೇತಿ ಕೇಂದ್ರ (ಸಬ್ ಸ್ಟುಡಿಯೋ)ವನ್ನು ಮರು ಸಂಸ್ಥಾಪಿಸಲು ಸಲ್ಲಿಸಿರುವ ಅಂದಾಜುಪಟ್ಟಿ ಮೊತ್ತ ರೂ.41.00ಲಕ್ಷಗಳನ್ನು ದಿನಾಂಕ: 11–03–2011ರ ಪತ್ರದಲ್ಲಿ ಬೆಂಗಳೂರಿನ ಜಕ್ಕೂರಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದ ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರದ ಕಟ್ಟಡದ ನಿರ್ಮಾಣಕ್ಕಾಗಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್., ಬೆಂಗಳೂರುರವರಿಗೆ ಮುಂಗಡವಾಗಿ ರೂ.4.00ಕೋಟಿಗಳನ್ನು ಈ ಸಂಸ್ಥೆಯಿಂದ ದಿನಾಂಕ:14–03–2011 ರಂದು ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳಲು ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯವರು ದಿನಾಂಕ:05–08–2019ರ ಪತ್ರದಲ್ಲಿ ರಾಜ್ಯ ಸರ್ಕಾರದ ಯಾವುದಾದರೂ ಯೋಜನೆಯಲ್ಲಿ ಲಭ್ಯವಿರುವ ಅನುದಾನದಿಂದ ಮೊತ್ತ ಬಿಡುಗಡೆ ಮಾಡುವುದು ಅಥವಾ ಸಂಸ್ಥೆಯ ಸ್ಯಾಟ್‌ಕಾಂ ನಿಧಿಯಲ್ಲಿ ಲಭ್ಯವಿರುವ ಉಳಿತಾಯ ನಿಧಿಯಿಂದ ಭರಿಸಲು ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 445 ಜಿಪಸ 2019(ಭಾಗ–1), ಬೆಂಗಳೂರು, ದಿನಾಂಕ:12–11–2019.**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಎಂ.ಜಿ.ಐ.ಆರ್.ಡಿ ಸಂಸ್ಥೆಯ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ (SPRC) ಆಡಳಿತ ಕಛೇರಿಯನ್ನು ಹಾಗೂ ಉಪಗ್ರಹ ಆಧಾರಿತ ಉಪ ತರಬೇತಿ ಕೇಂದ್ರ (ಸಬ್ ಸ್ಟುಡಿಯೋ)ವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಕಟ್ಟಡ, ಗಾಂಧಿನಗರ, ಬೆಂಗಳೂರು ಇಲ್ಲಿಗೆ ಸ್ಥಳಾಂತರಿಸಲಾಗಿದ್ದು, ಉಪಗ್ರಹ ಆಧಾರಿತ ಉಪ ತರಬೇತಿ ಕೇಂದ್ರ (ಸಬ್ ಸ್ಟುಡಿಯೋ)ವನ್ನು ಮರು ಸಂಸ್ಥಾಪಿಸಲು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ಕೆ.ಟಿ.ಪಿ.ಪಿ ನಿಯಮಗಳನ್ವಯ ಕರ್ನಾಟಕ ರಾಜ್ಯ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಐ.ಡಿ.ಎಲ್) ಮುಖಾಂತರ ಸ್ಯಾಟ್‌ಕಾಂ ನಿರ್ವಹಣೆ ಅನುದಾನದಲ್ಲಿ ರೂ.41.00ಲಕ್ಷಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು ಕಡತ ಸಂಖ್ಯೆ:ಗ್ರಾಅಪ 445 ಜಿಪಸ 2019(1) ಕಂಡಿಕೆ–22 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**ಸಹಿ/–**
**(ಕೆ.ಎಸ್ ಮಹಾಲಕ್ಷ್ಮೀ)**
**ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ**




# ಗಾಂಧಿಗ್ರಾಮ ಪುರಸ್ಕೃತ ಅಭಿವೃದ್ಧಿಯ ಒಂದು ನೋಟ






# KARNATAKA VIKAS : NOVEMBER 2019

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2018-20, License of Post "without Prepayment" WPP - 32
Date of Publication : 8th of Every Month.
RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru
on 11th or 19th or 23rd of every month.




**ಎಂಜಿಎನ್‌ಆರ್‌ಇಜಿಎ ಬ್ಲಾಕ್ ಪ್ಲಾಂಟೇಷನ್**

ಮಾಳವಿ ಗ್ರಾ.ಪಂ., ಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.


Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Chief Editor
**Gagan A.S**

Place & Publication
**Karnataka Vikas**
No.309, 3rd Floor, Gate No.1
M.S.Building, Dr. Ambedkar Veedhi,
Bengaluru - 560 001.

Printed by
**LAVANYA MUDRANA**
No.19, 15th Cross, BSK 1 Stage
Bengaluru - 560050
Mob: 98450 63381

Price : ₹ 10.00
ಬೆಲೆ :